ಮಾನವಿಕ ಕರ್ನಾಟಕ

ಸಂಪುಟ ೩೬ ಸಂಚಿಕೆ ೪



ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಮಾನವಿಕ ಕರ್ಣಾಟಕ

ಸಂಪುಟ ೩೭ - ಸಂಚಿಕೆ - ೪

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೨೦೦೮

manavika karnataka : A Kannada Quarterly of the University of Mysore, Volume 36, No. 4, Edited by Prof. Aravindamalagatti, Prof. V.N. Sheshagiri Rao and Prof. R. Ramakrishna, Published by the Director, Prasaranga, University of Mysore, Manasagangotri, Mysore - 570 006

ಪ್ರಧಾನ ಸಂಪಾದಕರು
ಪ್ರೊ. ಸಿ. ನಾಗಣ್ಣ
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ
ಮೈಸೂರು ೫೭೦ ೦೦೬

ಸಂಪಾದಕರು
ಪ್ರೊ. ವಿ.ಎನ್. ಶೇಷಗಿರಿರಾವ್
ಪ್ರೊ. ಅರವಿಂದ ಮಾಲಗತ್ತಿ
ಪ್ರೊ. ಆರ್. ರಾಮಕೃಷ್ಣ

ಪ್ರಕಾಶಕರು ಮತ್ತು ಮುದ್ರಕರು
ಪ್ರೊ. ಸಿ. ನಾಗಣ್ಣ
ನಿರ್ದೇಶಕರು
ಪ್ರಸಾರಾಂಗ ಮತ್ತು ವಿಶ್ವವಿದ್ಯಾನಿಲಯ ಮುದ್ರಣಾಲಯ
ಮಾನಸಗಂಗೋತ್ರಿ, ಮೈಸೂರು - ೫೦೦ ೦೦೬

ಪ್ರಕಾಶಕರ ಮಾತು

ಮೈಸೂರು ವಿಶ್ವವಿದ್ಯಾನಿಲಯ ನಿರಂತರ ಜ್ಞಾನ ಪ್ರಸಾರಕ್ಕಾಗಿ ಕೈಗೊಂಡ ಹಲವು ಪ್ರತಿಷ್ಠಿತ – ಮೌಲಿಕ ಯೋಜನೆಗಳಲ್ಲಿ ನಿಯತ ಕಾಲಿಕೆಗಳ ಸಂಪಾದನೆ ಹಾಗೂ ಪ್ರಕಟಣೆಯೂ ಒಂದು. 'ಮಾನವಿಕ ಕರ್ಣಾಟಕ'ದ ೩೬ನೇ ಸಂಪುಟದ ೪ನೆಯ ಸಂಚಿಕೆ ಮುದ್ರಣವಾಗಿದೆ. ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಉಪಯುಕ್ತ ಶೋಧಿತ ವಿವರಣಾತ್ಮಕ ಲೇಖನಗಳು ಈ ಸಂಚಿಕೆಯಲ್ಲಿವೆ.

'ಪ್ರಬುದ್ಧ ಕರ್ಣಾಟಕ' ಮತ್ತು 'ಮಾನವಿಕ ಕರ್ಣಾಟಕ' ನಾಡಿನ ಶ್ರೇಷ್ಠ ನಿಯತ ಕಾಲಿಕಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ. ಈ ಪತ್ರಿಕೆಗಳನ್ನು ಹೊರತರುವಲ್ಲಿ ವಿಶೇಷ ಆಸಕ್ತಿ ತೋರಿರುವ ಮಾನ್ಯ ಕುಲಪತಿಗಳಾದ ಪ್ರೊ. ವಿ.ಜಿ. ತಳವಾರ್ ಮತ್ತು ಕುಲಸಚಿವರಾದ ಪಿ.ಎಸ್. ನಾಯಕ್ ಅವರಿಗೆ ನಾನು ಅಭಾರಿಯಾಗಿದ್ದೇನೆ. ಅವರು ವಿಶೇಷ ಆಸಕ್ತಿ ತೋರಿದ್ದಾರೆ. ಈ ಸಂಚಿಕೆಯನ್ನು ಪ್ರೊ. ಅರವಿಂದ ಮಾಲಗತ್ತಿ, ಪ್ರೊ. ವಿ.ಎನ್. ಶೇಷಗಿರಿರಾವ್ ಮತ್ತು ಪ್ರೊ. ಆರ್. ರಾಮಕೃಷ್ಣರವರು ಅಚ್ಚುಕಟ್ಟಾಗಿ ಸಂಪಾದಿಸಿ ಕೊಟ್ಟಿದ್ದಾರೆ. ಇವರೆಲ್ಲರಿಗೂ ಈ ಸಂಚಿಕೆಯ ಲೇಖಕರಿಗೂ ನಮ್ಮ ಧನ್ಯವಾದಗಳು. ಇದರ ಅಕ್ಷರಜೋಡಣೆ ಕೆಲಸವನ್ನು ಮಾಡಿಕೊಟ್ಟ ಪ್ರಸಾರಾಂಗದ ಅಕ್ಕರಮನೆಯ ಸಿಬ್ಬಂದಿಗೂ ಶುದ್ಧವಾಗಿ ಕರಡನ್ನು ನೋಡಿದ ಕರಡು ಪರಿಶೀಲಕರಾದ ಶ್ರೀಮತಿ ಟಿ. ಕಮಲಮ್ಮ ಅವರಿಗೂ ಮುದ್ರಿಸಿಕೊಟ್ಟಿರುವ ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೂ ಈ ಎಲ್ಲ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಪ್ರಸಾರಾಂಗದ ಸಿಬ್ಬಂದಿ ವರ್ಗದವರಿಗೂ ನನ್ನ ಹಾರ್ದಿಕ ವಂದನೆಗಳು.

ಪ್ರೊ. ಸಿ. ನಾಗಣ್ಣ

ಸಂಪಾದಕರ ಮಾತು

ಮಾನವಿಕ ಕರ್ಣಾಟಕದ ೩೬ನೆಯ ಸಂಪುಟದ ೪ನೆಯ ಸಂಚಿಕೆಯನ್ನು ತಮ್ಮ ಕೈಯೊಳಗಿಡಲು ಸಂತೋಷವೆನಿಸುತ್ತದೆ. ಪಂಡಿತೋತ್ತಮರನ್ನೇ ಹೆಚ್ಚಾಗಿ ತಲುಪುವ ಇಂಥ ಸಂಶೋಧನಾ ನಿಯತಕಾಲಿಕಗಳಿಗೆ ಸೂಕ್ತ ಲೇಖನಗಳ ಕೊರತೆಯೇ ಅವುಗಳು ಸೊರಗಲು ಹಾಗೂ ನಿಯತಕಾಲಿಕೆವಾಗಿ ಪ್ರಕಟಗೊಳ್ಳದಿರಲು ಕಾರಣವಾಗುತ್ತವೆ ಎನ್ನಬೇಕು. ಬಂದದ್ದನ್ನು ಪ್ರಕಟಿಸುವುದಕ್ಕಿಂತ, ಕಾದು, ಆಯ್ದು ಪ್ರಕಟಿಸುವ ಹೆಬ್ಬಾಸೆಯಿಂದ ಸಂಚಿಕೆಗಳು ಹೊರಬರಲು ತಡವಾಗಿದೆ.

ಈಚಿನ ವರ್ಷಗಳಲ್ಲಿ ಕಲಾನಿಯತಕಾಲಿಕೆಗಳಿಗೆ ಬರೆಯುವವರೇ ಕನ್ನಡದಲ್ಲಿ ಕಡಿಮೆಯಾಗಿದ್ದಾರೆ. ಬೇರೆ ಬೇರೆ ವಿಭಾಗಗಳಲ್ಲಿ ಸಂಶೋಧನೆ ಮಾಡುತ್ತಿರುವವರು ಅದರ ಭಾಗವಾಗಿ ಹಾಗೂ ಸಂಶೋಧನಾ ಲೇಖನ ಪ್ರಕಟಿಸದಿದ್ದರೆ ಪದೋನ್ನತಿಯಿಲ್ಲ ಎಂಬ ಸ್ಥಿತಿಯಲ್ಲಿ ಅನಿವಾರ್ಯವಾಗಿ ಲೇಖನಗಳನ್ನು ಬರೆಯುತ್ತಿರುವಂತೆ ಕಾಣುತ್ತಿದೆ. ಹೊಸತನದ, ಹೊಸ ಸಂಶೋಧನೆಗಳ ಫಲಗಳಾದ ಉತ್ಕೃಷ್ಟ ಮಟ್ಟದ ಲೇಖನಗಳು ಮಾನವಿಕ ಕರ್ಣಾಟಕಕ್ಕೆ ಬರುತ್ತಿಲ್ಲವೆಂಬ ಕೊರಗು ನಮ್ಮದಾಗಿದೆ. ಪ್ರಕಟಣೆಗೆ ಬರುತ್ತಿರುವ ಲೇಖನಗಳ ಭಾಷೆಯೂ ಗಾಬರಿಹುಟ್ಟಿಸುವಂತಿದೆ. ಈಗಷ್ಟೇ ಸುವರ್ಣ ಮಹೋತ್ಸವವನ್ನು ಮುಗಿಸಿರುವ ಕರ್ಣಾಟಕದ ಸಂದರ್ಭಕ್ಕೆ ಇದು ಒಳ್ಳೆಯ ಬೆಳವಣಿಗೆಯೇನಲ್ಲ. ಮುಂದೆಯಾದರೂ ಮಾನವಿಕಗಳಲ್ಲಿ ಆಸಕ್ತರು ತಪ್ಪಿಲ್ಲದ ಬರವಣಿಗೆಯತ್ತ ಗಮನಹರಿಸುವರೆಂದು ಆಶಿಸುತ್ತೇವೆ.

ಈ ಸಂಚಿಕೆಯಲ್ಲಿ ಒಟ್ಟು ಹನ್ನೆರಡು ಲೇಖನಗಳಿವೆ. ಮೊದಲಿನದು 'ವಿಶಿಷ್ಟಾದ್ವೈತ ದರ್ಶನದಲ್ಲಿ ಧರ್ಮಭೂತಜ್ಞಾನ' ಕುರಿತಾದುದು. ವಿಶಿಷ್ಟಾದ್ವೈತದ ಪ್ರಕಾರ ಎಲ್ಲ ಜ್ಞಾನವು ಸ್ವಯಂ ಪ್ರಕಾಶವುಳ್ಳ ಹಾಗೂ ಅಚೇತನ ದ್ರವ್ಯವಾಗಿದ್ದು ವಿಷಯಗಳನ್ನು ತಿಳಿಯಪಡಿಸುವುದಾಗಿರುತ್ತದೆ. ಪ್ರಸ್ತುತ ಲೇಖನದಲ್ಲಿ ಲೇಖಕರು ಧರ್ಮಭೂತ ಜ್ಞಾನದ ಲಕ್ಷಣಗಳು, ಅದರ ಉದ್ದೇಶ ಹಾಗೂ ಸಾಧನೆಯ ಕುರಿತು ವಿಸ್ತೃತವಾಗಿ ಬರೆದಿದ್ದಾರೆ.

ಎರಡನೆಯ ಲೇಖನ 'ಹುಣಸೂರು ತಾಲ್ಲೂಕಿನ ಐತಿಹಾಸಿಕ ಹಿನ್ನೆಲೆ' ಕುರಿತಾಗಿದೆ. ಹಿಂದೆ ಪುನ್ನಾಟ ಎಂಬ ಹೆಸರಿನಿಂದ ಚರಿತ್ರೆಯಲ್ಲಿ ದಾಖಲಾಗಿರುವ ಹುಣಸೂರಿಗೆ ಮಹತ್ವದ ಸ್ಥಾನವಿದೆ. ಈ ಲೇಖನದಲ್ಲಿ ಲೇಖಕರು ಹುಣಸೂರು ತಾಲ್ಲೂಕಿನ ಚಾರಿತ್ರಿಕ ವಿಶೇಷಗಳನ್ನೂ ಇಲ್ಲಿ ಆಳಿದ ರಾಜಮನೆತನಗಳನ್ನೂ ವಿವರವಾಗಿ ಚಿತ್ರಿಸಿದ್ದಾರೆ. ಇದು ಮಾನವಿಕ ವಿದ್ಯಾರ್ಥಿಗಳಿಗೆ ಪರಾಮರ್ಶನಕ್ಕೆ ದಕ್ಕುವ ಲೇಖನವಾಗಿದೆ.

ಮೂರನೆಯ ಲೇಖನ 'ಕರ್ನಾಟಕದ ಪ್ರವಾಸೋದ್ಯಮದ ಸಾಧನೆ-ಸಾಧ್ಯತೆಗಳ' ಕುರಿತಾದ ಸಮಕಾಲೀನ ಲೇಖನವಾಗಿದೆ. ಇಂದು ಆಧುನಿಕ ಯುಗದಲ್ಲಿ ಪ್ರವಾಸೋದ್ಯಮಕ್ಕೆ ಮಹತ್ತ್ವದ ಸ್ಥಾನವಿದೆ. ದೇಶಕ್ಕೆ ವಿದೇಶೀ ವಿನಿಮಯ ತರುವ ಕ್ಷೇತ್ರ ಇದಾಗಿದೆ. ಕರ್ನಾಟಕದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶಗಳಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಆಗಿಲ್ಲವೆಂದು ಲೇಖಕರು ವಿಷಾದಿಸುತ್ತಾರೆ.

ನಾಲ್ಕನೆಯ ಲೇಖನ 'ಗೌರಿ ಪುರದ ಉಮಾಮಹೇಶ್ವರ ದೇವಾಲಯ'ಕ್ಕೆ ಸಂಬಂಧಿಸಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಿಂದ ೨೨ ಕಿ.ಮೀ. ದೂರದಲ್ಲಿರುವ ಈ ಕ್ಷೇತ್ರ ಪೌರಾಣಿಕವಾಗಿಯೂ ಶಿಲ್ಪಕಲೆಗಳ ದೃಷ್ಟಿಯಿಂದಲೂ ಮುಖ್ಯವಾಗಿದೆ.

ಐದನೆಯ ಲೇಖನ 'ಕಣ್ಣುಕಾಣದ ಗಾವಿಲರು'. ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಹೆಣ್ಣಿನ ಬಗ್ಗೆ ಸಮಾಜ ತಳೆದಿರುವ ಭಾವವನ್ನು ದಾಖಲಿಸುವ ಹಾಗೂ ವಿಶ್ಲೇಷಿಸುವ ಪ್ರಯತ್ನ ಮಾಡುತ್ತದೆ. ಜಾನಪದರಲ್ಲಿ ಹೆಣ್ಣಿನ ಬಗ್ಗೆ ಇರುವ ಮನೋಭಾವವನ್ನು ವಚನಕಾರರಲ್ಲಿ ಇರುವ ಭಾವನೆಯನ್ನು ಉದಾಹರಣೆಗಳ ಸಮೇತ ವಿವರಿಸಿದ್ದು ಇದೊಂದು ಮೌಲಿಕ ಲೇಖನವಾಗಿದೆ.

ಆರನೆಯ ಲೇಖನ 'ಕೆ.ಸಿ. ಭಟ್ಟಾಚಾರ್ಯರ ತತ್ತ್ವಜ್ಞಾನದಲ್ಲಿ ಸೈದ್ಧಾಂತಿಕ ಪ್ರಜ್ಞೆ' ಎಂಬುದು. ಇದು ಸೈದ್ಧಾಂತಿಕ ಪ್ರಜ್ಞೆಯ ಬಗ್ಗೆ ಅನೇಕ ವಿಷಯಗಳನ್ನು ಹೊರಗೆಡಹುತ್ತದೆ.

ಏಳನೆಯ ಲೇಖನ 'ಚಾಡಿ ಹೇಳಲು ಬೇಡ ನಾಲಿಗೆ'. ಇದು ಸಮಾಜದಲ್ಲಿ ಚಾಡಿಯ ಮಾತು ಬೀರುವ ಅವ್ಯವಸ್ಥೆಯನ್ನು, ಕ್ಲೇಷ ಸಂಕಟಗಳನ್ನು ಸೋದಾಹರಣೆಗಳೊಂದಿಗೆ ಬಹಳ ಚೆನ್ನಾಗಿ ಚಿತ್ರಿಸುತ್ತದೆ.

ಎಂಟನೆಯ ಲೇಖನ 'ದಾರ್ಶನಿಕ ಸಂತ ಕವಿ ಷರೀಫ'. ಕ್ರಾಂತಿಕಾರಿ ಕವಿ, ಚಿಂತಕ, ದಾರ್ಶನಿಕರಾದ ಷರೀಫರ ಒಳಗಣ್ಣನ್ನು ಇಲ್ಲಿ ಕಾಣಬಹುದಾಗಿದೆ.

ಒಂಬತ್ತನೆಯ ಲೇಖನ 'ಅಬ್ಬೂರಿನ ಶ್ರೀ ಬ್ರಹ್ಮಣ್ಯ ತೀರ್ಥರು ಮತ್ತು ಮೊದಲ ಕಲ್ಲು ಶ್ರೀ ಶೇಷದಾಸರು' ಕುರಿತಾಗಿದೆ.

ಹತ್ತನೆಯ ಲೇಖನ 'ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಧರ್ಮ ಮತ್ತು ಅದರ ಸ್ವರೂಪ'. ಧರ್ಮವನ್ನು ಕುರಿತು ಹೆಸರಾಂತ ಚಿಂತಕರಾದ ಡಾ. ಅಂಬೇಡ್ಕರರ ನಿಲುವುಗಳೇನೆಂಬುದನ್ನು ಇಲ್ಲಿ ಸಂಗ್ರಹವಾಗಿ ವಿಶ್ಲೇಷಿಸಲಾಗಿದೆ.

ಹನ್ನೊಂದನೆಯ ಲೇಖನ ಪ್ರಸ್ತುತ ಭಾರತದ ಸಂದರ್ಭದಲ್ಲಿ 'ಗಾಂಧೀಜಿಯವರ ರಾಜಕೀಯ ಚಿಂತನೆಗಳ ಮಹತ್ವ' . ಗಾಂಧೀಜಿಯವರ ರಾಜಕೀಯ ಚಿಂತನೆಗಳು

ಅವರ ಸಾಮಾಜಿಕ ಚಿಂತನೆಗಳಷ್ಟೇ ಮೌಲಿಕವಾದವುಗಳು. ಅವುಗಳ ತಾರ್ಕಿಕ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ.

ಹನ್ನೆರಡನೆಯ ಲೇಖನ 'ಗಾಂಧೀಜಿಯವರ ಆರ್ಥಿಕ ಚಿಂತನೆಗಳ ಪ್ರಭಾವ'ವನ್ನು ಕುರಿತದ್ದು. ಬದನವಾಳುವಿನ ಖಾದಿ ಕೇಂದ್ರದ ಸ್ಥಾಪನೆ ಮತ್ತು ಬೆಳೆವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಲೇಖನ ಸಿದ್ಧವಾಗಿದೆ.

ಈ ಎಲ್ಲಾ ಲೇಖನಗಳು ತಮ್ಮ ಅರಿವಿನ ಸೀಮೆಯನ್ನು ವಿಸ್ತರಿಸಲು ನೆರವಾಗುವವೆಂದು ನಂಬುತ್ತೇವೆ.

– ಪ್ರೊ. ಅರವಿಂದ ಮಾಲಗತ್ತಿ
ಪ್ರೊ. ವಿ.ಎನ್. ಶೇಷಗಿರಿರಾವ್
ಪ್ರೊ. ಆರ್. ರಾಮಕೃಷ್ಣ

ಪರಿವಿಡಿ

೧. ವಿಶಿಷ್ಟಾದ್ವೈತ ದರ್ಶನದಲ್ಲಿ ಧರ್ಮಭೂತಜ್ಞಾನ

ಡಾ. ಧನ್ಯಕುಮಾರ ಬ. ಜಾಧವ

ಎಲ್ಲ ಭಾರತೀಯ ದಾರ್ಶನಿಕ ಪಂಥಗಳಲ್ಲಿ ಜ್ಞಾನದ ಪರಿಕಲ್ಪನೆಯು ಮುಖ್ಯ ಚರ್ಚಾ ವಿಷಯವಾಗಿದೆ. ಅಂತಹ ದಾರ್ಶನಿಕ ಪಂಥವು ನಿರೀಶ್ವರವಾದವಾಗಿರ ಬಹುದು ಅಥವಾ ಸೇಶ್ವರವಾದವಾಗಿರಬಹುದು ಅಥವಾ ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಯಾವುದೇ ಆಗಿರಬಹುದು. ಜ್ಞಾನವು ಜ್ಞಾನಮೀಮಾಂಸೆಯ ಇತರ ಪರಿಕಲ್ಪನೆಗಳಾದ ಜ್ಞಾತೃ (ತಿಳಿಯುವವನು) ಮತ್ತು ಜ್ಞೇಯ (ತಿಳಿಯಲ್ಪಡುವ ವಸ್ತು) ಇವುಗಳೊಡನೆ ನಿಕಟ ಸಂಬಂಧವನ್ನು ಹೊಂದಿದ್ದು, ಇವು ಮೂರು ಕೂಡಿದ್ದೇ ತ್ರಿಪುಟಿ ಎನಿಸಿಕೊಳ್ಳುತ್ತದೆ. ಬುದ್ಧಿ, ಮನೀಷಾ, ಧಿಷಣಾ, ಧೀಃ, ಪ್ರಜ್ಞಾ ಶೇಮುಷೀ, ಮತಿ ಮತ್ತು ಸಂವಿತ್ ಇವು ಜ್ಞಾನದ ಪರ್ಯಾಯ ಪದಗಳಾಗಿವೆ. ಜ್ಞಾತೃ ಮತ್ತು ಜ್ಞೇಯಗಳ ಸಂಬಂಧದಿಂದ ಜ್ಞಾನವು ಹುಟ್ಟುತ್ತದೆ ಎಂಬುದು ಪ್ರಮಾಣದ ಮೂಲಕ ಎಲ್ಲರಿಗೂ ಸ್ವೀಕಾರಾರ್ಹವಾದುದು. ಏಕೆಂದರೆ, "ನನಗೆ ಅದು ಗೊತ್ತಾಗಿದೆ" ಎಂಬ ಮುಂತಾದ ಅನುಭವದ ಮಾತುಗಳಿಂದ ವ್ಯಕ್ತವಾಗುತ್ತದೆ.

ಧರ್ಮಭೂತ ಜ್ಞಾನದ ಅರ್ಥ

ವಿಶಿಷ್ಟಾದ್ವೈತದ ಪ್ರಕಾರ ಎಲ್ಲ ಜ್ಞಾನವು ಸ್ವಯಂ ಪ್ರಕಾಶವುಳ್ಳ ಹಾಗೂ ಅಚೇತನ ದ್ರವ್ಯವಾಗಿದ್ದು, ವಿಷಯಗಳನ್ನು ತಿಳಿಯಪಡಿಸುವುದೋ ಅದು ಧರ್ಮ ಭೂತ ಜ್ಞಾನವಾಗಿರುತ್ತದೆ. ಅದು ಪ್ರಭೆಯಂತೆ ದ್ರವ್ಯವಾಗಿ, ಗುಣವಾಗಿ, ವಿಭುವಾಗಿರುತ್ತದೆ, ಅಲ್ಲದೆ, ಆತ್ಮದ ಸ್ವಾಭಾವಿಕ ಗುಣವಾದ ಜ್ಞಾನವೇ ಧರ್ಮಭೂತಜ್ಞಾನ ಎನಿಸಿಕೊಳ್ಳುತ್ತದೆ. ಇದರಿಂದ 'ಧರ್ಮೀಜ್ಞಾನಂ' ಅಂದರೆ ಆತ್ಮದ ದ್ರವ್ಯಾತ್ಮಕ ಜ್ಞಾನ ಇದೆ ಎಂಬುದು ಅರ್ಥವಾಗುತ್ತದೆ.

ಧರ್ಮಭೂತ ಜ್ಞಾನದ ಲಕ್ಷಣಗಳು

ಧರ್ಮಭೂತಜ್ಞಾನವು ವಿಶೇಷಣ (ಗುಣ)ವೂ ಹೌದು ಮತ್ತು ದ್ರವ್ಯವೂ ಹೌದು. ಏಕೆಂದರೆ ಅದು ಸ್ವಭಾವತಃ ಮತ್ತೊಂದನ್ನು ಅಂದರೆ ಆತ್ಮವನ್ನು ಅವಲಂಬಿಸುತ್ತದೆ. ಯಾವುದು ಮತ್ತೊಂದು ವಸ್ತುವನ್ನು ಅವಲಂಬಿಸುತ್ತದೆಯೋ ಅದು ನಿಜವಾಗಿಯೂ ಆ ವಸ್ತುವಿನ ಗುಣ (ವಿಶೇಷಣ) ಎನಿಸಿಕೊಳ್ಳುತ್ತದೆ.

ಅದು ಇನ್ನೊಂದು ರೀತಿಯಿಂದ ದ್ರವ್ಯ (ವಸ್ತು). ಏಕೆಂದರೆ ಯಾವ ರೀತಿಯಾಗಿ ಹಾವು ತನ್ನ ದೇಹವನ್ನು ಸುರುಳಿ ಸುತ್ತಿಕೊಳ್ಳುವ ಮೂಲಕ ಮತ್ತು ಉದ್ದಕ್ಕೆ ಚಾಚಿಕೊಳ್ಳುವ ಮೂಲಕ ಹೇಗೆ ಸಂಕೋಚ ಮತ್ತು ವಿಕಸನಕ್ಕೊಳಗಾಗುತ್ತದೆಯೋ ಹಾಗೆಯೇ ಧರ್ಮಭೂತಜ್ಞಾನವು ಅರಿವಿನ ಸಂಕೋಚ ವಿಕಾಸಗಳೆಂಬ ಅವಸ್ಥೆಗಳಿಗೆ ಆಶ್ರಯಿಯಾಗಿದೆ.

ಜ್ಞಾನವು ನಿತ್ಯವಾದ ಪಕ್ಷದಲ್ಲಿ 'ಜ್ಞಾನ ಉಂಟಾಯಿತು, ಜ್ಞಾನ ಹೋಯಿತು' ಮುಂತಾದ ವ್ಯವಹಾರಗಳು ಸರಿಯಾದವೆಂದು ಕೇಳಿದರೆ ಇಲ್ಲಿ ಯಾವ ವಿರೋಧವಿಲ್ಲ. ಏಕೆಂದರೆ ಸಂಕೋಚಾವಸ್ಥೆ ಮತ್ತು ವಿಕಾಸಾವಸ್ಥೆಯ ದೃಷ್ಟಿಯಿಂದ ಜ್ಞಾನದ ಉತ್ಪತ್ತಿನಾಶಗಳು ಸಂಭವಿಸುತ್ತವೆ. ಚರ್ಮದ ಚೀಲದ ರಂಧ್ರದ ಮೂಲಕ ನೀರು ಪ್ರವಿಸುವಂತೆ ಜ್ಞಾನವೂ ಕೂಡ ಇಂದ್ರಿಯಗಳ ಮುಖಾಂತರ ಹರಿದು ಪದಾರ್ಥಗಳೊಡನೆ ಸಂಪರ್ಕವನ್ನು ಹೊಂದುತ್ತದೆ. ಜ್ಞಾನದ ಸಂಕೋಚ ವಿಕಾಸಗಳು ಸರ್ಪದ ಸುರುಳಿಗಳಂತೆ ಸುತ್ತಿಕೊಂಡಿದೆ.

ಪ್ರತ್ಯಕ್ಷ, ಅನುಮಾನ, ಆಗಮ, ಸ್ಮೃತಿ, ಸಂಶಯ, ವಿಪರ್ಯಯ, ಭ್ರಮೆ, ವಿವೇಕ, ವ್ಯವಸಾಯ, ಮೋಹ, ರಾಗ, ದ್ವೇಷ, ಮದ, ಮಾತ್ಸರ್ಯ, ಧೈರ್ಯ, ಚಾಪಲ್ಯ, ಡಂಭ, ಲೋಭ, ಕ್ರೋಧ, ದರ್ಪ, ದುರ್ಮತಿ, ಸುಪ್ರೀತಿ, ತುಷ್ಟಿ, ಉನ್ನತಿ, ಶಾಂತಿ, ವಿರಕ್ತಿ, ರತಿ, ಮೈತ್ರಿ, ದಯಾ, ಮುಮುಕ್ಷಾ, ಲಜ್ಜಾ, ತಿತಿಕ್ಷಾ, ವಿಚಾರಣ, ಮುದಿತಾ, ಕ್ಷಮಾ, ಚಿಕೀರ್ಷಾ, ಜಿಗುಪ್ಸಾ, ಭಾವನಾ, ಅಸೂಯಾ, ತೃಷ್ಣಾ, ದುರಾಶಾ, ವಾಸನಾ, ಚರ್ಚಾ, ಶ್ರದ್ಧಾ, ಭಕ್ತಿ, ಪ್ರಪತ್ತಿ ಮುಂತಾದ ಅನಂತವಾದ ಜೀವಗುಣಗಳೂ ಸಹ ಧರ್ಮಭೂತಜ್ಞಾನದ ಅವಸ್ಥಾ ವಿಶೇಷಗಳೇ ಆಗಿವೆ.

ಯಾವುದು ಮತ್ತೊಂದು ಪದಾರ್ಥವನ್ನು ಆಶ್ರಯಿಸುವುದೋ ಅದರ ಗುಣವಿಶೇಷಣ ಎಂಬ ಲಕ್ಷಣಕ್ಕೆ ವಿಷಯವಾಗುವುದರಿಂದ ಜ್ಞಾನವೂ ಸಹ ಒಂದು ಗುಣ. ಜ್ಞಾನವು ಸಂಕೋಚ ವಿಕಾಸಗಳೆಂಬ ಅವಸ್ಥೆಗಳನ್ನು ಒಳಗೊಂಡಿರುವುದರಿಂದ ದ್ರವ್ಯವು ಆಗುತ್ತದೆ. ಜ್ಞಾನವು ಆತ್ಮಕ್ಕೆ ಗುಣವಾಗಿ ದ್ರವ್ಯವಾಗುತ್ತದೆ. ಪ್ರಭೆಯು ಹೇಗೋ ಹಾಗೆ ಒಂದೇ ಪದಾರ್ಥವು ಏಕಕಾಲದಲ್ಲಿ ದ್ರವ್ಯವೂ ಆಗಿ ಗುಣವೂ ಆಗಿರುವಲ್ಲಿ ವಿರೋಧವಿಲ್ಲ. ದ್ರವ್ಯವು ಬೇರೆ ಬೇರೆ ಅವಸ್ಥೆಗಳಿಗೆ ಆಶ್ರಯವಾಗಿದೆ. ಪ್ರಭೆಯ

ಹಾಗೆ ಇದೂ ಸಹ ತನ್ನ ಆಶ್ರಯಕ್ಕಿಂತ ಬೇರೆ ಕಡೆ ಇರುವುದು ಉಪಪನ್ನವಾಗುತ್ತದೆ. ಇದಕ್ಕೆ ಕೆಳಕಂಡಂತೆ ಅನುಮಾನ ಪ್ರಯೋಗಗಳಿವೆ.

ಜ್ಞಾನದ ಸ್ವರೂಪ, ಸಂಬಂಧ ಮತ್ತು ಕ್ರಿಯೆಗಳಿಗೆ ಸಂಬಂಧಿಸಿದಂತೆ ದರ್ಶನಗಳ ಸಿದ್ಧಾಂತಗಳು ಒಂದೇ ತೆರನಾಗಿಲ್ಲ. ಜ್ಞಾನವು ಕ್ಷಣಿಕ. ಮೂರು ಕ್ಷಣಗಳ ಕಾಲ ಮಾತ್ರ ಇರುವುದೆಂಬ ವಾದವು ಪ್ರಾತಿಭಾಸಿಕದಲ್ಲಿ ಹೇಗೋ ಹಾಗೆ ವ್ಯವಹಾರದಲ್ಲಿಯೂ ಅದು ಮಿಥ್ಯೆ ಎಂಬ ವಾದ. ಜ್ಞಾನ ಪರತಃ ಪ್ರಮಾಣವೆಂಬ ವಾದ. ಜ್ಞಾನವೇ ಆತ್ಮವೆಂಬ ವಾದ ಇವೇ ಮುಂತಾದ ವಾದಗಳು ಮೇಲಿನ ನಿರೂಪಣೆಯಿಂದ ನಿರಾಕರಿಸಲ್ಪಟ್ಟಿದೆ. 'ಸ್ತಂಭ', 'ಸ್ತಂಭ' ಎಂಬ ಧಾರವಾಹಿಕ ಜ್ಞಾನವು ಒಂದೇ ಆದುದು. ಆಗಮ ಪ್ರಮಾಣವನ್ನು ಅನುಸರಿಸಿ ಜ್ಞಾನಕ್ಕೆ ನಿತ್ಯತ್ವವನ್ನು ಅಂಗೀಕರಿಸಿದರೆ ಜಾಗೃತ ಮತ್ತು ಸುಷುಪ್ತಿ ಮುಂತಾದ ಅವಸ್ಥಾ ಭೇದಗಳು ಹೇಗೆ ಸಂಭವಿಸುತ್ತವೆ ಎಂದು ಆಕ್ಷೇಪ ಮಾಡಿದರೆ ಅದಕ್ಕೆ ಯಾವುದೇ ಬಾಧಕ ಇಲ್ಲ. ಯಾವುದನ್ನಾದರೂ ದಹಿಸಲಿಕ್ಕೆ ಬೆಂಕಿ ತಾನು ದಹಿಸುವ ಪದಾರ್ಥದ ಹತ್ತಿರವಿದ್ದರೂ ಪ್ರತಿಬಂಧಕ ಮಣಿಯಿದ್ದಾಗ ಹೇಗೆ ದಾಹ ಕಾರ್ಯವನ್ನು ಮಾಡುವುದಿಲ್ಲವೋ ಹಾಗೆ ಜ್ಞಾನವನ್ನು ಮರೆಮಾಡಲಿಕ್ಕೆ ತಮೋ ವಿಶೇಷದ ಇರುವಿಕೆ ಅಥವಾ ಇಲ್ಲದಿರುವಿಕೆಗಳಿಗೆ ಅನುಗುಣವಾಗಿ ಸ್ವಪ್ನ ಮೊದಲಾದವುಗಳು ಸಿದ್ಧಿಸುತ್ತವೆ. ಇದು ಪುಂಸ್ತ್ವ ಮೊದಲಾದವುಗಳಂತೆ ಬಾಲ್ಯದಲ್ಲಿ ಮರೆಮಾಡಲ್ಪಟ್ಟ ಪುಂಸ್ತ್ವ ಮೊದಲಾದವುಗಳು ಯೌವ್ವನದಲ್ಲಿ ಆವಿರ್ಭಾವವಾಗುತ್ತದೆ.

* ಧರ್ಮಿಜ್ಞಾನವೂ ತನ್ನನ್ನು ಮಾತ್ರ ಪ್ರಕಾಶಿಸಿದರೆ, ಧರ್ಮಭೂತಜ್ಞಾನವು ತನ್ನನ್ನೂ ಅಲ್ಲದೇ ಬೇರೆ ವಸ್ತುವನ್ನು ಪ್ರಕಾಶಿಸುತ್ತದೆ. ಅದನ್ನು ಅನುಕ್ರಮವಾಗಿ ಬೆಳಕಿಗೂ ಮತ್ತು ಪ್ರಕಾಶತ್ವಕ್ಕೂ ಹೋಲಿಸಬಹುದು. ಅವೆರಡಕ್ಕೂ ತೇಜಸ್ಸಿನ ಗುಣವಿದೆ. ಬೆಳಕು ತನ್ನನ್ನು ಮಾತ್ರ ಪ್ರಕಾಶಿಸಿದರೆ ಅದರ ಪ್ರಕಾಶತ್ವವು ತನ್ನನ್ನೂ ಅಲ್ಲದೇ ಇತರ ವಸ್ತುಗಳನ್ನೂ ಪ್ರಕಾಶಿಸುತ್ತದೆ.

* ಧರ್ಮಭೂತಜ್ಞಾನವು ಯಾವಾಗಲೂ ಜ್ಞಾತೃವಿಗೆ ಜ್ಞೇಯದ ಬಗ್ಗೆ ತಿಳಿಸುತ್ತದೆ. ಆದರೆ ಧರ್ಮಿಜ್ಞಾನದಲ್ಲಿ ಆ ಗುಣವಿರುವುದಿಲ್ಲ.

* ಧರ್ಮಿಜ್ಞಾನವು ಸ್ವಯಂ ಸಾಕ್ಷಾತ್ಕಾರವಾಗುತ್ತದೆ. ಅದರ ಪ್ರಕಾಶನವು ತನ್ನ ಮಟ್ಟಿಗೆ ಉಂಟಾಗುತ್ತದೆ. ಆದುದರಿಂದ ಅದನ್ನು ಪಾರಿಭಾಷಿಕವಾಗಿ 'ಪ್ರತ್ಯಕ್' ಎಂದು ಕರೆಯಲಾಗಿದೆ. ಆದರೆ ಧರ್ಮಭೂತಜ್ಞಾನವು ಸ್ವಪ್ರಕಾಶಕವಾದರೂ ಮತ್ತೊಂದನ್ನು ಪ್ರಕಾಶಿಸುವುದು ಅದರ ಉದ್ದೇಶವಾಗಿದೆ. ಅದನ್ನು ಪಾರಿಭಾಷಿಕವಾಗಿ 'ಪರಾಕ್' ಎಂದು ಕರೆಯಲಾಗಿದೆ.

* ಧರ್ಮೀಜ್ಞಾನವು ಬದಲಾವಣೆಗೆ ಒಳಪಟ್ಟಿಲ್ಲ. ಆದರೆ ಧರ್ಮಭೂತಜ್ಞಾನವು ಸಂಕೋಚ ಮತ್ತು ವಿಕಾಸಕ್ಕೆ ಒಳಪಟ್ಟಿದೆ. ಪರಬ್ರಹ್ಮ, ಮುಕ್ತ ಮತ್ತು ನಿತ್ಯ ಮುಕ್ತರಿಗೆ ಸಂಬಂಧಿಸಿದಂತೆ ಅದು ಸರ್ವವ್ಯಾಪಿಯಾಗಿದೆಯಲ್ಲದೆ, ಅವರ ಸರ್ವಜ್ಞತ್ವಕ್ಕೂ ಕಾರಣವಾಗಿದೆ. ಆದರೆ, ಬದ್ಧ ಆತ್ಮರುಗಳಿಗೆ ಸಂಬಂಧಪಟ್ಟಂತೆ ಅದು ಸಂಕುಚಿತವಾಗಿದೆಯಲ್ಲದೇ, ತನ್ನ ಕಾರ್ಯಕ್ಕಾಗಿ ಅದು ಜ್ಞಾನೇಂದ್ರಿಯಗಳಂತಹ ಬಾಹ್ಯ ಸಲಕರಣೆಗಳನ್ನು ಅವಲಂಬಿಸುತ್ತದೆ.

* ಧರ್ಮಭೂತಜ್ಞಾನವು ತನ್ನನ್ನು ಸ್ವತಂತ್ರವಾಗಿ ತಿಳಿದುಕೊಳ್ಳುವುದಲ್ಲದೇ ಧರ್ಮಭೂತಜ್ಞಾನದ ಮೂಲಕ ಪ್ರಾಪಂಚಿಕ ವಸ್ತುಗಳನ್ನು ತಿಳಿದುಕೊಳ್ಳುತ್ತದೆ. ಈ ಕಾರಣದಿಂದಾಗಿ ಅದು ಪ್ರಮಾತಾ ಎನಿಸಿಕೊಳ್ಳುತ್ತದೆ. ಅದು ತನ್ನ ಧರ್ಮೀ ಸ್ವರೂಪವನ್ನೇ ತಿಳಿದುಕೊಳ್ಳುವುದರಿಂದ, ಅದು ಪ್ರಮೇಯವೂ ಆಗುತ್ತದೆ. ಅಲ್ಲದೆ ಯಥಾರ್ಥ ಜ್ಞಾನಕ್ಕೆ ಸಾಧನವಾಗಿರುವ ಸ್ವಭಾವವಿದೆಯೇ ಹೊರತು, ಎಂದೂ ಪ್ರಮಾತನಾಗಿರುವ ಸ್ವಭಾವವಿಲ್ಲ. ಅದು ಪ್ರಮಾಣ, ಏಕೆಂದರೆ ಅದು ಜ್ಞಾನದ ಮೂಲವಾಗಿದೆ ಮತ್ತು ಅದರಿಂದಲೇ ಮರ ಮುಂತಾದ ಬಾಹ್ಯ ವಸ್ತುಗಳನ್ನು ತಿಳಿಯುತ್ತೇವೆ. ಅದು ಪ್ರಮೇಯ, ಏಕೆಂದರೆ, ಹಿಂದಿನ ಜ್ಞಾನವು ಈಗಿನ ಜ್ಞಾನಕ್ಕೆ ವಸ್ತು (ಪ್ರಮೇಯ)ವಾಗುತ್ತದೆ.

ಮೇಲೆ ಪರಿಶೀಲಿಸಿರುವಂತೆ, ಅದು ವಿಭು(ಸರ್ವವ್ಯಾಪಿ) ಮತ್ತು ಮುಕ್ತ ಸ್ಥಿತಿಯಲ್ಲಿ ಅನಂತವೂ ಸಂಸಾರಾವಸ್ಥೆಯಲ್ಲಿ ಕರ್ಮದಿಂದಾಗಿ ಸಂಕುಚಿತವಾಗಿಯೂ ಇರುತ್ತದೆ.

ಧರ್ಮಭೂತಜ್ಞಾನವು (ಅದು) ವಿಷಯಿ (ಜ್ಞೇಯ ವಸ್ತುಗಳನ್ನು ಪ್ರಕಾಶಿಸುತ್ತದೆ) ಮತ್ತು ಸ್ವಪ್ರಕಾಶಕ ಜಡವಸ್ತು. ಅದು ಬೆಳಕಿನಂತೆ ದ್ರವ್ಯವೂ ಹೌದು. ಗುಣವೂ ಹೌದು ಮತ್ತು ವಿಭು ಕೂಡಾ ಆಗಿದೆ.

* ಜ್ಞಾನವು ನಿತ್ಯವಾದರೆ, ಜ್ಞಾನ ಹುಟ್ಟಿತು ಮತ್ತು ಜ್ಞಾನ ನಶಿಸಿ ಹೋಯಿತು ಎಂಬ ವಾಕ್ಯ ಪ್ರಯೋಗಕ್ಕೆ ಸಮರ್ಪಕ ಕಾರಣ ಹೇಗೆ ಕೊಡುವುದು? ಜ್ಞಾನದ ಉದಯ ಮತ್ತು ನಾಶ ಕೇವಲ ತೋರಿಕೆಯಷ್ಟೇ, ಎಂಬುದೇ ಸಮರ್ಪಕ ಉತ್ತರ. ಜ್ಞಾನದ ವಿಕಾಸ ಮತ್ತು ಸಂಕೋಚವೇ ಜ್ಞಾನದ ಉದಯ ಮತ್ತು ನಾಶದಂತೆ ಭಾಸವಾಗುತ್ತದೆ.

* ಜ್ಞಾನವು ನಿತ್ಯವಾದರೆ, ಜಾಗೃತಾವಸ್ಥೆಗೂ ಸುಷುಪ್ತಿಗೂ ಇರುವ ವ್ಯತ್ಯಾಸವನ್ನು ತಿಳಿಸುವುದು ಹೇಗೆ? ನಿದ್ರಾವಸ್ಥೆಯಲ್ಲಿ ಜ್ಞಾನಕ್ಕೆ ಏನಾಗುತ್ತದೆ? ಇದಕ್ಕೆ ಉತ್ತರವೇನೆಂದರೆ, ನಿದ್ರಾವಸ್ಥೆಯಲ್ಲೂ ಜ್ಞಾನವು ಇರುತ್ತದೆ. ಅದರೆ ಅದು ತಮಸ್ಸಿಗೆ ಅಧೀನವಾಗಿರುವುದಷ್ಟೇ ಅಲ್ಲ, ತಮಸ್ಸಿನಿಂದ ಆವರಿಸಲ್ಪಟ್ಟಿರುತ್ತದೆ. ಕೆಲವು ವಿಶಿಷ್ಟ ರೀತಿಯ ಮಣಿಗಳ ಎದುರಿನಲ್ಲಿ ಬೆಂಕಿ ಉರಿಯುವುದಿಲ್ಲ: ಆದರೆ ಅದರ

ಉರಿಯುವ ಶಕ್ತಿಯು ಹಾಳಾಗದೆ ತಾತ್ಕಾಲಿಕವಾಗಿ ಅವ್ಯಕ್ತವಾಗಿರುತ್ತದೆ. ಪೌರುಷವು ಇತರ ಸಾಮರ್ಥ್ಯಗಳು ಶೈಶವ ಅವಸ್ಥೆಯಲ್ಲೂ ಇರುತ್ತವೆ. ಆದರೆ ಅವು ಅವ್ಯಕ್ತವಾಗಿದ್ದು ಯೌವ್ವನದಲ್ಲಿ ವ್ಯಕ್ತವಾಗುತ್ತದೆ. ಎರಡನೆಯದಾಗಿ, ಜ್ಞಾನವು ಜ್ಞೇಯವಸ್ತುಗಳಿಗೆ ಸಂಬಂಧಿಸಿದಂತೆ ಮಾತ್ರ ಗೋಚರವಾಗುತ್ತದೆ. ನಿದ್ರಾವಸ್ಥೆಯಲ್ಲಿ ಅದು ಕ್ರಿಯೆ ಮಾಡುವುದಿಲ್ಲ. ಏಕೆಂದರೆ ಆಗ ಜ್ಞೇಯ ವಸ್ತುಗಳಿರುವುದಿಲ್ಲ. ಆತ್ಮವು ತನಗೆ ಯಾವುದರ ಪ್ರಜ್ಞೆಯು ಇರಲಿಲ್ಲವೆಂದು ಹೇಳಿದರು, ಜ್ಞಾತೃವು ಇತ್ತೆಂದೇ ಅರ್ಥವಾಗುತ್ತದೆ. ಆಗ ಅದಕ್ಕೆ ಜ್ಞೇಯವಸ್ತು ಯಾವುದೂ ಇರಲಿಲ್ಲ ಅಷ್ಟೇ.

* ಜ್ಞಾನವು ಸತ್ಯವೋ ಅಸತ್ಯವೋ? ವಿಶಿಷ್ಟಾದ್ವೈತದರ್ಶನದ ಪ್ರಕಾರ, ಎಲ್ಲ ಜ್ಞಾನವು ಸತ್ಯವಾಗಿರುತ್ತದೆ.

* ಎಲ್ಲ ಜ್ಞಾನವು ಸತ್ಯವಾದರೆ, ಕೆಲವು ಸಾರಿ ಅದಕ್ಕೆ ಸಂಗತಿಗಳು ಹೊಂದಿಕೊಳ್ಳುವುದಿಲ್ಲವಲ್ಲ. ಅದು ಹೇಗೆ? ಇದಕ್ಕೆ ಉತ್ತರ ಹೀಗಿದೆ; ಭ್ರಮೆಯಲ್ಲಿ ಕಾಣುವ ವಸ್ತುವು ಸಹ ಅಸತ್ಯವಾದುದಲ್ಲ. ಪಂಚೀಕರಣ ಸಿದ್ಧಾಂತದ ಪ್ರಕಾರ, ಭೌತಪ್ರಪಂಚದ ಎಲ್ಲ ವಸ್ತುಗಳು ಪಂಚಭೂತಗಳ ವಿವಿಧ ಪ್ರಮಾಣದ ಮಿಶ್ರಣಗಳಾಗಿವೆ. ಕೆಲವು ಭೂತಗಳ ಆಧಿಕ್ಯದಿಂದಾಗಿ ಮತ್ತೊಂದು ವಸ್ತುವು ಬೆಳ್ಳಿ ಎನಿಸಿಕೊಂಡರೆ, ಮತ್ತೆ ಕೆಲವು ಭೂತಗಳ ಆಧಿಕ್ಯದಿಂದಾಗಿ ಮತ್ತೊಂದು ವಸ್ತುವು ಕಪ್ಪೆ ಚಿಪ್ಪು ಎನಿಸಿಕೊಳ್ಳುತ್ತದೆ. ಆದುದರಿಂದ ಅಸತ್ಯ ವಸ್ತುಗಳು ಇಲ್ಲವೇ ಇಲ್ಲ.

* ಎಲ್ಲ ಜ್ಞಾನ ಸತ್ಯವಾದರೂ, ಎಲ್ಲ ಜ್ಞಾನವು ಪೂರ್ಣ ಸತ್ಯದ ಬಗೆಗೆ ಅಲ್ಲ. ಅದು ಅಪರಿಪೂರ್ಣವಾಗಿರಬಹುದು ಅಥವಾ ಆಂಶಿಕವಾಗಿರಬಹುದು. ನಾವು ಕಪ್ಪೆಚಿಪ್ಪಿನ ತುಂಡನ್ನು ನೋಡಿ ಬೆಳ್ಳಿ ಎಂದು ಭ್ರಮಿಸಿದರೆ, ನಾವು ಕೆಲವು ಅಂಶಗಳನ್ನು ಮಾತ್ರ ಗಮನಿಸಿದ್ದೇವೆ. ಉಳಿದವುಗಳನ್ನು ಗಮನಿಸಲಿಲ್ಲ ಎಂದರ್ಥ. 'ಹಳದಿ' ಶಂಖವನ್ನು ನೋಡುವ ಭ್ರಮೆಯಲ್ಲಿ ಶಂಖದ ಬಿಳಿ ಬಣ್ಣವನ್ನು ಗಮನಿಸಿಲ್ಲ ಎಂದರ್ಥ. ಸ್ವಪ್ನಾವಸ್ಥೆಯಲ್ಲಿ ಕಾಣುವ ವಸ್ತುಗಳು ಕೇವಲ ಖಾಸಗಿ ಎಂಬುದು, ಅವು ಕನಸು ಕಾಣುವವನಿಗಷ್ಟೇ ಸೀಮಿತ. ಅವು ಬೇರೆಯವರಿಗಿಲ್ಲ ಎಂಬುವುದನ್ನು ನಾವು ಅಲಕ್ಷಿಸುತ್ತೇವೆ (ಕನಸು ಸತ್ಯವಲ್ಲದಿದ್ದರೆ, ಅದು ನಮ್ಮಲ್ಲಿ ಪ್ರತಿಕ್ರಿಯೆಯನ್ನುಂಟು ಮಾಡುತ್ತಿರಲಿಲ್ಲ). ಸತ್ಯಜ್ಞಾನವೂ ಅಯಾಥಾರ್ಥಜ್ಞಾನವೂ ಅಪೂರ್ಣವೇ. ಆದರೆ ಯಥಾರ್ಥ (ಸತ್ಯ) ಜ್ಞಾನವು ನಮ್ಮ ಅಗತ್ಯಗಳಿಗೆ ಬೇಕಾದ ಕೆಲವು ಲಕ್ಷಣಗಳನ್ನು ಗಮನಿಸುತ್ತದೆ. ಮರೀಚಿಕೆಯು ಅಯಥಾರ್ಥ ಜ್ಞಾನವಾಗಿದೆ. ಏಕೆಂದರೆ ಅದರಲ್ಲಿರುವ ನೀರು ನಮ್ಮ ಬಾಯಾರಿಕೆಯನ್ನು ಹಿಂಗಿಸುವುದಿಲ್ಲ; ಆದರೆ ಅದರಲ್ಲಿ ನೀರು ಸಂಪೂರ್ಣವಾಗಿ ಇಲ್ಲವೇ ಇಲ್ಲ ಎಂಬ ಕಾರಣಕ್ಕಾಗಿ ಅದು ಪೂರ್ಣ ಅಯಥಾರ್ಥ ಜ್ಞಾನವಲ್ಲ. ಯಾವುದನ್ನು ನಾವು ಸತ್ಯ ಎನ್ನುತ್ತೇವೆಯೋ ಅದು ವ್ಯಾವಹಾರಿಕವಾಗಿ ಪ್ರಯೋಜನಕಾರಿಯಾಗಿದೆ.

* ವಿಶಿಷ್ಟಾದ್ವೈತದ ಪ್ರಕಾರ ಧರ್ಮಭೂತಜ್ಞಾನವು ಜೀವಾತ್ಮನಿಗೆ ಹೇಗೆ ಸಂಬಂಧಿಸಿದೆ? ವಿಶಿಷ್ಟಾದ್ವೈತದರ್ಶನದಲ್ಲಿ ಧರ್ಮಭೂತಜ್ಞಾನಕ್ಕೂ ಜೀವಾತ್ಮನಿಗೂ ಇರುವ ಸಂಬಂಧವನ್ನು ಅಪೃಥಕ್‌ಸಿದ್ಧಿ (ಅವಿನಾಭಾವ ಸಂಬಂಧ) ಎಂದು ಪರಿಗಣಿಸಲಾಗಿದೆಯೇ ಹೊರತು, ನ್ಯಾಯದರ್ಶನದಲ್ಲಿ ಹೇಳಿದಂತೆ ಸಮವಾಯವೆಂದು ಪರಿಗಣಿಸುವುದಿಲ್ಲ.

* **ಧರ್ಮಭೂತಜ್ಞಾನ ಸಿದ್ಧಾಂತದಿಂದ ಯಾವ ದಾರ್ಶನಿಕ ಉದ್ದೇಶ ಕೈಗೂಡಿದೆ ?**

೧. ಮೊದಲನೆಯದಾಗಿ, ನಾವು ಧರ್ಮಭೂತಜ್ಞಾನವನ್ನು ಒಪ್ಪಿಕೊಳ್ಳ ಬೇಕಾಗುತ್ತದೆ. ಏಕೆಂದರೆ ಪಂಡಿತರಾಗಲಿ, ಪಾಮರರಾಗಲಿ, ಅದು ನಮ್ಮ ಎಲ್ಲರ ಅನುಭವದಲ್ಲಿಯೂ ಇದೆ. ಅದು ವ್ಯಾವಹಾರಿಕ ಜ್ಞಾನ. ಆದರೆ, ಧರ್ಮೀಜ್ಞಾನ ಎಂಬ ಮತ್ತೊಂದು ರೀತಿಯ ಜ್ಞಾನವು ಬ್ರಹ್ಮಜ್ಞಾನಿಗಳಿಗೆ ಮಾತ್ರ ಸಾಕ್ಷಾತ್ಕಾರ ವಾಗುತ್ತದೆ. ಅದು ವ್ಯಾವಹಾರಿಕ ಜ್ಞಾನವಾಗಿದೆ ಮತ್ತು ಆಧ್ಯಾತ್ಮಿಕ ಜ್ಞಾನಕ್ಕಿಂತ ಭಿನ್ನವಾಗಿದೆ. ಅದುದರಿಂದ ಅದರ ಇವರನ್ನು ತಿರಸ್ಕರಿಸಲು ನಮಗೆ ಸಾಧ್ಯವಿಲ್ಲ.

೨. ನ್ಯಾಯ ಮತ್ತು ಸಾಂಖ್ಯ ದರ್ಶನಗಳಿಗೆ ವ್ಯಾವಹಾರಿಕ ಜ್ಞಾನ ಕಾರಣ ಕೊಡುವುದು ಕಷ್ಟವಾಗುತ್ತದೆ. ಏಕೆಂದರೆ, ಆ ದರ್ಶನಗಳು ಮೇಲಿನ ಧರ್ಮಭೂತಜ್ಞಾನ ಸಿದ್ಧಾಂತವನ್ನು ಒಪ್ಪಿಕೊಳ್ಳುವುದಿಲ್ಲ. ನ್ಯಾಯದರ್ಶನದ ಪ್ರಕಾರ ಜ್ಞಾನವು ತಾನೇ ಅನುಭವದ ವಸ್ತುಗಳನ್ನು ಪ್ರಕಾಶಿಸುವುದಿಲ್ಲ. ಆದುದರಿಂದ ಅದು ವ್ಯಾವಹಾರಿಕ ಜ್ಞಾನ ಇದೆಯೆಂದು ಹೇಳಲು ಬೇರೊಂದು ರೀತಿಯ ಜ್ಞಾನವನ್ನು ಒಪ್ಪಿಕೊಳ್ಳುತ್ತಾರೆ. ಈ ರೀತಿಯ ಜ್ಞಾನಕ್ಕೆ ಆ ದರ್ಶನದಲ್ಲಿ ಅನುವ್ಯವಸಾಯ ಎಂದು ಕರೆಯಲಾಗಿದೆ. ಇದು ಅನಂತರದ ಜ್ಞಾನವಾದ್ದರಿಂದ ಅನು ಮೊದಲಿನ ಜ್ಞಾನವನ್ನು ಪ್ರಕಾಶಿಸಲಾರದು. ಹಾಗೆ ಮಾಡಲು ಅದಕ್ಕೆ ಮತ್ತೊಂದು ಅನುವ್ಯವಸಾಯ ಬೇಕಾಗುತ್ತದೆ. ಧರ್ಮಭೂತಜ್ಞಾನ ಸಿದ್ಧಾಂತವನ್ನು ಒಪ್ಪಿಕೊಳ್ಳುವ ಮೂಲಕ ಅನುವ್ಯವಸಾಯ ಅನಾವಶ್ಯಕವೆಂದು ತೆಗೆದುಹಾಕಬಹುದು. ಸಹಚರರು ಜ್ಞಾನವು ಬುದ್ಧಿಗೆ ಸೇರಿದುದೆಂದು ಭಾವಿಸುತ್ತಾರೆ. ಆದರೆ ಜ್ಞಾನವನ್ನು ಜೀವಾತ್ಮದಿಂದ ಜಡಬುದ್ಧಿಗೆ ವರ್ಗಾಯಿಸುವುದು ಸಮಂಜಸವಲ್ಲ.

೩. ಜಗತ್ತಿನಲ್ಲಿ ಕರ್ಮ ಮಾಡಿದವನು ಕರ್ಮಫಲವನ್ನು ಅನುಭವಿಸುವುದನ್ನು ಅವನಲ್ಲಿ ಜ್ಞಾನವಿರುವುದನ್ನು ನಾವು ಗಮನಿಸಬಹುದು. ಜ್ಞಾನ, ಇಚ್ಛೆ, ಯತ್ನ ಮತ್ತು ಕರ್ಮದ ಫಲಗಳು ಒಬ್ಬನಿಗೆ ಸೇರಿದವುಗಳಾಗಿವೆ ಎಂಬುದನ್ನು ತೋರಿಸಬೇಕಾದರೆ, ಧರ್ಮಭೂತಜ್ಞಾನ ಸಿದ್ಧಾಂತವನ್ನು ನಾವು ಒಪ್ಪಿಕೊಳ್ಳಲೇ ಬೇಕಾಗುತ್ತದೆ.

೪. ಧರ್ಮೀಜ್ಞಾನ ಮತ್ತು ಧರ್ಮಭೂತಜ್ಞಾನವು ಅನುಕ್ರಮವಾಗಿ ಪ್ರತ್ಯಕ್ (ವ್ಯಕ್ತಿನಿಷ್ಠ) ಮತ್ತು ಪರಾಕ್ (ವಸ್ತುನಿಷ್ಠ). ಜೀವಾತ್ಮವು ಜ್ಞಾನದ ಎರಡು ಕ್ಷೇತ್ರಗಳಲ್ಲೂ ಕಾರ್ಯನಿರ್ವಹಿಸುವುದರಿಂದ ಜ್ಞಾನದ ಎರಡು ಕ್ಷೇತ್ರಗಳಿವೆ ಎಂಬುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

೫. ಧರ್ಮಭೂತಜ್ಞಾನದ ಕಾರ್ಯಗಳಾವುವು ಮತ್ತು ಅದು ಹೇಗೆ ಕಾರ್ಯ ಮಾಡುತ್ತದೆ? ಎಲ್ಲ ಪ್ರಮಾಣಗಳು ದೈವಭಕ್ತಿಯಂತಹ ಆಧ್ಯಾತ್ಮಿಕ ಮಾರ್ಗಗಳು ಧರ್ಮಭೂತಜ್ಞಾನದ ಪ್ರಕಾರಗಳು. ಜ್ಞಾನ ಮತ್ತು ಬಲ ಮುಂತಾದ ಈಶ್ವರನ ಗುಣಗಳು ಸಹ ಅವನ ಧರ್ಮಭೂತಜ್ಞಾನದ ಪ್ರಕಾರಗಳು. ಈಶ್ವರನ ಕಾರ್ಯಗಳೇ ಆಗಲಿ, ಜೀವಾತ್ಮಕ ಕಾರ್ಯಗಳೇ ಆಗಲಿ ಅವು ಧರ್ಮಭೂತಜ್ಞಾನಕ್ಕೆ ಗೋಚರಿಸುತ್ತವೆ.

೬. ಭೌತವಿಜ್ಞಾನಿಗಳು ವ್ಯವಹರಿಸುವ ಜ್ಞಾನವು ಧರ್ಮಭೂತಜ್ಞಾನಕ್ಕೆ ಅನ್ವಯಿಸುತ್ತದೆ. ಧರ್ಮಭೂತಜ್ಞಾನ ಸಿದ್ಧಾಂತವನ್ನು ಒಪ್ಪಿಕೊಳ್ಳದಿದ್ದರೆ, ಆಧ್ಯಾತ್ಮಕ್ಕೂ ಭೌತವಿಜ್ಞಾನಕ್ಕೂ ಸಂಪರ್ಕವಿಲ್ಲದಂತಾಗುತ್ತದೆ. ಬ್ರಹ್ಮನ್ ನಿರ್ವಿಶೇಷವೆಂದು ಪರಿಗಣಿಸುವವರು ಆತ್ಮವು ಜ್ಞಾನವೆಂಬುದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಜ್ಞಾನವು ಅದರ ಗುಣವೆಂಬುದನ್ನು ಒಪ್ಪಿಕೊಳ್ಳುವುದಿಲ್ಲ. ವೈಶೇಷಿಕರು ಜ್ಞಾನವು ಆತ್ಮದ ಗುಣವೆಂಬುದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಅದು ಆತ್ಮದ ಮುಖ್ಯ ಲಕ್ಷಣವೆಂಬುದನ್ನು ಒಪ್ಪಿಕೊಳ್ಳುವುದಿಲ್ಲ. ದ್ವೈತಿಗಳು ಜ್ಞಾನ ಮುಂತಾದ ಗುಣಗಳು ಬುದ್ಧಿಯ ಗುಣಗಳೆಂದು ಪರಿಗಣಿಸುತ್ತಾರೆ. ಸವಿಶೇಷಾದ್ವೈತ ಸಿದ್ಧಾಂತದ ಪ್ರಕಾರ, ಜ್ಞಾನವು ಆತ್ಮದ ಸ್ವರೂಪವೂ ಹೌದು, ಗುಣವೂ ಹೌದು.

೭. ಧರ್ಮಭೂತಜ್ಞಾನವು ಎಲ್ಲ ಅವಸ್ಥೆಗಳು ಅಂದರೆ ಜಾಗೃತ, ಸ್ವಪ್ನ, ಸುಷುಪ್ತಿ ಮತ್ತು ಸಮಾಧಿ ಅವಸ್ಥೆಗಳಲ್ಲಿ ಕೆಲಸ ಮಾಡುತ್ತದೆ. ಆತ್ಮವು ತಾನೇ ನೋಡುತ್ತದೆ. ತಾನೇ ಯೋಚಿಸುತ್ತದೆ. ತಾನೇ ವಸ್ತುಗಳನ್ನು ತಿಳಿದುಕೊಳ್ಳುತ್ತದೆ ಎಂಬುದು ನ್ಯಾಯದರ್ಶನದ ಮತ. ಸಾಂಖ್ಯ ಮತ್ತು ಅವರ ಜೊತೆಯವರ ಪ್ರಕಾರ, ಆತ್ಮಕ್ಕೆ ವಸ್ತುಗಳೊಡನೆ ನೇರ ಸಂಪರ್ಕ ಸಾಧ್ಯವಿಲ್ಲ. ಆದರೆ, ಸವಿಶೇಷಾದ್ವೈತದ ಪ್ರಕಾರ ವಸ್ತುಗಳನ್ನು ತಿಳಿದುಕೊಳ್ಳುವ ಪ್ರಕ್ರಿಯೆಯು ಇಂದ್ರಿಯ ಸಂವೇದನೆಯಿಂದ ಪ್ರಾರಂಭವಾಗಿ ಆತ್ಮದಲ್ಲಿ ಕೊನೆಗೊಳ್ಳುತ್ತದೆ. ವಸ್ತುಗಳು ಇಂದ್ರಿಯಗಳಿಂದ ಗ್ರಹಿಸಲ್ಪಟ್ಟು ಆತ್ಮದ ಏಕೀಕೃತ, ಪ್ರಜ್ಞೆಯ ಮೂಲಕ ಬುದ್ಧಿಯಿಂದ ನಿರ್ಧರಿಸಲ್ಪಟ್ಟು ಸಂಶ್ಲೇಷಿಸಲ್ಪಡುತ್ತದೆ.

೮. ಧರ್ಮಭೂತಜ್ಞಾನವು ಸ್ವಪ್ನಾವಸ್ಥೆಯಲ್ಲಿ ಮಾನಸಿಕ ಸ್ಥಿತಿಗಳ ಮೂಲಕ ಕೆಲಸ ಮಾಡುತ್ತದೆ. ಅದು ಗಾಢ ನಿದ್ರೆ (ಸುಷುಪ್ತಿ)ಯಲ್ಲೂ ಇರುತ್ತದೆ. ಆದರೆ ಅದಕ್ಕೆ ಯಾವ ಜ್ಞೇಯವು ಇರುವುದಿಲ್ಲವಾದುದರಿಂದ, ಅದು ಪ್ರಕಾಶಕ್ಕೆ ಬರುವುದಿಲ್ಲ.

ಸಮಾಧಿ ಸ್ಥಿತಿಯಲ್ಲಿ ಅನುಭವಿಸಲಾಗುವ ಪರಮಾತ್ಮನ ದೈವೀಗುಣಗಳು, ಜೀವಾತ್ಮನ ಆಧ್ಯಾತ್ಮಿಕ ಗುಣಗಳು, ಧರ್ಮಭೂತಜ್ಞಾನದ ವಿವಿಧ ರೂಪಗಳಾಗಿವೆ. ಆದುದರಿಂದ ಧರ್ಮಭೂತಜ್ಞಾನವು ಎಲ್ಲ ಅವಸ್ಥೆಗಳಲ್ಲೂ ಇರುತ್ತದೆಂಬುದು ಇದರಿಂದ ಸಿದ್ಧವಾಗುತ್ತದೆ.

'ಧರ್ಮಭೂತಜ್ಞಾನ' ವೆಂಬುದು ಪಾರಿಭಾಷಿಕ ಪದವಾದರೂ ಮತ್ತು ಆ ಪದವು ಬೇರೆ ದರ್ಶನಗಳಲ್ಲಿ ಬಳಕೆಯಲ್ಲಿಲ್ಲದಿದ್ದರೂ, ಆ ದರ್ಶನಗಳು ಅದರ ಕಾರ್ಯಗಳನ್ನು ಬುದ್ಧಿ, ಅನುವ್ಯವಸಾಯ (ಅನಂತರ ಜ್ಞಾನ) ಮುಂತಾದವುಗಳಿಗೆ ವಹಿಸುತ್ತವೆ. ಆದರೆ ಧರ್ಮಭೂತಜ್ಞಾನ ಸಿದ್ಧಾಂತವು ಬುದ್ಧಿಯ ಮೇಲೆ ಅತಿಯಾದ ಭಾರವನ್ನು ಹೇರದೆ ಜ್ಞಾನದ ಕಾರ್ಯಗಳನ್ನು ಸ್ಪಷ್ಟಗೊಳಿಸುತ್ತದೆ. ಹೀಗಾಗಿ ಅದು ಎಲ್ಲ ಚಿಂತಕರ ಗೌರವಕ್ಕೆ ಪಾತ್ರವಾಗಿದೆ ಎಂಬುದು ವಿಶಿಷ್ಟಾದ್ವೈತ ಅಭಿಪ್ರಾಯವಾಗಿದೆ.

* ಬದ್ಧ ಜೀವಾತ್ಮರಿಗೇನೋ ತಮ್ಮ ಕಾರ್ಯ ನಿರ್ವಹಿಸಲು ಧರ್ಮಭೂತಜ್ಞಾನ ಬೇಕು. ಆದರೆ ಅದು ಮುಕ್ತಾತ್ಮರಿಗೆ ಏಕೆ ಬೇಕು? ಅದಕ್ಕೆ ಉತ್ತರವೇನೆಂದರೆ, ಮುಕ್ತಾತ್ಮರು ಪರಮಾತ್ಮನಿಗೆ ಸೇವೆ ಸಲ್ಲಿಸಬೇಕಾಗುತ್ತದೆ. ಆ ಉದ್ದೇಶಕ್ಕಾಗಿ ಅವರಿಗೂ ಧರ್ಮಭೂತಜ್ಞಾನ ಬೇಕು.

* ಭಕ್ತಿಯಿಂದ ಮತ್ತು ಶರಣಾಗತಿ ಭಾವದಿಂದ ಪರಮಾತ್ಮನಿಗೆ ಸಲ್ಲಿಸುವ ಸೇವೆ ಮುಕ್ತಿಗೆ ಸಾಧನ ಮಾರ್ಗವಾಗಿದೆ. ಆದರೆ ಮೋಕ್ಷ ಪಡೆದ ನಂತರವೂ ಅವುಗಳ ಅಗತ್ಯವೇನು? ಇದಕ್ಕೆ ಉತ್ತರವೆಂದರೆ, ಮುಕ್ತಾತ್ಮರು ಭಕ್ತಿಯಿಂದ ಪರಮಾತ್ಮನಿಗೆ ಸೇವೆ ಸಲ್ಲಿಸುವುದು, ಯಾವುದೋ ಉದ್ದೇಶವನ್ನು ಸಾಧಿಸುವುದಕ್ಕಲ್ಲ; ಅದು ನಿಷ್ಕಾಮ ಸೇವೆ. ಅದು ಅವರ ಸ್ವಭಾವಕ್ಕನುಗುಣವಾದ ಒಂದು ಪರಿಣಾಮ. ಪೂಜ್ಯ ವೇದಾಂತದೇಶಿಕನು ಇದನ್ನು ಒಂದು ಉಪಮೆಯೊಂದಿಗೆ ಹೀಗೆ ವಿವರಿಸುತ್ತಾನೆ; ಕೆಲವು ಆರೋಗ್ಯವಂತ ವ್ಯಕ್ತಿಗಳು ತಮಗೆ ಹಸಿವು ಮತ್ತು ಬಾಯಾರಿಕೆ ಇಲ್ಲದಿದ್ದರೂ ಸಂತೋಷದಿಂದ (ಸಂತೋಷಕ್ಕಾಗಿ ಅಲ್ಲಿ) ಹಾಲು ಕುಡಿಯುತ್ತಾರೆ. ಅವರು ಹಾಲು ಕುಡಿದು ಆನಂದವನ್ನು ವ್ಯಕ್ತಪಡಿಸಲೆಂದೇ ಹೊರತು, ಆನಂದ ಪಡೆಯುವುದಕ್ಕಾಗಿ ಅಲ್ಲ.

ಅದ್ವೈತ ದರ್ಶನದಲ್ಲಿ ಜೀವನ್ಮುಕ್ತನಿಗೆ ಎಲ್ಲರನ್ನು ಕರುಣೆಯಿಂದ ನೋಡುವುದು ಮತ್ತು ಯಾರನ್ನು ದ್ವೇಷಿಸದಿರುವ ಗುಣಗಳಿರುತ್ತವೆಂದು ಹೇಳಲಾಗಿದೆ. ಈ ಗುಣಗಳಿಂದ ಅವನು ಏನನ್ನೂ ಸಾಧಿಸಿಕೊಳ್ಳಬೇಕಾಗಿಲ್ಲ. ಏಕೆಂದರೆ ಅವನಾಗಲೇ ತನ್ನ ಉದ್ದೇಶವನ್ನು ಸಾಧಿಸಿಕೊಂಡಿದ್ದಾನೆ. ಆ ಗುಣಗಳು ಅವನ ಅವಿಭಾಜ್ಯ ಅಂಗವಾಗಿದೆ.

* ಆದರೆ ಉಪನಿಷತ್ತುಗಳಲ್ಲಿ ಮುಕ್ತಾತ್ಮರು ಸೇವೆ ಮಾಡಬೇಕೆಂದು ತಿಳಿಸಿಲ್ಲ. ಅಂಥವರಿಗೆ ಧರ್ಮಭೂತಜ್ಞಾನದ ಅವಶ್ಯಕತೆ ಏನು? ಇದಕ್ಕೆ ಉತ್ತರವೆಂದರೆ; ಉಪನಿಷತ್ತುಗಳಲ್ಲಿ ಮುಕ್ತಾತ್ಮರಲ್ಲಿ ಪಾಪರಾಹಿತ್ಯ, ಅಮರತ್ವ, ದುಃಖರಾಹಿತ್ಯ ಮುಂತಾದ ಗುಣಗಳಿರುತ್ತವೆಂದು ಹೇಳಲಾಗಿದೆ. ಇವೆಲ್ಲವೂ ಧರ್ಮಭೂತಜ್ಞಾನದ ಪ್ರಕಾರಗಳೇ ಆಗಿವೆ.

ಈ ಮೇಲಿನ ದಿವ್ಯಗುಣಗಳು ಜೀವಾತ್ಮನಲ್ಲಿ ಸ್ವಾಭಾವಿಕವಾಗಿವೆ. ಅವುಗಳು ಇಲ್ಲ ಎಂದು ನಾವು ಹೇಳಿದಾಕ್ಷಣ ಜೀವಾತ್ಮನಲ್ಲಿ ಅವು ಇಲ್ಲ ಎಂದರ್ಥವಾಗುವುದಿಲ್ಲ. ಅವುಗಳು ಎಲ್ಲ ಜ್ಞಾನಿಗಳ ಅನುಭವದಲ್ಲಿಯೂ ಕಾಣುವುದಿಲ್ಲ. ಏಕೆಂದರೆ ಅವುಗಳು ಬ್ರಹ್ಮನ ಮಾಯೆಯಿಂದಾಗಿ ಮಸುಕಾಗಿರುತ್ತವೆ.

ಎಲ್ಲ ಆತ್ಮಕ್ಕೂ ಧರ್ಮಭೂತಜ್ಞಾನವುಂಟು. ಇದರ ಮೂಲಕ ಇತರ ವಿಷಯಗಳನ್ನವರು ತಿಳಿಯುವರು. ಮತ್ತೊಬ್ಬರ ಆತ್ಮ ಸ್ವರೂಪವನ್ನು ನಮ್ಮ ಧರ್ಮಭೂತಜ್ಞಾನದಿಂದ ನಾವರಿಯುವೆವು. ಈ ಸಿದ್ಧಾಂತವು ಧರ್ಮಭೂತಜ್ಞಾನವನ್ನು ಪ್ರತ್ಯೇಕವಾದ ಪದಾರ್ಥವೆಂದು ಸ್ಥಾಪಿಸುತ್ತದೆ. ಆದುದರಿಂದ ಇದು ದ್ರವ್ಯವೂ ಹೌದೂ, ಗುಣವೂ ಹೌದು.

ಧರ್ಮಭೂತಜ್ಞಾನವು ಸ್ವಯಂ ಪ್ರಕಾಶ ಮತ್ತು ಅಚೇತನ ದ್ರವ್ಯವಾಗಿದೆ. ಇದು ವಿಷಯವನ್ನು ಗ್ರಹಿಸುತ್ತದೆ. ಇದು ಈಶ್ವರ ಮತ್ತು ನಿತ್ಯರಲ್ಲಿ ನಿತ್ಯ. ಸಂಸಾರಾವಸ್ಥೆಯಲ್ಲಿ ತಿರೋಹಿತವಾಗಿರುವುದರಿಂದ ಮುಕ್ತರಲ್ಲಿ ಆವಿರ್ಭೂತವಾಗಿರುವುದು. ಇದನ್ನೇ ಜ್ಞಾನವೆಂದು ಕರೆಯುತ್ತಾರೆ. ಜ್ಞಾನವು ನಿತ್ಯವಾದರೂ ಅದು ಸಂಕೋಚ ವಿಕಾಸ ಸ್ವಭಾವವನ್ನು ಹೊಂದಿರುವುದರಿಂದ 'ಹುಟ್ಟಿತು', 'ನಷ್ಟವಾಯಿತು' ಎಂಬ ವ್ಯವಹಾರಕ್ಕೆ ವಿಷಯವಾಗುತ್ತದೆ. ಅದು ಇಂದ್ರಿಯದ್ವಾರದಿಂದ ಹೊರಗೆ ಬಂದು ಅರ್ಥ ಸಂಬಂಧವುಳ್ಳದ್ದಾಗಿರುತ್ತದೆ. ಜ್ಞಾನವು ಸ್ವತಃ ಏವ ಪ್ರಮಾಣ ಮತ್ತು ಸ್ವಪ್ರಕಾಶ. ಅದು ಸಜಾತೀಯವಾದ ಮತ್ತೊಂದು ವಸ್ತುವನ್ನು ಅಪೇಕ್ಷಿಸದೇ ಅದು ವ್ಯವಹಾರ ಕಾರಣವಾಗಿರುವುದು.

ರಾಮಾನುಜರ ಪ್ರಕಾರ ಶುದ್ಧ ಜ್ಞಾನವೆಂಬುದಿಲ್ಲ. ಜ್ಞಾನವು ಯಾವುದಾದರೂ ವಸ್ತುವಿಗೆ ಸಂಬಂಧಪಟ್ಟಿರಬೇಕು. ಜ್ಞಾನವು ದ್ರವ್ಯವಾದರೂ ಜೀವ, ಈಶ್ವರನನ್ನು ಆಶ್ರಯಿಸಿದೆ. ದೀಪ ಮತ್ತು ಬೆಳಕಿನ ದೃಷ್ಟಾಂತವನ್ನು ತೆಗೆದುಕೊಂಡಾಗ ಬೆಳಕು ದೀಪದ ಧರ್ಮ, ಅದರ ಸ್ವರೂಪವಲ್ಲ. ಜ್ಞಾನವು ಜಡವೂ ಅಲ್ಲ, ಚೇತನವೂ ಅಲ್ಲ, ಸ್ವಯಂ ಪ್ರಕಾಶವಾದುದು. ತನ್ನನ್ನು ಬೆಳಗಿಸಿ ಬೇರೊಂದನ್ನು ತೋರಿಸುತ್ತದೆ. ಆದರೆ ಹಾಗೆ ಮಾಡುತ್ತೇನೆಂಬ ಅರಿವು ಬೇಕಾಗಿಲ್ಲ.

ಈಶ್ವರ ಮತ್ತು ನಿತ್ಯರುಗಳ ಧರ್ಮಭೂತಜ್ಞಾನವು ಸಂಕೋಚವನ್ನು ಹೊಂದಿದೆ. ಮುಕ್ತಾತ್ಮರ ಧರ್ಮಭೂತಜ್ಞಾನವು ಮೊದಲು ಮರೆಸಲ್ಪಟ್ಟದ್ದು ನಂತರ ತನ್ನ ನಿಜಸ್ವರೂಪವನ್ನು ಪಡೆದಿದೆ. ಜ್ಞಾನ, ಮತಿ, ಪ್ರಜ್ಞೆ, ಸಂವಿತ್, ಧಿಷಣಾ, ಧೀಃ, ಮನೀಷಾ, ಶೇಮುಷೀ, ಮೇಧಾ, ಬುದ್ಧಿ ಇವೇ ಮೊದಲಾದ ಪದಗಳು ಜ್ಞಾನವನ್ನು ಹೇಳುವ ಪರ್ಯಾಯ ಶಬ್ದಗಳಾಗಿವೆ. ಉಪಾಧಿಗಳ ಭೇದದ ಕಾರಣ ಜ್ಞಾನವೇ ಸುಖ, ದುಃಖ, ಇಚ್ಛೆ, ದ್ವೇಷ, ಪ್ರಯತ್ನ ಇವುಗಳ ರೂಪವನ್ನು ಹೊಂದುತ್ತದೆ. ಜ್ಞಾನಕ್ಕಿಂತ ಬೇರೆಯಾದುದೊಂದು ಸುಖ ಮೊದಲಾದವುಗಳನ್ನುಂಟು ಮಾಡುವುದೆಂದು ಹೇಳಲು ಪ್ರಮಾಣಗಳಾವುವೂ ಇಲ್ಲ. 'ನಾನು ಇಚ್ಛಿಸುತ್ತೇನೆ', 'ದ್ವೇಷಿಸುತ್ತೇನೆ' ಮೊದಲಾದ ವ್ಯವಹಾರವು 'ಸ್ಮರಿಸುತ್ತೇನೆ' ಎಂಬುದರ ಹಾಗೆ 'ಜ್ಞಾನ' ವಿಶೇಷವೇ ಆಗಿ ಉಪಪನ್ನವಾಗುತ್ತದೆ.

ಎಲ್ಲ ಜ್ಞಾನವು ಸ್ವತಃ ಪ್ರಮಾಣ ಹಾಗೂ ಸ್ವಯಂ ಪ್ರಕಾಶವುಳ್ಳದ್ದು ಹಾಗೂ ವಿವಾದಾಸ್ಪದವಾದ ಜ್ಞಾನವು ತನ್ನನ್ನು ಕುರಿತ ವ್ಯವಹಾರದಲ್ಲಿ ಪರಾಧೀನವಿಲ್ಲದೆಯೇ ಪ್ರವರ್ತಿಸುತ್ತದೆ. ಅದು ಸ್ವಜಾತೀಯವಾದುದರ ಸಂಬಂಧವನ್ನು ಅಪೇಕ್ಷಿಸದೆ ವ್ಯವಹಾರಕ್ಕೆ ಕಾರಣವಾಗುವುದರಿಂದ ಪದಾರ್ಥ, ದೀಪ, ಇಂದ್ರಿಯ ಮುಂತಾದವುಗಳಂತೆಯೇ ಪ್ರವರ್ತಿಸುತ್ತದೆ. ಚಕ್ಷುರಿಂದ್ರಿಯಕ್ಕೂ ಬೆಳಕಿಗೂ ಸಜಾತೀಯತ್ವವಿಲ್ಲ; ಚಕ್ಷುರಿಂದ್ರಿಯವು ಅಹಂಕಾರ ತತ್ವದಿಂದ ಹುಟ್ಟಿರುವುದರಿಂದ, ಮತ್ತೊಂದು ಬೆಳಕು ತೇಜಸತ್ವದಿಂದ ಹುಟ್ಟಿರುವುದರಿಂದಲೂ ಇವುಗಳಿಗೆ ಭೇದವಿದೆ.

ಆಗಮ ಪ್ರಮಾಣವನ್ನು ಅನುಸರಿಸಿ ಜ್ಞಾನಕ್ಕೆ ನಿತ್ಯತ್ವವನ್ನು ಅಂಗೀಕರಿಸಿದರೆ ಜಾಗೃತ ಮತ್ತು ಸುಷುಪ್ತಿ ಮುಂತಾದ ಅವಸ್ಥಾ ಭೇದಗಳು ಹೇಗೆ ಸಂಭವಿಸುತ್ತವೆಂದು ಆಕ್ಷೇಪ ಮಾಡಿದರೆ ಅದಕ್ಕೆ ಯಾವ ಬಾಧಕವೂ ಇಲ್ಲವೆಂದು ಹೇಳುತ್ತೇವೆ. ಯಾವುದನ್ನಾದರೂ (ದಹಿಸಲಿಕ್ಕೆ ಬೆಂಕಿ ತಾನು ದಹಿಸುತ್ತಿರುವ) ದಹಿಸುವ ಪದಾರ್ಥದ ಹತ್ತಿರವಿದ್ದರೂ ಪ್ರತಿಬಂಧಕ ಮಣಿಯಿದ್ದಾಗ ಹೇಗೆ ದಾಹ ಕಾರ್ಯವನ್ನು ಮಾಡುವುದಿಲ್ಲವೋ ಹಾಗೆಯೇ ಜ್ಞಾನವನ್ನು ಮರೆಮಾಡತಕ್ಕ ತಮೋವಿಶೇಷದ ಇರುವಿಕೆ ಅಥವಾ ಇಲ್ಲದಿರುವಿಕೆಗಳಿಗೆ ಅನುಗುಣವಾಗಿ ಸ್ವಪ್ನ ಮೊದಲಾದವುಗಳು ಸಿದ್ಧಿಸುತ್ತವೆ. ಇದು ಪುಂಸ್ತ್ವ ಮೊದಲಾದವುಗಳಂತೆಯೇ, ಬಾಲ್ಯದಲ್ಲಿ ಮರೆಮಾಡಲ್ಪಟ್ಟ ಪುಂಸ್ತ್ವ ಮೊದಲಾದವುಗಳು ಯೌವ್ವನದಲ್ಲಿ ಆವಿರ್ಭವವಾಗುತ್ತವೆ.

ಸೂರ್ಯ, ಕಣ್ಣು ಮುಂತಾದವುಗಳಿಂದ ಹೊರಡುವ ಕಿರಣಗಳೋಪಾದಿಯಲ್ಲಿ ಮುಕ್ತಾತ್ಮರ ಜ್ಞಾನವು ಏಕಕಾಲದಲ್ಲಿ ಅನಂತದೇಹಗಳೊಡನೆ ಸಂಯೋಗವನ್ನು ಹೊಂದುತ್ತದೆ.

ಭಗವಂತನ ಅನಂತಕಲ್ಯಾಣಗಳಾದ ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು, ಸೌಶೀಲ್ಯ, ವಾತ್ಸಲ್ಯ, ಮಾರ್ದವ, ಆರ್ಜವ, ಸೌಹಾರ್ದ, ಸೌಮ್ಯ, ಕಾರುಣ್ಯ, ಮಾಧುರ್ಯ, ಗಾಂಭೀರ್ಯ ಮುಂತಾದ ಗುಣಗಳು ಸಹ ಆತನ ಜ್ಞಾನ ಮತ್ತು ಶಕ್ತಿಗಳ ವಿಸ್ತಾರವಾಗಿವೆ.

ವಿಶಿಷ್ಟಾದ್ವೈತದ ಪ್ರಕಾರ ಧರ್ಮಭೂತಜ್ಞಾನವು ಸಮಗ್ರ ಮನೋವಲಯಕ್ಕೆ ಸಂಬಂಧಿಸಿದ ವ್ಯಾಪಾರಗಳನ್ನು ವ್ಯಾಪಿಸಿಕೊಂಡಿದೆ. ಹೀಗಾಗಿ ಅದು ಸರ್ವವ್ಯವಹಾರಗಳಿಗೆ ಕಾರಣೀಭೂತವಾಗಿರುವುದರಿಂದ ನ್ಯಾಯ-ವೈಶೇಷಿಕರ ಬುದ್ಧಿಯ ಅಂದರೆ ಜ್ಞಾನದ ಪರಿಕಲ್ಪನೆಯಂತೆ ಇದ್ದರೂ ಸಹಿತ ಅದರಲ್ಲಿ ಭಿನ್ನಾಂಶಗಳುಂಟು. ಧರ್ಮಭೂತಜ್ಞಾನವು ಜ್ಞಾನ, ಇಚ್ಛಾ ಹಾಗೂ ಭಾವನೆಗಳಿಗೆ ಸಂಬಂಧಿಸಿದ ಮನೋಭೂಮಿಕೆಗಳನ್ನು ವ್ಯಕ್ತಪಡಿಸುತ್ತದೆ.

ಆಧಾರ ಗ್ರಂಥಗಳು

೧. ವರದಾ ದೇಶಿಕಾಚಾರ್ ಎಚ್.ಎಸ್.: 'ಚೈತನ್ಯ ಕಾನ್ಶಿಯಸ್‌ನೆಸ್', ೧೯೮೮.

೨. ಅನಂತರಂಗಾಚಾರ್ಯ, ಎನ್.ಎಸ್., (ಅನು): 'ಶ್ರೀನಿವಾಸ ವಿರಚಿತ ಯತೀಂದ್ರ ಮತ ದೀಪಿಕೆ', ೧೯೭೧.

೩. ಪ್ರಭಾಕರ ಜೋಶಿ, ಎಂ. ಹೆಗಡೆ, ಸಿದ್ದಾಪುರ ಎಂ.ಎ.: ಭಾರತೀಯ ತತ್ವಶಾಸ್ತ್ರ ಪರಿಚಯ, ೧೯೯೭.

೪. ರೀಟಾ ದುಬೆ: 'ರಾಮಾನುಜನ್ ಕಾನ್ಶಿಸಿಯನ್ಸ್', ೧೯೭೬.

೫. ಹಿರಿಯಣ್ಣ: 'ಭಾರತೀಯ ತತ್ವಶಾಸ್ತ್ರದ ರೂಪರೇಖೆಗಳು', ೧೯೭೩.

೬. ರಾಘವೇಂದ್ರಾಚಾರ್ಯ ಎಚ್.ಎನ್.: 'ಭಾರತೀಯ ತತ್ವಶಾಸ್ತ್ರ ಸಂಗ್ರಹ', ೧೯೬೧.

೭. ಮಹಾದೇವಪ್ಪ, ಎನ್.ಜಿ.: 'ತರ್ಕಶಾಸ್ತ್ರ' (ನಿಗಮನ), ೧೯೭೬.

❑

೨. ಹುಣಸೂರು ತಾಲ್ಲೂಕಿನ ಐತಿಹಾಸಿಕ ಹಿನ್ನೆಲೆ

– ಎನ್.ಎನ್. ಚಿಕ್ಕಮಾದಯ್ಯ

ಹುಣಸೂರು ತಾಲ್ಲೂಕಿನ ಇತಿಹಾಸವು ಮೈಸೂರು ಜಿಲ್ಲೆಯ ಇತಿಹಾಸದೊಂದಿಗೆ ಸಾರೋದ್ಧಾರವಾಗಿ ಬೆಸೆದುಕೊಂಡು ಬಂದಿದೆ. ಹುಣಸೂರು ಪ್ರಧಾನವಾಗಿ ಚಂಗಾಳ್ವ ಮತ್ತು ಕೊಂಗಾಳ್ವ ಎಂಬಂತಹ ಅರಸು ಮನೆತನಗಳ ಆಳ್ವಿಕೆಗೆ ಸಂಬಂಧಪಟ್ಟಿದ್ದರೂ ಇವರನ್ನು ಕದಂಬರು, ಚೋಳರು, ಗಂಗರು, ಹೊಯ್ಸಳರು, ವಿಜಯನಗರದ ಅರಸರು – ಈ ಎಲ್ಲರೂ ತಮ್ಮ ಕಾಲದ ಅಧಿಕಾರ ಅವಧಿಯಲ್ಲಿ ತಮ್ಮ ಅಧೀನದಲ್ಲಿಟ್ಟುಕೊಂಡಿರುವುದನ್ನು ತಾಲ್ಲೂಕಿನಾದ್ಯಂತ ದೊರಕಿರುವ ಶಾಸನಗಳು ದೃಢಪಡಿಸುತ್ತವೆ.

ಹಾಗಾಗಿ ಇವರಲ್ಲಿ ಚಂಗಾಳ್ವರು ಪರಿಪೂರ್ಣ ಸ್ವತಂತ್ರರಾಗದಿದ್ದರೂ ೧೦ ರಿಂದ ೧೬ನೇ ಶತಮಾನದವರೆವಿಗೂ ಅಂದರೆ ಸುಮಾರು ೬೦೦ಕ್ಕೂ ಹೆಚ್ಚು ವರ್ಷಗಳ ಕಾಲ ಆಳಿದ ಅರಸು ಮನೆತನ ಇದೆಂದು ತಿಳಿದುಬರುತ್ತದೆ.

ಇವರ ಧಾರ್ಮಿಕನೆಲೆಯು ಗೆದ್ದರಾಜರನ್ನು ಹಿಂಬಾಲಿಸಿದ್ದರಿಂದ ಜೈನ, ಶೈವ, ವೀರಶೈವ, ವೈಷ್ಣವ – ಮುಂತಾದ ಧರ್ಮಗಳಿಗೆಲ್ಲ ಆಶ್ರಯ ಕೊಟ್ಟಿದ್ದೂ ಅಲ್ಲದೇ ಕೆಲವೊಮ್ಮೆ ಅನುಸರಿಸಿದಂತೆಯೂ ಕಂಡುಬರುತ್ತದೆ.

ಹುಣಸೂರು ತಾಲ್ಲೂಕಿನಲ್ಲಿ ಇದುವರೆವಿಗೂ ಕೇವಲ ೪೩ ಶಾಸನಗಳು ಮಾತ್ರವೇ ಬೆಳಕಿಗೆ ಬಂದಿವೆ. ಮಿಕ್ಕ ತಾಲ್ಲೂಕುಗಳಿಗೆ ಹೋಲಿಸಿದರೆ ಅಷ್ಟೇನೂ ಹೆಚ್ಚಿನ ಸಂಖ್ಯೆಯಲ್ಲಿ ಶಾಸನಗಳು ದೊರೆತಿಲ್ಲ.

ತಾಲ್ಲೂಕಿನ ಕೇಂದ್ರ ಸ್ಥಾನವಾಗಿರುವ ಹುಣಸೂರಿಗೆ ಸಂಬಂಧಿಸಿದಂತೆ ಅದರ ಪೂರ್ವ ಸ್ಥಳನಾಮವನ್ನಾಗಲಿ – ಪ್ರಾಚೀನತೆಯನ್ನಾಗಲಿ ಗುರುತಿಸಲು ಸಹಾಯಕವಾಗುವಂತಹ ಯಾವುದೇ ಶಾಸನ ಲಭ್ಯವಾಗಿಲ್ಲ. ಈ ಸಂಗತಿಯು ಹುಣಸೂರು

ಪಟ್ಟಣವು ಅಷ್ಟೇನೂ ಪುರಾತನವಲ್ಲ ಎಂಬುದನ್ನು ಸೂಚಿಸುತ್ತದೆ. ಈಗ ದೊರಕಿರುವಷ್ಟು ಶಾಸನಗಳಲ್ಲಿಯೂ ಸುಮಾರು ೧೦ ಶಾಸನಗಳು ತ್ರುಟಿತಗೊಂಡು ಯಾವುದೇ ವಿವರವನ್ನು ದೊರಕಿಸಿಕೊಡುವಲ್ಲಿ ಅಸಮರ್ಥವಾಗಿವೆ.

ತಾಲ್ಲೂಕಿನ ಪ್ರಾರಂಭದ ಇತಿಹಾಸವನ್ನು ತೀರಾ ಸ್ಪಷ್ಟವಾದ ರೇಖೆಗಳಿಂದ ಗುರುತಿಸುವುದು ಕಷ್ಟಸಾಧ್ಯ ಎಂಬ ಅಂಶವನ್ನು ಈಗಾಗಲೇ ಗಮನಿಸಲಾಗಿದೆ. ಆದರೂ ಕ್ರಿ.ಶ. ೧೦ನೇ ಶತಮಾನದ ನಂತರದ ಹುಣಸೂರು ತಾಲ್ಲೂಕಿನ ಇತಿಹಾಸದ ಮೇಲೆ ಶಾಸನ, ಮತ್ತಿತರ ಮಾಹಿತಿಯುಕ್ತ ಆಕರಗಳು ಮಂದವಾದ ಬೆಳಕು ಚೆಲ್ಲುವುದರಿಂದ ಈ ಅವಧಿಯ ಇತಿಹಾಸವನ್ನು ಅರಿಯುವ ಪ್ರಯತ್ನ ಇಲ್ಲಿದೆ.

ತಾಲ್ಲೂಕಿನ ಮೇಲೆ ಸಾಮ್ರಾಜ್ಯಶಾಹಿ ಹಾಗೂ ಸಾಮಂತ ಮನೆತನಗಳೆರಡೂ ಪ್ರಭಾವ ಬೀರಿವೆ. ಇದನ್ನು ಪ್ರತ್ಯೇಕವಾದ ವಿಭಾಗಗಳಲ್ಲಿ ಅಭ್ಯಾಸ ಮಾಡಬಹುದಾಗಿದೆ ಮತ್ತು ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ನಮೂದಿಸಲ್ಪಡಬೇಕಾದ ಸ್ವಾತಂತ್ರ್ಯ ಹೋರಾಟದ ಸ್ಥಿತಿಯನ್ನು ಹುಣಸೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಗಮನಿಸಲಾಗಿದೆ.

ಇಷ್ಟಾಗಿಯೂ ಹುಣಸೂರು ತಾಲ್ಲೂಕಿನಲ್ಲಿರುವ ಪ್ರದೇಶಗಳಲ್ಲಿ ಪೌರಾಣಿಕ ಹಿನ್ನೆಲೆ, ಮಹಾಭಾರತ, ರಾಮಾಯಣಕ್ಕೆ ಸಂಬಂಧಿಸಿದ ಐತಿಹ್ಯಗಳು, ಆಚರಣೆಗಳು, ಸಂಪ್ರದಾಯಗಳು ತುಂಬಿ ತುಳುಕಾಡುತ್ತಿವೆ.

ಪೌರಾಣಿಕ ಹಿನ್ನೆಲೆಯಲ್ಲಿ ಹುಣಸೂರು ತಾಲ್ಲೂಕು

ಈ ಚೆಂಗಾಳ್ವ ಭೂಮಿ ಪೌರಾಣಿಕ ಹಿನ್ನೆಲೆಯನ್ನುಳ್ಳಂತಹ ಪ್ರದೇಶ. ಸುತ್ತಲಿನ ಇಡೀ ಭೂಭಾಗವು ಕುಂತಲ ರಾಜ್ಯವೆಂದೂ, ಅದು ಕುಂತಿಯನಾಡೆಂದೂ, ಕುಂತಿಯು ಭೋಜರಾಜನು ಆಳಿದ ಪ್ರದೇಶವೆಂದೂ ಇಲ್ಲಿನ ಜನರ ನಂಬಿಕೆ. ಈ ಕಾರಣದಿಂದ ಸಮಗ್ರವಾಗಿ ಮೈಸೂರು ಜಿಲ್ಲೆ ಸೇರಿದಂತೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಪಾಂಡವಪುರ, ಕೆ.ಆರ್. ಪೇಟೆ ; ಹಾಸನಜಿಲ್ಲೆಯ ಅರಕಲಗೂಡು, ಕೊಡಗು ಜಿಲ್ಲೆಯ ಸೋಮವಾರಪೇಟೆ – ಈ ಎಲ್ಲ ತಾಲ್ಲೂಕುಗಳ ಗ್ರಾಮಗಳಲ್ಲೂ ಕಾರ್ತಿಕ ಮಾಸದಲ್ಲಿ ಕುಂತಿಯನ್ನು ಪೂಜಿಸುವುದು ಸರ್ವೇಸಾಮಾನ್ಯವಾದ ವಿಷಯವಾಗಿದೆ.

ತಾಲ್ಲೂಕಿನ ಧರ್ಮಾಪುರಕ್ಕೆ ಹಿಂದೆ ಧರ್ಮರಾಯನು ಭೇಟಿ ನೀಡಿದ್ದ ಕಾರಣಕ್ಕೆ ಅದಕ್ಕೆ ಧರ್ಮಾಪುರ । ಧರ್ಮಪುರ ಎಂಬ ಹೆಸರು ಬಂದಿದೆ. ಹಿಂದೆ ಇದಕ್ಕೆ ಮಣಿಪುರ ಎಂಬ ಹೆಸರೂ ಇತ್ತೆಂದು ಐತಿಹ್ಯವಿದೆ.

ಅಲ್ಲದೆ ರಾಮಾಯಣಕ್ಕೆ ಸಂಬಂಧಪಟ್ಟಂತೆಯೂ ಈ ತಾಲ್ಲೂಕಿನಲ್ಲಿ ಅನೇಕ ಊರುಗಳಿವೆ. ರಾಮನು ವನವಾಸಕ್ಕೆಂದು ಬಂದಿದ್ದಾಗ ವಿಶ್ರಾಂತಿಗಾಗಿ ಉಳಿದಿದ್ದ

ಸ್ಥಳ ಇಂದಿನ ರಾಮ ಪಟ್ಟಣವಂತೆ. ಲಕ್ಷ್ಮಣ ಬಿದಿರಕ್ಕಿಯನ್ನು ಮರೆತು ಬಂದ ಸ್ಥಳ ಮರದೂರಾಯಿತೆಂದು ಐತಿಹ್ಯವಿದೆ. ಕೊಡಗಿನ ಇರ್ಫುಸ್ಥಳದಲ್ಲಿ ಸೀತೆ ಬಾಯಾರಿಕೆಯಿಂದ ಬಳಲುತ್ತಿದ್ದಾಗ ಲಕ್ಷ್ಮಣನು ಬಂಡೆಯೊಂದಕ್ಕೆ ಬಾಣವನ್ನು ಹೂಡಿ ಬಂಡೆಯನ್ನು ಸೀಳಿದನಂತೆ. ಸೀಳಿದ ಬಂಡೆಯಿಂದ ನೀರು ಉಕ್ಕಿ ಬಂದಿತಂತೆ. ಹಾಗೆಯೇ ಲಕ್ಷ್ಮಣನ ಬಾಣದಿಂದ ಉಕ್ಕಿಬಂದ ಈ ನೀರು ಮುಂದೆ ಹೊಳೆಯಾಗಿ ಹುಣಸೂರು ಪರಿಸರದಲ್ಲಿ ಲಕ್ಷ್ಮಣತೀರ್ಥ ಎಂಬ ಹೆಸರಿನಿಂದ ಇಂದಿಗೂ ಹರಿಯುತ್ತಲೇ ಇದೆಯಂತೆ. ಹೀಗೆ ತಾಲ್ಲೂಕಿನ ಪ್ರತಿಯೊಂದು ಪ್ರದೇಶಕ್ಕೂ ಪುರಾಣ, ಐತಿಹ್ಯಗಳಿವೆ.

ಇತಿಹಾಸ ಪೂರ್ವಕಾಲದಲ್ಲಿ ಹುಣಸೂರು

ಕ್ರಿ.ಶ. ೨ನೆಯ ಶತಮಾನದ ಪುನ್ನಾಡು ಅರಸರ ಕಾಲದಲ್ಲಿ ಇತಿಹಾಸದ ಮರಗುಹೊತ್ತಿರುವ ಕೆಲವು ಸಂಗತಿಗಳು ಈ ತಾಲೂಕಿನ ಪ್ರದೇಶದಲ್ಲಿ ಗೋಚರಿಸುತ್ತವೆ. ಪುನ್ನಾಡು ಮನೆತನವು ಕ್ರಿ.ಶ. ೨ನೇ ಶತಮಾನದಿಂದಲೂ ಇತಿಹಾಸದಲ್ಲಿ ಗಣನೀಯವಾದ ಸ್ಥಾನವನ್ನು ಪಡೆದಿದ್ದ ಅಂಶವು ಕೆಲವು ತಮಿಳು ಕೃತಿಗಳಿಂದ ಮತ್ತು ಟಾಲೆಮಿಯ ಕೃತಿಯಿಂದ ತಿಳಿದುಬರುತ್ತದೆ. ಇಲ್ಲಿಯ ಚರಿತ್ರೆಯ ಪ್ರಾರಂಭದ ಘಟ್ಟದಲ್ಲೇ ಈ ಸ್ಥಳ ಪುನ್ನಾಟ; ಪುಂರಾಷ್ಟ್ರ, ಪುನ್ನಾಡು, ಪುದಲ್ನಾಡು ಎಂದೆಲ್ಲ ಕರೆಸಿಕೊಂಡಿದೆ. ಆದರೆ ಇದರ ವಿಸ್ತೀರ್ಣ ಅಸ್ಪಷ್ಟ.

೬ನೆಯ ಶತಮಾನದ ಯಳಂದೂರಿನ ಮಾಂಬಳ್ಳಿಯ ೧೬೨ನೇ ಶಾಸನದ ಪ್ರಕಾರ ಈ ಪುನ್ನಾಡು ಕಪಿಲಾ-ಕಾವೇರಿಯರಿಂದ ಅಲಂಕೃತಗೊಂಡನಾಡು ಎಂದು ವರ್ಣಿಸಿರುವುದರಿಂದ ಹುಣಸೂರು ತಾಲ್ಲೂಕಿನ ಪ್ರದೇಶವು ಪುನ್ನಾಡಿನ ವ್ಯಾಪ್ತಿಗೆ ಸೇರಿತು ಎಂಬುದನ್ನು ಖಚಿತವಾಗಿ ಹೇಳಬಹುದು. ಆದರೆ ತಾಲ್ಲೂಕಿನ ಬಗ್ಗೆ ಮಾತ್ರ ಮಾಹಿತಿಗಳು ಲಭ್ಯವಾಗುವುದಿಲ್ಲ.

ಗಂಗರು

ಮೈಸೂರು ಜಿಲ್ಲೆಯನ್ನು ಕಾಲದಿಂದ ಕಾಲಕ್ಕೆ ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಅರಸರು ಎಂಬಂತೆ ಬೇರೆ ಬೇರೆ ರಾಜಮನೆತನದವರು ತಮ್ಮ ಸಾಮ್ರಾಜ್ಯದ ಒಂದು ಭಾಗವಾಗಿಸಿಕೊಂಡು ಆಳ್ವಿಕೆ ನಡೆಸುತ್ತಾ ಬಂದಿದ್ದಾರೆ.

ಅದೇ ನೆಲೆಯಲ್ಲಿ ಹುಣಸೂರು ತಾಲ್ಲೂಕೂ ಕೂಡ ಗಂಗರಸರ ಮನೆತನದ ಆಳ್ವಿಕೆಯಲ್ಲಿ ಮುನ್ನಡೆದು ಬಂದಿದೆ. ಗಂಗರು ೨೦೦ ವರ್ಷಗಳ ಕಾಲ ರಾಜ್ಯಭಾರ

ಮಾಡಿದರು. ಅವರ ರಾಜ್ಯಕ್ಕೆ ಗಂಗವಾಡಿ ೯೬,೦೦೦ ಎಂಬ ಹೆಸರಿತ್ತು. ಹುಣಸೂರು ತಾಲ್ಲೂಕಿನ ಹರವೆ ಗ್ರಾಮದಲ್ಲಿ ೮ನೆಯ ಶತಮಾನಕ್ಕೆ ಸೇರಿದ ಗಂಗರ ಕಾಲದ ಶಾಸನವೊಂದು ಲಭಿಸಿದೆ. ಬಹಳ ತ್ರುಟಿತವಾಗಿದೆ. ಅಲ್ಲಿನ ಕೆಲವು ಅಕ್ಷರಗಳ ಬಲದಿಂದ ವಿದ್ವಾಂಸರು ಅದು ಗಂಗರ ಶಿವಮಾರನ ಆಳ್ವಿಕೆಯ ಕಾಲದ್ದೆಂದು ಊಹಿಸಿದ್ದಾರೆ.

ಚೋಳರು

ಗಂಗರ ತರುವಾಯ ಚೋಳರು ಅಭಿವೃದ್ಧಿಗೆ ಬಂದರು. ಒಂದನೆಯ ರಾಜ ರಾಜ ಚೋಳನಿಂದ ಒಂದನೆಯ ಕುಲೋತ್ತುಂಗ ಚೋಳನವರೆಗೆ ಒಂದು ಶತಮಾನದಷ್ಟು ಕಾಲ ಮೈಸೂರು ಜಿಲ್ಲೆಯು ಚೋಳರ ಆಳ್ವಿಕೆಯಲ್ಲಿತ್ತು. ರಾಜೇಂದ್ರ ಚೋಳದೇವ ಎಂದು ಉಲ್ಲೇಖಿಗೊಂಡಿರುವ ಚೋಳ ದೊರೆಯ ಶಾಸನವೊಂದು ತಾಲ್ಲೂಕಿನ ಮರೂರಿನಲ್ಲಿ ಲಭಿಸಿದೆ. ಆ ದೊರೆಯು ಒಂದನೆಯ ರಾಜೇಂದ್ರ ಚೋಳನೆಂದು ಭಾವಿಸಲಾಗಿದೆ. ಅದರ ಕಾಲ ಸುಮಾರು ೧೦೨೦. ಅದೊಂದು ವೀರಗಲ್ಲು. ವರಲಕ್ಷಗೌಡನಮಗ ರಾಜೇಂದ್ರ ಚೋಳ ಶೆಟ್ಟಿಂಯು ವೀರಮರಣವನ್ನಪ್ಪಿದಾಗ ಅವನಿಗೆ ನೀಡಲಾದ ಕೊಡುಗೆಯ ವಿಚಾರ ಅದರಲ್ಲಿದೆ. ದೊರೆಯ ಹೆಸರು ಮತ್ತು ವೀರನ ಹೆಸರು ಒಂದೇ ಆಗಿರುವುದು ಇಲ್ಲಿ ಗಮನಾರ್ಹವಾಗಿದೆ.

ಹೊಯ್ಸಳರು

ತಾಲ್ಲೂಕಿನ ಲಕ್ಷ್ಮಣತೀರ್ಥ ನದಿ ಬಲದಂಡೆಯ ಮೇಲೆ ರಾಮಪಟ್ಟಣದ ಪಶ್ಚಿಮಕ್ಕೆ ಹೊಂದಿಕೊಂಡಂತೆ ಒಂದು ವಾಸ್ತವ್ಯವೂ ಇದ್ದಿತೆಂದೂ ಅದಕ್ಕೆ "ಪೆರ್ಜಾಜಿ" ಎಂಬ ಹೆಸರು ಇತ್ತೆಂದು ತಾಲ್ಲೂಕಿನ ೧೬ನೇ ಶಾಸನದಿಂದ ತಿಳಿದುಬಂದಿದೆ. ಇದರ ದಕ್ಷಿಣಕ್ಕೆ ಕಿರಿಬಾಜಿ ಎಂಬ ಗ್ರಾಮವು ಈಗಲೂ ಅಸ್ತಿತ್ವದಲ್ಲಿದೆ.

ಶಾಲಿವಾಹನ ಶಕೆ ೧೦೪೩ ಅಂದರೆ ಕ್ರಿ.ಶ. ೧೧೨೧ರಲ್ಲಿ ಹೊಯ್ಸಳ ಸೇನಾಪತಿಗಳೂ, ಸೋದರರೂ ಆದ ಮಾಚನಾಯಕ ಮತ್ತು ಚಿಟ್ಟನಾಯಕ ಎಂಬುವರು ಈ ಭಾಗದಲ್ಲಿ ದಂಡಯಾತ್ರೆ ನಡೆಸಿ ವಿಜಯದ ಸಂಕೇತವಾಗಿ ತಾಯಿ ಕಮ್ಮಬ್ಬೆಯ ನೆನೆಪಿನಲ್ಲಿ ಜಂಟಿ ಬಸದಿಯನ್ನು ಸೋದರರು ನಿರ್ಮಾಣಮಾಡಿ ಪೆರ್ಜಾಜಿ (ಈಗ ಅಸ್ತಿತ್ವದಲ್ಲಿಲ್ಲ), ಮೂಕನಹಳ್ಳಿ, ಈಗಿನ ತಟ್ಟೆಕೆರೆಯ ತಾವರೆಕೆರೆಯ ಅಂಗಳದಲ್ಲಿನ ಜಮೀನುಗಳನ್ನು ದತ್ತಿಯಾಗಿ ಬಿಟ್ಟುಕೊಟ್ಟಿರುವ ಅಂಶವು ೧೬ನೆಯ ಶಿಲಾಶಾಸನದಿಂದ ತಿಳಿದುಬರುತ್ತದೆ.

ಚಂಗಾಳ್ವರು

ಕರ್ನಾಟಕವನ್ನು ಕದಂಬರು, ರಾಷ್ಟ್ರಕೂಟರು, ಗಂಗರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು – ಇಂಥ ದೊಡ್ಡ ದೊಡ್ಡ ರಾಜವಂಶಗಳು ಆಳಿದ್ದರೂ ಸಣ್ಣಪುಟ್ಟ ರಾಜಮನೆತನಗಳ ರಾಜರುಗಳು, ಸಾಮಂತರುಗಳು, ಪಾಳೆಯಗಾರರುಗಳು, ನಾಡಿನ ಇತಿಹಾಸ, ಘನತೆ, ವೈಭವ, ಸಂಸ್ಕೃತಿಗಳನ್ನು ಸಂಪನ್ನಗೊಳಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದಾರೆಂಬುದು ಅವಜ್ಞೆಯ ವಿಷಯವಲ್ಲ. ಏಕೆಂದರೆ ದೊಡ್ಡ–ದೊಡ್ಡ ರಾಜರುಗಳ ಅಸ್ತಿತ್ವ ಇಂಥ ಪುಟ್ಟ–ಪುಟ್ಟ ರಾಜವಂಶಗಳ ತಳಪದಿಯ ಮೇಲೆ ಭದ್ರವಾಗಿತ್ತು ಎಂಬುದನ್ನು ಅಲಕ್ಷಿಸುವುದು ಸರಿಯಲ್ಲ. ಇವರ ತ್ಯಾಗ ಜೀವನ, ಸಾಹಸ ಕಾರ್ಯಗಳು, ದಾನೌದಾರ್ಯಗಳು ಧರ್ಮಪ್ರಸಾರ, ಸಾಹಿತ್ಯಪ್ರಚಾರ, ಸಂಗೀತ, ನಾಟ್ಯ, ಶಿಲ್ಪ, ಚಿತ್ರಕಲೆಗಳಿಗೆ ಅವರು ಕೊಟ್ಟ ಉತ್ತೇಜನ, ಜೀವರಕ್ಷಕ ವೈದ್ಯಶಾಲೆ, ಕೆರೆಕಟ್ಟೆ, ಬಾವಿಗಳನ್ನು ಕಟ್ಟಿಸಿ ಕೊಡುವಂತಹ ಸಾಮಾಜಿಕ ಸೇವಾಕಾರ್ಯತತ್ಪರತೆ ಮುಂತಾದ ಮಹತ್ಕಾರ್ಯಗಳನ್ನು ಮರೆಯುವುದು ಸರಿಯಲ್ಲ. ದೊಡ್ಡ ದೊಡ್ಡ ರಾಜರುಗಳಿಗೆ ಕಪ್ಪಕಾಣಿಕೆಗಳನ್ನು ಕೊಟ್ಟು ಅವರನ್ನು ಉಪ್ಪರಿಗೆಯಲ್ಲಿ ಸಂತೃಪ್ತರಾಗಿರುವಂತೆ ಮಾಡುತ್ತಿದ್ದವರೂ ಇವರೇ. ಅವರ ಪರವಾಗಿ ಭೀಕರ ಯುದ್ಧಗಳಲ್ಲಿ ವೀರಾವೇಶದಿಂದ ಹೋರಾಡಿ ಗೆದ್ದುಕೊಡುತ್ತಿದ್ದ ಗಂಡು ಗಲಿಗಳೂ ಇವರೇ. ಪ್ರಭುಭಕ್ತಿಯ ಪರಾಕಾಷ್ಠೆಗೆ ಪ್ರತೀಕಗಳಾಗುತ್ತಿದ್ದ ಇವರು ರಾಜಮಹಾರಾಜರುಗಳಿಗಾಗಿ ಹಣ ಹಾಗೂ ಹರಣಗಳನ್ನು ಹಿಂದೂ ಮುಂದೂ ನೋಡದೆ ಅರ್ಪಿಸಿಕೊಳ್ಳುತ್ತಿದ್ದ ಹನುಮತ್ಪರಾಕ್ರಮಿಗಳೂ ಇವರೇ.

ಆದರೆ ಇಂಥ ಮಹಾಧೀರರೂ, ದಾನಶೂರರೂ, ಧರ್ಮವೀರರೂ ಆದ ಸಾಮಂತರನ್ನೆಲ್ಲ ರಾಜಮಹಾರಾಜರೆನಿಸಿಕೊಂಡಿದ್ದವರು ತಮ್ಮ ಅಧೀನದಲ್ಲಿ ಇಟ್ಟುಕೊಂಡು ಅವರ ರಾಜನಿಷ್ಠೆಯ ವಜ್ರಕವಚದಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಹೀಗೆ ದೊಡ್ಡ ಕಟ್ಟಡದ ಅಸ್ತಿಭಾರವೂ, ತೊಲೆಗಂಬವೂ ಆಗಿದ್ದುಕೊಂಡು ದೊಡ್ಡ ಕಟ್ಟಡವನ್ನು ರಕ್ಷಿಸುತ್ತಿದ್ದವರೇ ಈ ಪುಟ್ಟ ಪುಟ್ಟ ರಾಜವಂಶಗಳು.

ಕರ್ನಾಟಕದಲ್ಲಿ ಇಂಥ ರಾಜವಂಶಗಳು ಬಹಳಷ್ಟು ಆಗಿ ಹೋಗಿವೆ. ಅವುಗಳಲ್ಲಿ ಸೇವುಣರು, ನೊಳಂಬರು, ಸಿಂಧರು, ಸೇಂದ್ರಕರು, ಶಿಲಾಹಾರರು, ಚಂಗಾಳ್ವರು, ಕೊಂಗಾಳ್ವರು, ಉಮ್ಮತ್ತೂರು ಪಾಳೆಯಗಾರರು, ಕೆಳದಿಯ ಅರಸರು, ಕಿತ್ತೂರು ಅರಸರು. ಚಿತ್ರದುರ್ಗದ ಪಾಳೆಯಗಾರರು, ತರೀಕೆರೆ ಪಾಳೆಯಗಾರರು, ಅವಂತೀನಾಡ ಪ್ರಭುಗಳು, ಕೊಡಗಿನ ಅರಸರು, ಪುನ್ನಾಟ ಪ್ರಭುಗಳು, ಹೊಳೆನರಸೀಪುರದ ಪ್ರಭುಗಳು, ನುಗ್ಗೇಹಳ್ಳಿಯ ಪ್ರಭುಗಳು, ಕಾನಕಾನಹಳ್ಳಿಯ ಪ್ರಭುಗಳು – ಇಂಥ ಹಲವಾರು ರಾಜಮನೆತನಗಳಿವೆ.

ಕರ್ನಾಟಕದ ಇತಿಹಾಸದಲ್ಲಿ ಇನ್ನೂ ಕತ್ತಲೆಯ ಕೋಣೆಯಿಂದ ಹೊರಬಂದಿರದ ಅದೆಷ್ಟೋ ಅರಸುಮನೆತನಗಳಿವೆ. ಅವುಗಳಲ್ಲಿ ಚಂಗಾಳ್ವ ಮನೆತನವೂ ಕೂಡ ಒಂದು. ಚಂಗಾಳ್ವ ಮನೆತನದವರನ್ನು ಬಿ.ಎಲ್.ರೈಸ್‌ರವರೇ ಮೊದಲಬಾರಿಗೆ ಬೆಳಕಿಗೆ ತಂದಿದ್ದಾರೆ. ಹಯವದನರಾವ್, ಸ್ಯಯಲ್ ಮತ್ತು ಅಯ್ಯಂಗಾರ್, ಎಂ.ವಿ. ಕೃಷ್ಣರಾವ್, ಡಾ.ಬಿ.ಆರ್.ಗೋಪಾಲ್, ಡಾ. ಸೂರ್ಯನಾಥ ಕಾಮತ್, ಡಾ. ಪಿ.ಕೆ. ರಾಜಶೇಖರ್, ಎಚ್.ಎಸ್. ಗೋಪಾಲರಾವ್ ಮೊದಲಾದ ವಿದ್ವಾಂಸರು ಚಂಗಾಳ್ವರನ್ನು ಕುರಿತು ಪರಿಶೀಲನೆ ಮಾಡಿದ್ದಾರೆ. ಆದರೂ ಚಂಗಾಳ್ವ, ಕೊಂಗಾಳ್ವರಂತಹ ಅರಸುಮನೆತನಗಳವರು ಇತಿಹಾಸ ಕೃತಿಗಳಲ್ಲಿ ಹೆಚ್ಚಿನ ಮಹತ್ವ ಪಡೆದಿಲ್ಲ. ಪ್ರಧಾನ ಅರಸು ಮನೆತನಗಳವರ ಬಗೆಗೆ ಪ್ರಸ್ತಾಪಿಸುವಾಗ ಆನುಷಂಗಿಕವಾಗಿ ಇಂತಹ ಅರಸುಮನೆತನಗಳವರನ್ನು ಉಲ್ಲೇಖಿಸಲಾಗಿದೆ.

ಚಂಗಾಳ್ವರ ಶಾಸನಗಳು ಎಡತೊರೆ ಕೃಷ್ಣರಾಜನಗರ ಮತ್ತು ಹುಣಸೂರು ತಾಲ್ಲೂಕುಗಳಲ್ಲಿ ಲಕ್ಷ್ಮಣತೀರ್ಥದ ಪಶ್ಚಿಮ ಭಾಗಗಳಲ್ಲಿ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕುಗಳಲ್ಲಿ ದೊರೆತಿವೆ. ಆದರೆ ಅವರ ಪ್ರಸ್ತಾಪವಿರುವ ಶಾಸನಗಳು ಹಳೇ ಮೈಸೂರು ಭಾಗದಲ್ಲೆಲ್ಲ ಹರಡಿಕೊಂಡಿವೆ. ಅವರ ಮೂಲ ನೆಲೆ ಹುಣಸೂರು ಮತ್ತು ಅದರ ಸುತ್ತ ಮುತ್ತಲ ಪ್ರದೇಶವಾಗಿತ್ತು. ಇದೇ ಚಂಗನಾಡು. ಡೆರೆಟ್‌ರವರು ತಿಳಿಸುವಂತೆ ಚಂಗಾಳ್ವರ ರಾಜ್ಯದ ಎಲ್ಲೆಕಟ್ಟು ಉತ್ತರ–ದಕ್ಷಿಣಕ್ಕೆ ಹೇಮಾವತಿಯಿಂದ ಕಾವೇರಿಯವರೆಗೆ, ಪೂರ್ವ–ಪಶ್ಚಿಮಕ್ಕೆ ಕಾವೇರಿಯಿಂದ ಕೊಡಗಿನವರೆಗೆ.

ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಚಂಗಾಳ್ವ ರಾಜವಂಶ ಪುಟ್ಟ ಅರಸು ಮನೆತನವೆನಿಸಿಕೊಂಡರೂ ಸು. ೧೧ನೇ ಶತಮಾನದಿಂದ ೧೭ನೇ ಶತಮಾನದವರೆಗೂ ಅಂದರೆ ಸು. ೭೦೦–೮೦೦ ವರ್ಷಗಳವರೆಗೂ ದೀರ್ಘಕಾಲ ರಾಜ್ಯಭಾರ ಮಾಡಿದ ರಾಜವಂಶವೆಂದರೆ ಯಾರೊಬ್ಬರಿಗೂ ಸೋಜಿಗವೆನಿಸುತ್ತದೆ. ಚಂಗಾಳ್ವರಂತೆ ಅವರ ಸಮಕಾಲೀನರಾದ ಕೊಂಗಾಳ್ವರ ಇತಿಹಾಸವೂ ಕೊಡಗಿನ ಇತಿಹಾಸದೊಂದಿಗೆ ಹಾಸುಹೊಕ್ಕಾಗಿದೆ. ಚಂಗಾಳ್ವರಿಗೂ ಕೊಂಗಾಳ್ವರಿಗೂ ನಡುವೆ ಪದೇ ಪದೇ ಯುದ್ಧಗಳಾಗುತ್ತಿದ್ದು ಕೊನೆಗೆ ೧೩ನೇ ಶತಮಾನದಲ್ಲಿ ಒಂದೇ ಮೂಲದವರಾಗಿದ್ದು ದಾಯಾದಿಗಳಾಗಿದ್ದಿರಬಹುದು. ಈ ಇವರ್ವರೂ ಬೆಟ್ಟ–ಗುಡ್ಡಗಳ ಪ್ರದೇಶವನ್ನು ಆಳುತ್ತಿದ್ದರೆಂದೂ ಸ್ಪಷ್ಟವಾಗುತ್ತದೆ. ಹೊಯ್ಸಳರು ಇವರನ್ನು 'ಮಲೆಪರು' ಎಂದು ಕರೆದಿದ್ದಾರೆ.

ಚಂಗಾಳ್ವರು ತಾವು ಚಂದ್ರವಂಶದವರೆಂದೂ, ಯಾದವಕುಲಕ್ಕೆ ಸೇರಿದವರೆಂದೂ, ದ್ವಾರಾವತಿಯಿಂದ ಬಂದವರೆಂದೂ, ಮೈಸೂರು ಅರಸು ಹೇಳಿಕೊಂಡಿರುವಂತೆಯೇ

ಇವರೂ ಹೇಳಿಕೊಂಡಿದ್ದಾರೆ. ಆದರೆ ಅವರು ಬಹುಶಃ ಕದಂಬರ ಅಥವಾ ಚಾಲುಕ್ಯರ ಅಧೀನರಾಗಿದ್ದ ಆಳುಪರ ಬಿಂದು ಶಾಖೆಯವರಾಗಿದ್ದಿರಬಹುದು. ಆಳುಪ ಎಂಬುದು 'ಆಳುವ' 'ಆಳ್ವ' ಆಗುವ ಸಾಧ್ಯತೆ ಇದೆ. ಈ ಆಳ್ವ ಎಂಬ ಪದ ಚಂಗಾಳ್ವರೂ ಕೊಂಗಾಳ್ವರೂ ಒಂದೇ ಮೂಲದವರೆಂದು ಹೇಳಬಹುದಾಗಿದೆ. ಆದರೆ ಈ ಈರ್ವರ ಶಾಸನಗಳಲ್ಲೂ ಆಳುಪರ ವಿಷಯ ಎಲ್ಲೂ ಕಂಡುಬರುವುದಿಲ್ಲ.

'ಚಂಗ' ಎಂಬುದಕ್ಕೆ ಸುಂದರ ಅರ್ಥ ಇರುವಂತೆ ಚಂದ ಎಂಬ ಅರ್ಥಕ್ಕೂ ಇದು ಹತ್ತಿರದ ಪದವಾಗಿದೆ. ಚಂಗಾಳ್ವರು ಸುಂದರ ಕಾಯದವರಾಗಿದ್ದುದರಿಂದ ಅವರ ರಾಜಸಂತತಿಗೆ ಚಂಗಾಳ್ವರು ಎಂಬ ಹೆಸರು ಬಂದಿರಬಹುದು ಅಥವಾ ಬಹಳಷ್ಟು ರಾಜವಂಶಗಳು ತಮ್ಮನ್ನು ಚಂದ್ರವಂಶದವರೆಂದು ಕರೆದುಕೊಳ್ಳುವಂತೆ ಇವರೂ ತಮ್ಮನ್ನು ಚಂದ್ರವಂಶದವರೆಂದು ಕರೆದುಕೊಂಡಿರಬಹುದು. ಚಂಗ ಅರಸರನಾಡು ಚಂಗನಾಡು ಎಂಬ ಹೆಸರಾಯಿತೆಂದು ಕಾಣುತ್ತದೆ.

ಚಂಗಾಳ್ವರನ್ನು ಕೊಡವರೆಂದೂ, ಕೊಡಗಿನ ರಾಜಸಂತತಿಯವರೆಂದೂ ಎಂ.ಪಿ. ಕಾರ್ಯಪ್ಪ (ಕಾರಿಯಪ್ಪ) ಮತ್ತು ಶ್ರೀಮತಿ ಪೊನ್ನಮ್ಮ ಕಾರಿಯಪ್ಪ ಪುಷ್ಟೀಕರಿಸಲು ಪ್ರಯತ್ನಿಸಿದ್ದಾರೆ. ಆದರೆ ಚಂಗಾಳ್ವರು ಕೊಡಗಿನ ಪ್ರದೇಶವನ್ನು ಆಳಿದರಾದರೂ ಕೊಡವರೇ ಇವರೆಂದು ಹೇಳುವುದು ಕಷ್ಟವೆನಿಸುತ್ತದೆ. ಏಕೆಂದರೆ ಕೊಡಗು ಪ್ರದೇಶದಲ್ಲಿರುವ ಜನರೆಲ್ಲರೂ ಕೊಡವ ಜಾತಿಗೆ ಸೇರಿದವರಲ್ಲ.

ಅಲ್ಲದೆ ಆ ವಂಶದ ಪಳೆಯುಳಿಕೆಯಾಗಿ ಈಗಲೂ ತಮ್ಮನ್ನು ಚಂಗಾಳ್ವರೆಂದು ಗುರುತಿಸಿಕೊಳ್ಳುವ ಮನೆತನದವರು ಹುಣಸೂರು, ಪಿರಿಯಾಪಟ್ಟಣ, ಕೊಡಗು, ಕೃಷ್ಣರಾಜಪೇಟೆ, ನಾಗಮಂಗಲ ತಾಲ್ಲೂಕುಗಳ ಕಡೆಗಳಲ್ಲೆಲ್ಲಾ ಇದ್ದಾರೆ. ಚಂಗಾಳ್ವ, ಚಂಗಪ್ಪ, ಚಂಗಮಣಿ, ಚಂಗೇಗೌಡ, ಚಂಗೀರಯ್ಯ, ಚಂಗಲರಾಯರೆಡ್ಡಿ ಎಂಬ ಹೆಸರಿನ ವ್ಯಕ್ತಿಗಳು ಈ ಸುತ್ತಿನಲ್ಲಿ ಇರುವರಲ್ಲದೆ ಅವರು ತಮ್ಮ ವಂಶದ ಕುರುಹನ್ನು ಹೆಮ್ಮೆಯಿಂದ ಹೇಳಿಕೊಳ್ಳುವರೂ ಆಗಿದ್ದಾರೆ.

ಚಂಗಾಳ್ವರ ಮೂಲನೆಲೆಗಳಲ್ಲಿ ಒಂದಾಗಿರುವ ಬೆಟ್ಟದ ತುಂಗದಲ್ಲಿ ಚಂಗಾಳ್ವ ಅರಸರು ಇಂದಿಗೂ ಇದ್ದಾರೆ. ಈ ಊರಿನಿಂದ ಹುಣಸೂರಿನ (ಅಂದಿನ ಧಾತುಪುರಿ) ಕಲ್ಲಹಳ್ಳಿಗೆ ದತ್ತುಪುತ್ರರಾಗಿ ಹೋದವರು ಕರ್ನಾಟಕದ ಧೀಮಂತ ನಾಯಕರಲ್ಲಿ ಒಬ್ಬರೆನಿಸಿದ ದಿ॥ ಡಿ. ದೇವರಾಜ ಅರಸು ಹಾಗೂ ಸುಪ್ರಸಿದ್ಧ ಚಲನಚಿತ್ರನಟ ಕೆಂಪರಾಜ ಅರಸ್ ಅವರು.

'ಕಲ್ಲಹಳ್ಳಿ'ಯ ಅರಸರುಗಳು ಸುಪ್ರಸಿದ್ಧ ಕವಿಗಳಾದ ಮಂಗರಸ ಹಾಗೂ ನಂಜುಂಡ ಕವಿಯ ವಂಶದವರು.

ಚಂಗಾಳ್ವರು ಬೇರೆ ಬೇರೆ ರಾಜರುಗಳ ಸಾಮಂತರಾಗಿದ್ದ ಕಾಲದಲ್ಲಿ ಬೇರೆ ಬೇರೆ ಅರಸು ಮನೆತನಗಳ ಜೊತೆಗೆ ಕೊಡು-ಕೊಳ್ಳುಗೆ ಸಂಬಂಧ ಬೆಳೆಸಿದ್ದರಿಂದಲೋ ಬೇರೆ-ಬೇರೆ ಧರ್ಮಗಳನ್ನು ಸ್ವೀಕರಿಸಿದ ಕಾರಣದಿಂದಲೋ ಒಡೆದು ಹೋಗಿರಬಹುದೆಂದು ಕಾಣುತ್ತದೆ. ಅವರು ಅನಿವಾರ್ಯ ಪರಿಸ್ಥಿತಿ ಒದಗಿಬಂದ ಕಾರಣದಿಂದ ಚೋಳರಿಗೆ ಮಾಂಡಲೀಕರಾದಾಗ ಕಾಪಾಲಿ ಶೈವರಾಗಿದ್ದು. ಹೊಯ್ಸಳರ ಅಧೀನಕ್ಕೆ ಬಂದಾಗ ಅವರಂತೆಯೇ ಜೈನಧರ್ಮದ ಜೊತೆಗೆ ಶೈವ ಹಾಗೂ ಶ್ರೀ ವೈಷ್ಣವ ಧರ್ಮಗಳನ್ನೂ ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಾಗ ವೀರಶೈವ ಹಾಗೂ ಭಾಗವತ ಧರ್ಮಗಳನ್ನೂ ಅನುಸರಿಸಿಕೊಂಡುಬಂದು ಸರ್ವಧರ್ಮ ಸಮನ್ವಯಿಗಳಂತೆ ಕಂಡರೂ ೧೫ನೇ ಶತಮಾನದ ಹೊತ್ತಿಗೆ ಕಟ್ಟುಗ್ರ ವೀರಶೈವರಾದಂತೆ ಕಾಣುತ್ತದೆ.

ವಿಜಯನಗರದ ಮಹಾದಂಡನಾಯಕ ಲಕ್ಕಣ್ಣದಂಡೇಶನು ಬರೆದಿರುವ ಶಿವತತ್ವ ಚಿಂತಾಮಣಿಯಲ್ಲಿ ತಾಲ್ಲೂಕಿನ ಅನೇಕ ಶರಣರ ಹೆಸರುಗಳಿವೆ. ತರಿಕಲು ಗ್ರಾಮದ ಲಿಂಗಶೆಟ್ಟಿ, ಹೊನ್ನೂರಿನ ಕಡಗದ ಕಾಯಕ ವಿರುಪಣ್ಣ, ಮಿವಿಳೆ ಮೇಳಾವಿ; ಮರದೂರು ಮಲ್ಲಪ್ಪ; ಮೋದೂರಿನ ಸದಾಶಿವಯೋಗಿ ಕಾಣಿಸಿಕೊಂಡಿದ್ದಾನೆ. ಅಂತೆಯೇ ಈತನ ಕಾಲ ೧೫೫೪, ಕೃತಿ 'ರಾಮನಾಥವಿಲಾಸ', ಪ್ರೌಢ ಚಂಪೂ ಕಾವ್ಯ. ಈತ ಶಾಂತನೃಪನ ಆಶ್ರಯದಲ್ಲಿದ್ದಂತೆ ಹೇಳಿಕೊಂಡಿದ್ದಾನೆ. ಆದರೆ ಈ ಶಾಂತನೃಪ ಯಾರೆಂಬುದರ ವಿವರಗಳು ತಿಳಿದುಬಂದಿಲ್ಲ. ತಾನು ಮೋದೂರು ಅಥವಾ ಮುದ್ರಾಪುರದವನೆಂದು ಹೇಳಿಕೊಂಡಿದ್ದಾನೆ. ಚಂಗಾಳ್ವರು ವೀರಶೈವ ಧರ್ಮವನ್ನು ಸ್ವೀಕರಿಸಿದ ಕುರುಹಾಗಿ ಹುಣಸೂರು ತಾಲ್ಲೂಕಿನ ಪ್ರತಿಯೊಂದು ಹಳ್ಳಿಯಲ್ಲೂ ಇರುವ ಬಸವನ ಗುಡಿಗಳು ಹಿರಿಯ ಸಾಕ್ಷಿಗಳಾಗಿವೆ.

ಚಂಗಾಳ್ವರು ಜೈನಧರ್ಮಕ್ಕೆ ಕೊಟ್ಟಿದ ಪ್ರಾಮುಖ್ಯವನ್ನು ಚಂಗನಾಡಿನ ಚಿಕ್ಕ ಹನಸೋಗೆಯ ತ್ರಿಕೂಟ ಬಸದಿಯಾದ ಅಬ್ಬೆಯ ಜಿನಾಲಯವೆಂದೇ ಪ್ರಸಿದ್ಧವಾಗಿರುವ ಶಾಂತೇಶ್ವರ - ಆದೀಶ್ವರ - ನೇಮೀಶ್ವರ ಬಸದಿಗಳು: ಅರಸು ಕಲ್ಲಹಳ್ಳಿಯ ಆದಿದೇವನ ಬಸದಿ; ಯವುಗುಂಬದ ಪಾರ್ಶ್ವನಾಥ ಬಸದಿ; ಗೊಮ್ಮಟಗಿರಿಯ ಬಾಹುಬಲಿಯ ಶ್ರೀಕ್ಷೇತ್ರ, ಬೆಟ್ಟದ ತುಂಗದ ಆದಿನಾಥಬಸದಿ; ಭುವನಹಳ್ಳಿಯ ಚಂದ್ರನಾಥಬಸದಿ, ರಾವಂದೂರಿನ ಸುಮತೀ ತೀರ್ಥಂಕರ ಬಸದಿ; ಸಾಲಿಗ್ರಾಮದ ಅನಂತನಾಥ, ಪಾರ್ಶ್ವನಾಥ ಬಸದಿಗಳು ಸಾರಿ ಹೇಳುತ್ತವೆ.

ಇವುಗಳ ಜೊತೆಗೆ ಜನಸಾಮಾನ್ಯರ ಧಾರ್ಮಿಕ ಶ್ರದ್ಧೆಗಳಿಗೂ ಚಂಗಾಳ್ವರ ಕೃಪೆ ಇತ್ತೆಂಬುದಕ್ಕೆ "ಮಾರಮ್ಮ, ಓಣಿಯಮ್ಮ, ಕರಿಯಮ್ಮ, ಮಾವತೂರಮ್ಮ, ಕಿತ್ತೂರಮ್ಮ ಮಸಣೀಕಮ್ಮ" ಮುಂತಾದ ಜನಪದ ದೇವತೆಗಳು ಸಾಮಾನ್ಯವಾಗಿ ಎಲ್ಲಾ ಗ್ರಾಮಗಳಲ್ಲೂ ಕಾಣಸಿಗುತ್ತವೆ.

ಹೀಗೆ ಚಂಗಾಳ್ವರು ಜೈನ, ಶೈವ, ವೈಷ್ಣವ, ಕಾಪಾಲಿ, ಕಾಳವೀರಶೈವ ಧರ್ಮಗಳನ್ನೆಲ್ಲ ಆದರದಿಂದ ಆಶ್ರಯಕೊಟ್ಟ ಉದಾರ ಹೃದಯಿಗಳು. ಧರ್ಮ ಸಮನ್ವಯಿಗಳು, ಕಲಾರಾಧಕರು, ಸಾಹಿತ್ಯ ಸೇವಕರು ಹಾಗೂ ಧರ್ಮದೀಪಕರಾಗಿ ಇತಿಹಾಸದ ಪುಟಗಳನ್ನು ಶ್ರೀಮಂತಗೊಳಿಸಿದ್ದಾರೆ.

ಚಂಗಾಳ್ವರ ರಾಜ್ಯ ಸ್ಥಾಪನೆಯ ವಿಚಾರ ಅರೆ ಇತಿಹಾಸ ಹಾಗೂ ಐತಿಹ್ಯಗಳಿಂದ ಕೂಡಿದೆ. ೧೧ನೆಯ ಶತಮಾನದಲ್ಲಿ ದ್ವಾರಕಾಪಟ್ಟಣದಿಂದ ದಕ್ಷಿಣದ ಕಡೆಗೆ ವಲಸೆ ಬಂದ ಜೈನಕ್ಷತ್ರಿಯ ವಿಕ್ರಮ ಚಂಗಾಳ್ವನು ತುಂಗ ಎಂಬಲ್ಲಿ ತನ್ನೊಂದಿಗೆ ಬಂದ ೫೦೦-೬೦೦ ಕುಟುಂಬಗಳೊಂದಿಗೆ ನೆಲೆಸಿದ. ಅವನು ಸುತ್ತಮುತ್ತಲ ಬೇಡರ ನಾಯಕರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದ. ಬೇಡನಾಯಕರಲ್ಲಿ ಪ್ರಬಲರಾದವರು ವಲಸೆಬಂದ ಚಂಗಾಳ್ವರ ಹೆಣ್ಣುಗಳ ಸೌಂದರ್ಯಕ್ಕೆ ಸೋತು ವಿವಾಹ ಸಂಬಂಧಕ್ಕೆ ಒತ್ತಾಯ ಮಾಡಿದಾಗ ವಿಕ್ರಮ ಚಂಗಾಳ್ವನು ವಿವಾಹಕ್ಕೆ ಚಪ್ಪರವನ್ನು ಕಟ್ಟಿಸಿ ಚಪ್ಪರದ ಕೊನೆಯಲ್ಲಿ ನಿರ್ಮಿಸಿದ ಕತ್ತಲೆಯ ಕೋಣೆಯಲ್ಲಿ ಕಂದರವನ್ನು ತೋಡಿಸಿ ಪೂಜೆಯ ನೆಪದಿಂದ ಬೇಡರನ್ನು ಒಬ್ಬೊಬ್ಬರನ್ನಾಗಿ ಕಳುಹಿಸಿ ಅವರನ್ನು ಕಡಿದು ಕಂದಕದಲ್ಲಿ ಹಾಕಿಸಿದ - ಬೇಡರ ಉಪದ್ರವ ಈ ರೀತಿಯಾಗಿ ಮುಕ್ತಾಯವಾಯಿತು.

ಈ ವಿಕ್ರಮ ಚಂಗಾಳ್ವನು ಬೆಟ್ಟದಪುರದ ಈಗಿನ ಶ್ರೀ ಶಿಡ್ಲುಮಲ್ಲಿಕಾರ್ಜುನ ಬೆಟ್ಟದಲ್ಲಿ ಬಿಡಾರ ಬಿಟ್ಟಿದ್ದಾಗ ಮೊಲವೊಂದು ಬೇಟೆಯ ನಾಯಿಯನ್ನು ಅಟ್ಟಿಸಿಕೊಂಡು ಹೋಗುತ್ತಿದ್ದ ದೃಶ್ಯವನ್ನು ಕಂಡು ಆ ಭೂಮಿಯು ರಾಜ್ಯ ಸ್ಥಾಪನೆಗೆ ಯೋಗ್ಯವಾದ ಗಂಡುಭೂಮಿ ಎಂದು ತಿಳಿದು ಅಲ್ಲಿ ಕೋಟೆ ಸಮೇತ ಪಟ್ಟಣವನ್ನು ಕಟ್ಟಿಸಿ ಅದನ್ನು ಬೆಟ್ಟದಪುರವೆಂದು ಕರೆದ. ತರುವಾಯ ಅವನು ಬೆಟ್ಟದಪುರದ ಆಡಳಿತವನ್ನು ತನ್ನ ಮಗ ಚಂಗಲರಾಯನಿಗೂ, ಕಲ್ಲಹಳ್ಳಿಯನ್ನು (ಧಾತುಪುರಿ) ತನ್ನ ಮಂತ್ರಿಯೂ ಹಾಗೂ ಕುಲದವನೂ ಆದ ಮಂಗರಸನಿಗೂ ವಹಿಸಿದನೆಂದು ಹೇಳಲಾಗಿದೆ.

ಚಂಗಾಳ್ವರಿಗೂ ಕೊಂಗಾಳ್ವರಿಗೂ ನಡುವೆ ಪದೇ ಪದೇ ಯುದ್ಧಗಳಾಗುತ್ತಿದ್ದು ಕೊನೆಗೆ ೧೩ನೇ ಶತಮಾನದಲ್ಲಿ ಚಂಗಾಳ್ವರೂ ಕೊಂಗಾಳ್ವರ ರಾಜ್ಯವನ್ನು ಗೆದ್ದುಕೊಂಡಂತೆ ಕಾಣುತ್ತದೆ. ಚಂಗಾಳ್ವರು ಮೊದಮೊದಲು ಎಡತೊರೆ ಹಾಗೂ ಹನಸೋಗೆಯ ಜೈನ ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಪ್ರಾರಂಭದಲ್ಲಿ ಅವರು ಗಂಗವಾಡಿಯನ್ನು ಗೆದ್ದುಕೊಂಡು ಚೋಳರ ಅಧೀನರಾಗಿ ಅವರ ಸಾಮಂತರಾದರು. ಚೋಳರಿಂದ ಪ್ರತಿಷ್ಠಾಪಿತರಾದ ಮಾಂಡಳೀಕರಿರಬೇಕೆಂದು ಊಹಿಸಲು ಅವಕಾಶವಿದೆ. ಚೋಳ ಪಂಚವಾಸ್ ಮಹಾರಾಯ ಹನಸೋಗೆಯಲ್ಲಿ ಚಂಗಾಳ್ವರನ್ನು ಸೋಲಿಸಿದನೆಂದು ಹೇಳಿಕೆಯೂ ಇದೆ.

ಈ ವಂಶದ ಮೊದಲ ಶಾಸನೋಲ್ಲೇಖಿತ ರಾಜನಾದ ನನ್ನಿ ಚಂಗಾಳ್ವ (೧೦೩೪) ರಾಜೇಂದ್ರ ಚೋಳ ಎಂಬ ಹೆಸರನ್ನೂ ಹೊಂದಿದ್ದು ಇದು ಅವನ ಚೋಳ ಮಾಂಡಲೀಕತ್ವದ ಸೂಚಕವಾಗಿದೆ. ೧೩ನೇ ಶತಮಾನದವರೆವಿಗೆ ಹೊಯ್ಸಳರೊಡನೆ ಸೆಣಸುತ್ತಿದ್ದ ಈ ವಂಶದ ರಾಜರು ಮುಂದೆ ಹೊಯ್ಸಳರ ಮಾಂಡಲೀಕರೂ ಆದರು. ಮಹಾದೇವ (೧೧೯೦), ಉದಯಾದಿತ್ಯ (೧೧೯೭), ಅನ್ನದಾನಿ (೧೧೦೬) ಮುಂತಾದ ದೊರೆಗಳು ಶಾಸನಗಳಲ್ಲಿ ಉಲ್ಲೇಖಿತರಾಗಿದ್ದು ಇವರಿಗೆ ಚೋಳವಂಶ ರಾಜರ ಹೆಸರುಗಳೂ ಇವೆ. ಹೊಯ್ಸಳ ನರಸಿಂಹ ೧೧೪೫ರಲ್ಲಿ ಒಬ್ಬ ಚಂಗಾಳ್ವನನ್ನು ಕೊಂದು ಚಂಗನಾಡನ್ನು ವಶಪಡಿಸಿಕೊಂಡ. ೧೨ನೆಯ ಶತಮಾನದ ಕೊನೆಗೆ ಇವರು ತಮ್ಮ ರಾಜಧಾನಿಯನ್ನು ಹುಣಸೂರು ಪ್ರದೇಶದಿಂದ (ಚಿಕ್ಕಹನಸೋಗೆ) ಕೊಡಗಿನ ಪಲ್ಬರೆಗೆ ಬದಲಾಯಿಸಿದರು.

೧೨ನೇ ಶತಮಾನದ ಕೊನೆಯಲ್ಲಿ ಆಡಳಿತ ನಡೆಸಿದ ಮಹಾದೇವನೆಂಬ ಚಂಗಾಳ್ವನು ಹೊಯ್ಸಳರಿಂದ ಕೊಲ್ಲಲ್ಪಟ್ಟರೂ ಪೆಮ್ಮವೀರನೆಂಬುವವನು ಈ ಯುದ್ಧವನ್ನು ಮುಂದುವರಿಸಿದ. ಆದರೆ ಮುಂದೆ ಆತ ಹೊಯ್ಸಳರಿಗೆ ತಲೆಬಾಗಬೇಕಾಯ್ತು. ೧೩ನೆಯ ಶತಮಾನದ ಮಧ್ಯದಲ್ಲಿ ಸೋಮದೇವ ಮತ್ತು ಬೊಪ್ಪದೇವ ಎಂಬಿಬ್ಬರು ಹೊಯ್ಸಳರ ಮಾಂಡಲೀಕರಾಗಿ ಜೊತೆಯಾಗಿ ಆಳುತ್ತಿದ್ದರು. ಆಗ ಅವರು ಕೊಡಗಿನ ಸಿದ್ಧಾಪುರ ಬಳಿಯ ಶ್ರೀರಂಗಪಟ್ಟಣಕ್ಕೆ ರಾಜಧಾನಿಯನ್ನು ಬದಲಾಯಿಸಿದರು.

ಅನಂತರ ೧೬ನೆಯ ಶತಮಾನದಲ್ಲಿ ಆಳುತ್ತಿದ್ದ ನಂಜರಾಜ (೧೫೧೨-೧೫೩೩). ನಾಗ ಮುಂತಾದ ದೊರೆಗಳ ವಿಚಾರ ಬರುತ್ತದೆ. ಈ ಚಂಗಾಳ್ವರು ವೀರಶೈವರು. ನಂಜರಾಜ ಕೊಡಗಿನಲ್ಲಿ ನಂಜರಾಜಪಟ್ಟಣವನ್ನು ಸ್ಥಾಪಿಸಿ ಆಳಲಾರಂಭಿಸಿದ. ಇವನ ನಂತರ ಶ್ರೀಕಂಠರಾಜ (೧೫೪೦) ಚಕ್ರವರ್ತಿ ಎಂಬ ಬಿರುದನ್ನು ಧರಿಸಿದ್ದ. ಮುಂದೆ ವೀರರಾಜ ಒಡೆಯ (೧೫೫೯-೮೦). ಪಿರಿಯ ರಾಜದೇವ ರುದ್ರಗಣ (೧೫೮೬-೧೬೦೭) ಇವರು ಶಾಸನೋಲ್ಲೇಖಿತ ದೊರೆಗಳಾಗಿದ್ದು ಕೊನೆಯ ಅರಸ ಪಿರಿಯಾಪಟ್ಟಣವನ್ನು ಕಟ್ಟಿಸಿದ. ವಿಜಯನಗರಕ್ಕೆ ಮಾಂಡಲೀಕರಾಗಿದ್ದ ಇವರ ವಂಶದಲ್ಲಿ ನಂಜರಾಜಯ್ಯದೇವ (೧೬೧೨) ಕೃಷ್ಣರಾಜಯ್ಯದೇವ (೧೬೧೭) ಹಾಗೂ ವೀರರಾಜಯ್ಯ (೧೬೧೯–೪೪) ಇವರುಗಳು ಆಳಿದರು.

ಈ ವೀರರಾಜಯ್ಯನ ಕಾಲದಲ್ಲಿ ಮೈಸೂರು ಕಂಠೀರವ ನರಸರಾಜ ಒಡೆಯರ್ ಪಿರಿಯಾಪಟ್ಟಣದ ಮೇಲೆ ಯುದ್ಧ ಹೂಡಿದ. ನಂಜುಂಡ ಮೊದಲಿಯಾರನೆಂಬ ಪಾಳೆಯಗಾರ ವೀರರಾಜಯ್ಯನ ಬೆಂಬಲಕ್ಕೆ ನಿಂತ, ನರಸರಾಜನನ್ನು ವಿರೋಧಿಸಿದ.

ಒಂದು ವರ್ಷಕಾಲ ಮೈಸೂರು ಸೇನೆ ಗಾಡಿಪಾಳ್ಯದ ಹುಣಸೂರು, ಚಿಲ್ಕುಂದ, ಮುತ್ತರಾಯನ ಹೊಸಳ್ಳಿ, ಕಿತ್ತೂರು, ಪಿರಿಯಾಪಟ್ಟಣದ ಕೋಟೆಯನ್ನು ಮುತ್ತಿತು. ಎರಡೂ ಕಡೆಗೂ ಬಾರಿ ಹೋರಾಟ ನಡೆಯಿತು. ಕೋಟೆ ನರಸರಾಜನ ಕೈಸೇರುವುದು ಖಚಿತವೆಂದು ಕಂಡಾಗ, ವೀರರಾಜ ತನ್ನ ಪತ್ನಿ, ಪುತ್ರರನ್ನು ತಾನೇ ಕೊಂದು ಮೈಸೂರಿನ ಸೈನ್ಯವನ್ನು ವೀರಾವೇಶದಿಂದ ಎದುರಿಸುತ್ತ ವೀರ ಮರಣವನ್ನಪ್ಪಿದ. ಅನಂತರ ಚಂಗನಾಡು ಎಂದು ರಾರಾಜಿಸುತ್ತಿದ್ದ ಹುಣಸೂರು, ಪಿರಿಯಾಪಟ್ಟಣ ಪ್ರದೇಶಗಳು ೧೬೪೪ರಲ್ಲಿ ಮೈಸೂರಿನಲ್ಲಿ ಅರಸರ ವಶವಾಯಿತು. ಅಂತೆಯೇ ಚಂಗಾಳ್ವ ವಂಶವೂ ಕೊನೆಗೊಂಡಿತು.

ಚಂಗಾಳ್ವರ ವಂಶಾವಳಿ (ಕವಲು 1)

[೧೦ನೇ ಶತಮಾನದಿಂದ ೧೪ನೇ ಶತಮಾನದವರೆವಿಗೆ]

↓

ರಾಜೇಂದ್ರ ಚೋಳ, ವೀರರಾಜೇಂದ್ರ ನನ್ನಿ ಚಂಗಾಳ್ವ (ಸು. ೧೦೩೦-೬೦)

(ಬೆಟ್ಟದಪುರದ ಕೋಟೆ ಕಟ್ಟಿಸಿದವನು)

↓

ಚಂಗಲ್ವರಾಯ

↓

ನಿಗಳಂಕಮಲ್ಲಮಾಚೆಯರಸ (ಮಾಧೆಯರಸ) ಚಂಗಾಳ್ವ (ಸು. ೧೦೯೦)

↓

ಚಂಗಾಳ್ವದೇವ, ಮಹದೇವ, ಮಾದೇವರಸ, ಮಾದೇವಣ್ಣ (ಸು. ೧೦೯೧-೯೫)

↓

ಮಹಾಮಂಡಲೇಶ್ವರ ಕುಲೋತ್ತುಂಗ ಚೋಳಬಹಿಯಾದಿತ್ಯ (ಸು. ೧೦೯೭)

↓

ಚಂಗಾಲ್ವ (ಸು. ೧೧೨೪-೧೧೫೫)

↓

ಮಹದೇವ (೧೧೬೯, ೧೧೭೧, ೧೧೭೨. ಪಾಲ್ವರೆಯುದ್ಧ)

↓

ಕುಲೋತ್ತುಂಗ ಚೋಳ, ಚಂಗಾಲ್ವ, ಪೆಮ್ಮವೀರರಸ (೧೧೭೫-೧೧೮೨)

↓

ಸೋಮದೇವ

ಬೊಪ್ಪದೇವರಸ (೧೧೨೪ - ೫೨)

(ಶ್ರೀರಂಗಪಟ್ಟಣದಿಂದ ಆಳಿದವರು)

↓

ಮಲ್ಲದೇವ ಮತ್ತು ಹರಿಹರ (೧೨೮೦ - ೧೩೦೦)

ಚಂಗಾಳ್ವರ ವಂಶಾವಳಿ (ಕವಲು II)

[೧೬ನೇ ಶತಮಾನದಿಂದ ೧೭ನೇ ಶತಮಾನದವರೆವಿಗೆ]

↓

ಚಂಗಾಳ್ವ

↓

ನಾಗ

↓

ರಂಗ

↓

ಪಿರಿಯ — ಪಿರಿಯಣ್ಣ

↓

ನಂಜರಾಜ (೧೫೦೨–೨೫) — ಮಹದೇವ

↓

ನಂಜುಂಡರಾಜ (೧೫೨೫–೪೦)
(ಪಿರಿಯಾಪಟ್ಟಣದಲ್ಲಿ ಮಣ್ಣಿನ ಕೋಟೆ ಕಟ್ಟಿದವನು)

↓

ಶ್ರೀಕಂಠರಾಜಯ್ಯ, ಶ್ರೀಕಂಠರಾಜರಸು, ಚನ್ನಯ್ಯ (೧೫೪೦–೬೦)
(ಕಂಠಾಪುರ ಕಟ್ಟಿದವನು)

↓

ವೀರರಾಜಯ,
ವೀರರಾಜ ಒಡೆಯ
ಚಿಕ್ಕರಾಜಯ್ಯ
(೧೫೬೦–೮೫)

ಪಿರಿಯಾರಾಜಯ್ಯ
ದೇವರುದ್ರಗಣ
(ಪಿರಿಯಾಪಟ್ಟಣದಲ್ಲಿ
ಕಲ್ಲಿನ ಕೋಟೆ
ಕಟ್ಟಿದವನು)

ನಂಜರಾಜಯ್ಯದೇವ
ನಂಜುಂಡದೇವ
ಕೃಷ್ಣರಾಜ
(೧೬೧೨–೧೭೧೯)

↓

ವೀರಪರಾಜಯ್ಯ
(೧೫೮೫–೧೬೨೦

ಪಿರಿವೊಡೆಯ

↓

ಮಲ್ಲರಾಜ
(ಕೃಷ್ಣರಾಜಯ್ಯದೇವ)

ವೀರರಾಜ
(ಪಿರಿಯಾಪಟ್ಟಣದ ಕಾಳಗದ ಕಥಾನಾಯಕ)

ಚಂದೇ ಅರಸು

ಪರಾಮರ್ಶನ ಗ್ರಂಥಗಳು

೧. ಮಲೆ ಕರ್ನಾಟಕದ ಅರಸು ಮನೆತನಗಳು
ಸಂಗ್ರಹ : ರಾಜರಾಮಹೆಗಡೆ ಅಶೋಕ ಶೆಟ್ಟರ್
ಪ್ರಸಾರಾಂಗ, ಕನ್ನಡ ವಿ.ವಿ.ಹಂಪೆ, ೨೦೦೧

೨. ಕರ್ನಾಟಕ ಚರಿತ್ರೆ ಸಂಪುಟ ೩

೩. ಪಿರಿಯಾಪಟ್ಟಣದ ಕಾಳಗ
– ಡಾ. ಪಿ.ಕೆ. ರಾಜಶೇಖರ
ಹೊನ್ನಾರು ಜನಪದ ಗಾಯಕವೃಂದ, ಮೈಸೂರು – ೧೯೯೦

೪. ಚಂಗಾಳ್ವರು – ಎಚ್.ಎಸ್.ಗೋಪಾಲ್‌ರಾವ್
ಪ್ರಸಾರಾಂಗ, ಕನ್ನಡ ವಿ.ವಿ. ಹಂಪೆ. ೨೦೦೦

೫. ಎಪಿಗ್ರಾಫಿಯ ಕರ್ನಾಟಿಕ
ಸಂಪುಟಗಳು, ಮೈಸೂರು ವಿ.ವಿ.

೬. Minor dynasties of South India Karnataka

೭. ಕನ್ನಡ ವಿಶ್ವಕೋಶ, ಮೈ.ವಿ.ವಿ. ಮೈಸೂರು

೮. ಕೊಡಗು ಸಂಸ್ಥಾನದ ರಾಜೇಂದ್ರನಾಮೆ
ಶ್ರೀ ಕಾವೇರಿ ಪ್ರಕಟನಾಲಯ, ಕೊಡಗು, ೧೯೫೭

೯. ಕೊಡಗಿನ ಇತಿಹಾಸ – ಡಿ.ಎನ್. ಕೃಷ್ಣಯ್ಯ

❑

೩. ಕರ್ನಾಟಕದ ಪ್ರವಾಸೋದ್ಯಮ: ಒಂದು ಚಿಂತನೆ

– ಡಾ. ನಿರಂಜನ ವಾನಳ್ಳಿ

ಜಗದ್ವಿಖ್ಯಾತ ಜೋಗ ಜಲಪಾತವನ್ನು ನೋಡಿದ ವಿಶ್ವೇಶ್ವರಯ್ಯನವರು 'ಛೆ ! ಜಲಪಾತ ವ್ಯರ್ಥವಾಗುತ್ತಿದೆ' ಎಂದರಂತೆ. ಕರ್ನಾಟಕ, ಪ್ರವಾಸೋದ್ಯಮ ಸಾಧ್ಯತೆಗಳನ್ನು ಕುರಿತು ಯೋಚಿಸತೊಡಗಿದಾಗ ಹೀಗೆ ಅನ್ನಿಸಿತು!

ಹಿಂದಿನ ವರ್ಷ ನಾನು ಇಂಡೋಕೆನಡಿಯನ್ ಅಧ್ಯಯನ ಯೋಜನೆಯ ಅಂಗವಾಗಿ ಕೆನಡಾಕ್ಕೆ ಹೋಗಿದ್ದೆ. ಕೆನಡಾದ ಕಡೆಯಿಂದ ನಯಾಗರ ಜಲಪಾತ ನೋಡಲು ಹೋಗಿದ್ದೆ. ಅದು ಸುಂದರವೆಂಬುದು ನಿಜ. ನಮ್ಮ ಜೋಗ ಜಲಪಾತಕ್ಕಿರುವ ಎತ್ತರ, ನಾಲ್ಕು ಕವಲುಗಳ ಪ್ರಾಕೃತಿಕ ಸೌಂದರ್ಯ ನಯಾಗರಕ್ಕಿಲ್ಲ. ಆದರೂ.... ನಾವು ಭಾರತೀಯರು ನಯಾಗರದ ಬಗ್ಗೆ ಕೇಳಿರುವ ಹಾಗೆ ಕೆನಡಾ ಅಥವಾ ಅಮೆರಿಕನ್ನರಿಗೆ ಕರ್ನಾಟಕಲ್ಲಿ ಹೀಗೊಂದು ಜಲಪಾತವಿರುವುದು ಗೊತ್ತೇ ಇಲ್ಲ? 'ಜಗತ್ ಪ್ರಸಿದ್ಧ' ವೆಂದು ನಾವು ಹಾಕಿಕೊಳ್ಳುತ್ತೇವಷ್ಟೇ. ಗಡಿಯಾಚೆಗಿನ ಜನತೆಗೆ ಜೋಗದ ಬಗ್ಗೆ ಅರಿವೇ ಇಲ್ಲ. ಯಾಕೆ ಹೀಗೆ? ಉತ್ತರ ಸ್ಪಷ್ಟ ಕೆನಡಾದವರು ನಯಾಗರವನ್ನು 'ಮಾರ್ಕೆಟ್' ಮಾಡುವ ರೀತಿಯಲ್ಲಿ ಇಂದಿಗೂ ಜೋಗಜಲಪಾತವನ್ನು ನಮ್ಮವರು ನೋಡಿಯೇ ಇಲ್ಲ. ಪಾಶ್ಚಾತ್ಯರ ಸ್ವಭಾವವೇ ಹಾಗೆ. ಇರುವಷ್ಟನ್ನೇ ಬಹಳ ಚೆನ್ನಾಗಿ 'ಮಾರ್ಕೆಟ್' ಮಾಡುತ್ತಾರೆ. ಹಾಗೆ ನಮ್ಮ ಬಳಿ ಜಗತ್ತಿಗೆ ತೋರಬಹುದಾದದ್ದು ಹಾಗೂ ಮಾರಬಹುದಾದದ್ದು ಬಹಳಷ್ಟಿವೆ. ಆದರೆ ಅದನ್ನು ನೋಡುವವರಿಗೆ ಮಾರುವತ್ತ ನಾವು ಯೋಚಿಸಿಯೇ ಇಲ್ಲ. ಹಾಗೆ ನೋಡಬೇಕೇ ಎನ್ನುವ ಪ್ರಶ್ನೆಯೂ ಪ್ರಸ್ತುತವೇ!

ಪ್ರವಾಸವನ್ನು ಉದ್ಯಮವನ್ನಾಗಿ ನೋಡುವುದರ ಬಗ್ಗೆಯೇ ನಮ್ಮಲ್ಲಿ ಬಹಳಷ್ಟು ಜನರಿಗೆ ಅಕ್ಷೇಪವಿರಬಹುದು. ಯಾಕೆಂದರೆ ನಮ್ಮ ಪ್ರವಾಸೀ ತಾಣಗಳನ್ನು

ನೋಡುಗರಿಗೆ ಮಾರಿಕೊಳ್ಳುವ ಸಂಸ್ಕೃತಿ 'ನಮ್ಮದಾಗಿರಲಿಲ್ಲ'. 'ಅತಿಥಿದೇವೋಭವ' ಎನ್ನುವುದು ನಮ್ಮ ಸಂಸ್ಕೃತಿ. ದೇಶ-ವಿದೇಶಗಳಿಂದ ಬರುವವರು ನಮ್ಮ ಅತಿಥಿಗಳು. ಅತಿಥಿಗಳಿಗೆ ಅನ್ನವನ್ನು ಮಾರಲಾಗದು. ಆದಕ್ಕೆ ನಮ್ಮ ಧಾರ್ಮಿಕ ಕೇಂದ್ರ್ರಗಳಲ್ಲಿ 'ಪ್ರಸಾದ' ವ್ಯವಸ್ಥೆ ಜಾರಿಯಲ್ಲಿ ಬಂತು. ಕರ್ನಾಟಕ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲೆಲ್ಲಾ ಇಂದಿಗೂ ಉಚಿತ ಊಟದ ವ್ಯವಸ್ಥೆಯಿದೆ. ಬೇಸಿಗೆಯಲ್ಲಿ ಬರುವ ಪ್ರವಾಸಿಗಳಿಗೆ ನೀರು-ಪಾನಕದ ಸೇವೆಯಿರುತ್ತದೆ. ಇದು ಭಾರತೀಯ ಮನಸ್ಸು ಪ್ರವಾಸಿಗಳನ್ನು ಸ್ವೀಕರಿಸುವ ರೀತಿ.

ಕಾಲ ಹಾಗೇ ಇರುವುದಿಲ್ಲ. ಬದಲಾವಣೆ ಬದುಕಿನ ಸಹಜಕ್ರಿಯೆ. ಜಗತ್ತಿನಲ್ಲಿ ಪ್ರವಾಸೋದ್ಯಮ ಬಹುದೊಡ್ಡ ಉದ್ಯಮವಾಗಿ ಬೆಳೆದುದರ ಪರಿಣಾಮ ಭಾರತದ ಮೇಲೂ ಆಗಿದೆ. ಇವತ್ತು ಕೆಲವು ದೇಶಗಳಿಗೆ ಪ್ರವಾಸೋದ್ಯಮವೇ ಆರ್ಥಿಕತೆಯ ಮೂಲ. ಥೈಲ್ಯಾಂಡ್, ಮಲೇಷಿಯಾ, ಸಿಂಗಾಪುರಗಳಂಥ ದೇಶಗಳ ಆರ್ಥಿಕತೆ ಬಹುಪಾಲು ಪ್ರವಾಸೋದ್ಯಮದ ಮೇಲೆ ನಿಂತಿದೆ. ಇದು ಸಂಸ್ಕೃತಿಯನ್ನು ಮಾರುವ ಪ್ರಶ್ನೆಯಲ್ಲ. ಜೀವನದ ಪ್ರಶ್ನೆ. ಒಬ್ಬ ವಿದೇಶೀ ಪ್ರವಾಸಿ ಭಾರತಕ್ಕೆ ಬಂದರೆ ವಿದೇಶೀ ಹಣ ವಿನಿಮಯದಿಂದ ಉಳಿತಾಯವಾಗುತ್ತದೆ. ಒಬ್ಬ ಟ್ಯಾಕ್ಸಿವಾಲಾ, ಎಳನೀರು ಮಾರುವವ, ಪ್ರವಾಸೀ ಗೈಡ್, ಹೊಟೇಲಿನವ - ಮುಂತಾಗಿ ಹಲವು ಜನರ ಬದುಕಿಗೆ ನೆರವಾಗುತ್ತದೆ. ಪರೋಕ್ಷವಾಗಿ ಇನ್ನೆಷ್ಟು ಜನರಿಗೆ ಲಾಭವಾಗುವುದೋ ಲೆಕ್ಕವಿಲ್ಲ. ಹಿಂದೆ ಕೃಷಿ ಪ್ರಧಾನವಾಗಿದ್ದ ದೇಶವೊಂದು ತನ್ನ ಜನಸಂಖ್ಯೆ, ಪ್ರಾಕೃತಿಕ ಸಂಪನ್ಮೂಲಗಳ ಕೊರತೆ ಮುಂತಾಗಿ ಅನಿವಾರ್ಯವಾಗಿ ಬದುಕಿನ ಹೊಸದಾರಿಗಳನ್ನು ಹುಡುಕಲೇಬೇಕು. ಭಾರತದ ಮಟ್ಟಿಗೆ ಅದರಲ್ಲೂ ಮುಖ್ಯವಾಗಿ ಕರ್ನಾಟಕಕ್ಕೆ 'ರತ್ನಗರ್ಭಾವಸುಂಧರಾ' ಎಂಬ ಮಾತು ಪ್ರವಾಸೋದ್ಯಮದ ಮಟ್ಟಿಗೂ ಒಪ್ಪುವಂತದ್ದು. ಕರ್ನಾಟಕ ಈ ದೇಶದ ಸಂಪದ್ಭರಿತ ರಾಜ್ಯಗಳಲ್ಲಿ ಒಂದು. ಪ್ರವಾಸೋದ್ಯಮದ ದೃಷ್ಟಿಯಿಂದಲೂ ನಮ್ಮ ಸಂಪತ್ತು ಹೇರಳವಾದುದು.

ಕರ್ನಾಟಕದ ಭೂವಲಯಗಳೇ ಪ್ರವಾಸಕ್ಕೆ ಯೋಗ್ಯವಾದವುಗಳಾಗಿವೆ. ಕರಾವಳಿ, ಮಲೆನಾಡು, ಬೆಳವಲನಾಡು, ಬಯಲುಸೀಮೆ ಎಂದು ವಿಭಾಗಿಸಬಹುದಾದ ಪ್ರಾದೇಶಿಕ ಭೂವೈವಿಧ್ಯ ಹಾಗೂ ಅದರ ವಿಸ್ತಾರ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶಗಳನ್ನು ಪ್ರಾಕೃತಿಕವಾಗಿ ಒದಗಿಸಿದೆ. ಬಿಜಾಪುರ-ಗುಲ್ಬರ್ಗಾ ಕಡೆಯವರಿಗೆ ಕರಾವಳಿಯ ಮುಖ್ಯ ಆಕರ್ಷಣೆಯೇ ಸಮುದ್ರ, ಸಮುದ್ರ ದಂಡೆಯ ಊರಿಗೆ ಬರುವುದೆಂದರೆ ಅವರಿಗೆ ಬೇರೆಯ ದೇಶಕ್ಕೆ ಬಂದಂಥ ಅನುಭವ. ಗುಲ್ಬರ್ಗಾದಲ್ಲೂ ಸೆಖೆಯಿದೆ. ಆದರೆ ಗೋಕರ್ಣದ ಸೆಖೆ ಬೇರೆ. ಬಯಲುಸೀಮೆಯ ಜನ ಕರಾವಳಿಯತ್ತ ಹೊರಟರೆ ಘಟ್ಟ ಇಳಿಯುವುದೇ ಒಂದು ಪ್ರಯಾಸದ ಪ್ರವಾಸ!

ಹೊಟ್ಟೆತೊಳಸಿ ಬಂದು ತಿಂದಿದ್ದೆಲ್ಲ ವಾಂತಿ! ಕಷ್ಟಪಟ್ಟು ಘಟ್ಟ ಇಳಿದರೆ ಕಾಣುವುದು ಭೂರಮೆಯ ದೇವಸನ್ನಿಧಿ! ಸಮುದ್ರ ನೋಡಿದ ಬಯಲು ಸೀಮೆಯ ಮಂದಿ ಕಂಗಾಲಾಗಿ ಬಿಡುತ್ತಾರೆ. ಹಾಗೆಯೇ ಕಾಡಿನ ನಡುವೆ ತಂಪಾಗಿ ಇರುವ ಮಲೆನಾಡಿನವರಿಗೆ ಕಲಬುರ್ಗಿಯ ಬಿಸಿಲು – ಅದೇ ಒಂದು ಅನುಭವ. ಭಣಗುಡುವ ವಿಜಾಪುರವೂ ನೋಡಲು ಸುಂದರ. ಇನ್ನು ಬೆಂಗಳೂರಿನ ನಗರೀಕರಣದ ತಾಪತ್ರಯಗಳಲ್ಲಿ ಬಸವಳಿದು ಬೆಂಡಾದವರಿಗೆ ಹಾಸನ – ಸಕಲೇಶಪುರಗಳೂ ಪಿಕನಿಕ್ ತಾಣಗಳು.

ಹೀಗೆ ಕರ್ನಾಟಕದಲ್ಲಿರುವ ಪ್ರಾಕೃತಿಕ ವೈವಿಧ್ಯಗಳು ಪರಸ್ಪರ ಭಿನ್ನವಾಗಿದ್ದು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ದೇಶೀಯ ಪ್ರವಾಸೋದ್ಯಮಕ್ಕೂ ಅನುಕೂಲವನ್ನು ಒದಗಿಸುತ್ತದೆ. ಮಂಗಳೂರಿನ ಮಕ್ಕಳು ಪ್ರವಾಸಕ್ಕೆ ವಿಜಾಪುರಕ್ಕೆ ಬರುತ್ತಾರೆ. ವಿಜಾಪುರದವರು ಬೇಲೂರು ಹಳೇಬೀಡಿಗೆ ಬರುತ್ತಾರೆ. ಬೇಲೂರಿನವರು ಬಸವಕಲ್ಯಾಣಕ್ಕೆ ಹೋಗುತ್ತಾರೆ. ಇದು ಪ್ರವಾಸೋದ್ಯಮದ ದೃಷ್ಟಿಯಿಂದ ಕರ್ನಾಟಕದ ಹೆಗ್ಗಳಿಕೆ. ಈ ಪ್ರವಾಸೋದ್ಯಮ ಸಾಧ್ಯತೆಯನ್ನು ಇನ್ನಷ್ಟು ಹೆಚ್ಚಿಸಬಹುದಾಗಿದ್ದು ಆಂತರಿಕವಾಗಿ ರೈಲುಗಳ ಸಂಚಾರ ಸಾಧ್ಯತೆ. ರೈಲುಗಳ ಮೇಲೆ ಇಡೀ ಕರ್ನಾಟಕವನ್ನು ಒಂದು ಸುತ್ತು ಸುತ್ತಿಬರಬಹುದಾದ ಸಾಧ್ಯತೆಯಿಲ್ಲ. ಅಂಥ ಒಂದು ವ್ಯವಸ್ಥೆಯಿದ್ದಿದ್ದರೆ ನಮ್ಮ ಶಾಲಾ ಮಕ್ಕಳಿಂದ ಹಿಡಿದು ದೊಡ್ಡವರೂ ಕಡಿಮೆ ಖರ್ಚಿನಲ್ಲಿ ಇಡೀ ಕರ್ನಾಟಕವನ್ನು ನೋಡಬಹುದಿತ್ತು. ಒಳನಾಡು ರೈಲು ಸಾರಿಗೆ ಅಭಿವೃದ್ಧಿಗೊಳ್ಳದಿರುವುದು ಕರ್ನಾಟಕದ ಪ್ರವಾಸೋದ್ಯಮ ಸಾಧ್ಯತೆಗಳನ್ನು ಬಹಳಷ್ಟು ಕ್ಷೀಣಿಸಿದೆ. ದೇಶಕ್ಕೆ ಅತಿ ಹೆಚ್ಚು ರೈಲು ಮಂತ್ರಿಗಳನ್ನು ಕೊಟ್ಟ ಹೆಗ್ಗಳಿಕೆ ಕರ್ನಾಟಕಕ್ಕೆ ಇದೆಯಾದರೂ ನಮ್ಮ ರೈಲ್ವೇ ಯೋಜನೆಗಳೆಲ್ಲ ಆಮೆಗತಿಯಲ್ಲಿ ಸಾಗುತ್ತಿವೆ. ಕರ್ನಾಟಕದ ಎಲ್ಲ ಪ್ರಮುಖ ಪ್ರವಾಸೀ ತಾಣಗಳನ್ನು ರೈಲು ಹಳಿಗಳಿಂದ ಕೂಡಿಸುವ ಕೆಲಸವಾದರೆ ಕರ್ನಾಟಕದ ಪ್ರವಾಸೋದ್ಯಮದ ದಿಕ್ಕೇ ಬದಲಾಗುತ್ತಿದೆ. ದೇಶೀ ಪ್ರವಾಸೋದ್ಯಮ ಅಗಾಧ ಪ್ರಮಾಣದಲ್ಲಿ ಹೆಚ್ಚಿ ಕರ್ನಾಟಕದವರು ಕರ್ನಾಟಕವನ್ನೇ ನೋಡಿಲ್ಲ ಎಂಬ ಅಪವಾದದಿಂದ ಮುಕ್ತಿ ಸಿಗುತ್ತದೆ.

ಕರ್ನಾಟಕದ ಪ್ರವಾಸೋದ್ಯಮ ಸಾಧ್ಯತೆಗಳನ್ನು ಹೆಚ್ಚಿಸಲು ಮೊದಲಿಗೆ ಆಗಬೇಕಿರುವ ಕೆಲಸವೆಂದರೆ ಪ್ರವಾಸೀ ನಕಾಶೆಯ ಪುನರಚನೆ. ಕರ್ನಾಟಕದಲ್ಲಿ ವಿಶ್ವದ ಗಮನವನ್ನು ಸೆಳೆಯಬಲ್ಲ ೩೫ಕ್ಕೂ ಮಿಕ್ಕಿ ಜಲಪಾತಗಳಿವೆ. ಸಣ್ಣದು ದೊಡ್ಡದು ಸೇರಿ ೨೦ ಅಣೆಕಟ್ಟುಗಳಿವೆ. ಆದರೆ ಜಲಪಾತಗಳು ಎಂದಾಗ ಪ್ರವಾಸೋದ್ಯಮ ಇಲಾಖೆಯ ಲೆಕ್ಕಕ್ಕೆ ಸಿಗುವುದು ಐದಾರು. ಅಣೆಕಟ್ಟುಗಳು ಮೂರ್‍ನಾಲ್ಕು. ನಮ್ಮಲ್ಲಿ ಲೆಕ್ಕಕ್ಕೇ ಸಿಕ್ಕದ ಪ್ರವಾಸೀ ತಾಣಗಳು ಬೇಕಷ್ಟಿವೆ. ಉದಾಹರಣೆಗೆ,

ಹುದಲಿ ಸಮೀಪ ಗೊಡಚನ ಮಲಕಿ ಎಂಬಲ್ಲಿ ಬಹಳ ಸುಂದರವಾದ ಜಲಪಾತವಿದೆಯಂತೆ. ನಮ್ಮ ಸ್ನೇಹಿತರೊಬ್ಬರು ಈ ಮಾಹಿತಿ ನೀಡಿದ್ದಾರೆ. ನಾನು ಮತ್ತು ಶಿವಾನಂದ ಕಳವೆ ಸಿರ್ಸಿ ತಾಲ್ಲೂಕಿನಲ್ಲಿ ತೆಂಗಿನ ಮುಡಿ ಜಲಪಾತ ಹುಡುಕಿಕೊಂಡು ಅರಣ್ಯದೊಳಕ್ಕೆ ಹೋಗಿದ್ದೆವು. ಹತ್ತಾರು ಕಿ.ಮೀ. ಕಾಡಲ್ಲಿ ದಾರಿ ಮಾಡಿಕೊಂಡು, ಜಲಪಾತದ ಸದ್ದು ಕೇಳಿದ ದಿಕ್ಕಿನಲ್ಲಿ ಹೋದಾಗ ಕಂಡು ಬಂದಿದ್ದು ಅತ್ಯದ್ಭುತ ದೃಶ್ಯ. ಐದು ಹಂತಗಳಲ್ಲಿ ಬೀಳುವ ಈ ಜಲಪಾತಕ್ಕೆ ಹೆಸರಿಲ್ಲ! ಗಟ್ಟಿ ಕಾಲಿನವರು ಮಾತ್ರ ಚಾರಣ ಮಾಡುವ ತಾಣ. ಕೆನಡಾದ ಬ್ಯಾನ್ಫ್‌ನ್ಯಾಷನಲ್ ಪಾರ್ಕಿಗೆ ಹೋದಾಗ ಅಲ್ಲಿ ಕಾಡೊಳಗೆ ತಣ್ಣಗೆ ಹರಿಯುವ ನದಿದಂಡೆ ಹಾಗೂ ಸಣ್ಣ ಜಲಪಾತವನ್ನು ಅವರು ಎಷ್ಟು ಅಚ್ಚುಕಟ್ಟಾದ ಪ್ರವಾಸೀ ತಾಣವಾಗಿ ಮಾಡಿದ್ದಾರೆಂದು ಕಂಡೆ. ಕರ್ನಾಟಕದಲ್ಲಿ ಅಂಥ ನೂರಾರು ತಾಣಗಳಿವೆ. ಅವುಗಳನ್ನು ಅಭಿವೃದ್ಧಿಪಡಿಸಬೇಕು. ಮೂಲತಃ ರಸ್ತೆ, ರೈಲು ಸಂಪರ್ಕ ಬಹಳ ಮುಖ್ಯ. ಇನ್ನು ವಿಮಾನ ನಿಲ್ದಾಣ ಮಾಡಿ ಪುಟ್ಟ ಪುಟ್ಟ ವಿಮಾನ ಹಾರಲು ಅವಕಾಶ ಮಾಡಿಕೊಡುವ ಕಾಲವೂ ಬಂದೀತು. ಅಂಥ ತಾಣಗಳಲ್ಲಿ ಮೂಲಭೂತ ಸೌಕರ್ಯಗಳು ಅಭಿವೃದ್ಧಿಯಾಗಬೇಕು. ಹಾಗೆಯೇ ಪ್ರವಾಸಿಗಳಿಂದಾಗಿ ಅಲ್ಲಿ ಪರಿಸರಕ್ಕೆ ಧಕ್ಕೆ ಬರಬಾರದು. ಅವು ಸುಲಿಗೆಯ ಕೇಂದ್ರಗಳಾಗಬಾರದು. ವೇಶ್ಯಾವಾಟಿಕೆಯ ಕೇಂದ್ರಗಳಾಗಬಾರದು. ಪ್ರವಾಸೋದ್ಯಮದ ಅಭಿವೃದ್ಧಿಯೆಂದರೆ ಆ ಊರಿನ ಮೂಲ ಸಂಸ್ಕೃತಿಯನ್ನೇ ಅಳಿಸಿ ಹಾಕಿ ಹೊಸ ರೆಸಾರ್ಟ್ ಸಂಸ್ಕೃತಿಯೊಂದು ತಲೆಯೆತ್ತಿ ಶ್ರೀಮಂತರ ಮೋಜಿನ ತಾಣವಾಗುವುದಾದರೆ ನಮ್ಮ ಊರುಗಳು ಹೀಗೇ ಇರಲಿ. ಪ್ರವಾಸೋದ್ಯಮದ ಸಹವಾಸವೇ ಬೇಡ.

ಬ್ಯಾನ್ಫ್ ರಾಷ್ಟ್ರೀಯ ಉದ್ಯಾನದ ಬ್ಯಾನ್ಫ್ ಜಲಪಾತದ ಪ್ರಸ್ತಾಪ ಮಾಡಿದೆನಲ್ಲ? ಕಾಡಿನ ನಡುವೆ ಇರುವ ಈ ಸ್ಥಳದಲ್ಲಿ ಒಂದು ಚಹಾ ಅಂಗಡಿಯಾಗಲೀ ಬೀಡಾ ಅಂಗಡಿಯಾಗಲೀ ಇಲ್ಲ. ಜಲಪಾತದ ಸ್ಥಳದಲ್ಲಿ ಏನೂ ಸಿಕ್ಕುವುದಿಲ್ಲ. ಪ್ರವಾಸಿಗರು ತಿಂದು ಬಿಸುಟ ಪೊಟ್ಟಣಗಳು ಪ್ಲಾಸ್ಟಿಕ್ ಚೀಲಗಳಿಲ್ಲ. ಪ್ರಶಾಂತ, ರಮ್ಯ ತಾಣವನ್ನು ಸಹಸ್ರಾರು ಪ್ರವಾಸಿಗರು ಪ್ರತಿನಿತ್ಯ ಭೇಟಿ ಮಾಡಿದರೂ ಅದರ ಕುರುಹು ಅಲ್ಲಿನ ಪರಿಸರದಲ್ಲಿ ಉಳಿಯುವುದಿಲ್ಲ. ಅದೇ 'ನಮ್ಮೂರ ಮಂದಾರ ಹೂವೇ' ಚಲನ ಚಿತ್ರಣ ಕಾರಣದಿಂದ ಏಕಾಏಕಿ ಪ್ರಸಿದ್ಧಿಗೆ ಬಂದ ಯಾಣದ ಕತೆ ನೋಡಿ. ಮಜಾ ಮಾಡಲು ಬಂದವರ ಪೀಕುದಾನಿಯ ಹಾಗೆ ಕಾಣುತ್ತಿದೆ. ನಮ್ಮ ಪ್ರವಾಸೋದ್ಯಮದ ತಾಣಗಳ ಹೊಸ ನಕಾಶೆ ಸಿದ್ಧಗೊಳ್ಳಬೇಕು. ಆ ಸ್ಥಳಗಳು ಅಭಿವೃದ್ಧಿಗೊಳ್ಳಬೇಕು. ಆದರೆ ವಿರೂಪಗೊಳ್ಳಬಾರದು. ಪ್ರವಾಸಿ ತಾಣಗಳು ನಮ್ಮ ಮುಖದ ಬೊಟ್ಟುಗಳ ಹಾಗೆ. ಬಂದವರು ವಾಪಸ್ಸು ಹೋಗಿ ಉಳಿದವರಿಗೆ ಹೇಳುತ್ತಾರೆ. ವಿದೇಶೀ

ಪ್ರವಾಸಿ ಪುಸ್ತಕಗಳಲ್ಲಿ ಗಮನಿಸಿದ್ದೇನೆ ಯಾವ ಊರಲ್ಲಿ ರಸ್ತೆಗಳು ಕೆಟ್ಟಿವೆ. ಹೋಟೆಲುಗಳು ಗಲೀಜಾಗಿವೆ, ಆಟೋದವರು ಮೋಸ ಮಾಡುತ್ತಾರೆ ಎಂಬ ಎಚ್ಚರಿಕೆಯನ್ನು ನೀಡುತ್ತಾರೆ. ವಿದೇಶಗಳಲ್ಲಿ ನಮ್ಮ ಮರ್ಯಾದೆ ಹರಾಜು ಹಾಕುತ್ತಾರೆ. ಆದ್ದರಿಂದ ಪ್ರವಾಸೀ ತಾಣಗಳನ್ನು ಅಭಿವೃದ್ಧಿಪಡಿಸಿದ್ದಕ್ಕೆ ಮುಖ್ಯವಾದ ಕೆಲಸ ಅವುಗಳನ್ನು ಚೆಂದವಾಗಿ ನೋಡಿಕೊಳ್ಳುವುದು, ಸ್ವಚ್ಛವಾಗಿ ಇರಿಸಿಕೊಳ್ಳುವುದು.

ಈಗಲೂ ಭಾರತದ ಜನ, ಜೀವನೋಪಾಯಕ್ಕಾಗಿ ಬಹುಪಾಲು ಅವಲಂಬಿಸುವುದು ಕೃಷಿಯನ್ನು. ಹೆಚ್ಚಿದ ಜನಸಂಖ್ಯೆ, ಕೃಷಿರಂಗದಲ್ಲಿ ಉಂಟಾದ ತಲ್ಲಣಗಳು, ಬೆಲೆ ಇಳಿಕೆ ಮುಂತಾದ ಕಾರಣಗಳಿಂದ ರೈತರ ಪರಿಸ್ಥಿತಿ ಇಂದು ಹದಗೆಟ್ಟಿದೆ. ಉರುಳಿಗೆ ರೈತರು ಕೊರಳು ಒಡ್ಡುವ ಪ್ರಕರಣಗಳು ನಿತ್ಯ ಧಾರಾವಾಹಿ ಎಂಬಂತೆ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಹಳ್ಳಿಯ ಜನ ಕೆಲಸ ಹುಡುಕಿ ನಗರಗಳಿಗೆ ವಲಸೆ ಹೋಗುವುದನ್ನು ಕಾಣಬಹುದು. ಬದಲಾದ ಇಂದಿನ ಪರಿಸ್ಥಿತಿಯಲ್ಲಿ ದೇಶದಾದ್ಯಂತ ಪ್ರವಾಸೀತಾಣಗಳು ಅಭಿವೃದ್ಧಿಗೊಳ್ಳುವುದು ಸ್ಥಳೀಯ ಜನಗಳ ಬದುಕುವ ಅವಕಾಶಗಳನ್ನು ವಿಸ್ತರಿಸುವ ದೃಷ್ಟಿಯಿಂದ ಅವಶ್ಯಕ. ಒಂದು ಊರು ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಹೊಂದುವುದೆಂದರೆ ಊರಿನ ಸ್ಥಿತಿ–ಗತಿಯನ್ನೇ ಬದಲಾಯಿಸುವ ಸಾಮರ್ಥ್ಯ ಹೊಂದಿದೆ. ಸ್ಥಳೀಯರಿಗೆ ಅನೇಕ ರೀತಿಯಲ್ಲಿ ಉದ್ಯೋಗ ಹಾಗೂ ಬದುಕಿನ ಮಾರ್ಗ ಹೆಚ್ಚುತ್ತದೆ. ಉದಾಹರಣೆಗೆ, ರಸ್ತೆ ಅಭಿವೃದ್ಧಿ, ನೀರಿನ ಸೌಲಭ್ಯ, ಶೌಚಾಲಯಗಳ ನಿರ್ಮಾಣ ಇಲ್ಲೆಲ್ಲ ಕೂಲಿ ಕಾರ್ಮಿಕರಿಗೆ ಕೆಲಸ ಸಿಗುತ್ತದೆ. ಅಂಗಡಿ ಮುಂಗಟ್ಟುಗಳು ಹೆಚ್ಚುತ್ತವೆ. ಸ್ಥಳೀಯ ಕಲೆ–ಕಲಾವಿದರಿಗೆ ಅವಕಾಶಗಳು ಹೆಚ್ಚುತ್ತವೆ. ಹೀಗೆ ಕೃಷಿಯೇತರ ಬದುಕಿನ ಸಾಧ್ಯತೆಗಳು ವಿಸ್ತಾರಗೊಳ್ಳುತ್ತವೆ. ಕೃಷಿಯನ್ನು ನಂಬಿಕೊಂಡ ನಮ್ಮ ರೈತರ ಬದುಕು ಹೈರಾಣಾಗಿರುವ ಸಂದರ್ಭದಲ್ಲಿ ಇದು ಆಶಾದಾಯಕ ಬೆಳವಣಿಗೆ.

ಆದರೆ ಸಾಮಾನ್ಯ ಊರೊಂದು, ತನ್ನೊಳಗಿನ ಸಾಧ್ಯತೆಯನ್ನೇ ಅರಿಯದೇ ಹೊದ್ದು ಮಲಗಿದ್ದ ಹಳ್ಳಿಯೊಂದು ಪ್ರವಾಸೀ ತಾಣವಾಗಿ ಅಭಿವೃದ್ಧಿಗೊಂಡಾಗ ದಾರಿತಪ್ಪುವ ಸಾಧ್ಯತೆಯಿರುವುದನ್ನು ಮರೆಯಬಾರದು. ಅವರ ಬಡತನ ಭಿಕ್ಷಾಟನೆಗೆ ದಾರಿ ಮಾಡಿಕೊಡುತ್ತದೆ. ಮೈಮಾರಿದರೆ ಸುಲಭ ದುಡ್ಡಾಗುವುದೆಂದು ವೇಶ್ಯಾವಾಟಿಕೆಯ ದಂಧೆ ಆರಂಭಗೊಳ್ಳುತ್ತದೆ. ಸಾರಾಯಿ ಅಂಗಡಿ, ವೈನ್ ಬಾರುಗಳು, ನಂತರ ಅಫೀಮು, ಗಾಂಜಾ ರಾಜಾರೋಸು ವ್ಯಾಪಾರ ವೃದ್ಧಿಗೊಳ್ಳುತ್ತದೆ. ನಮ್ಮ ಪ್ರಸಿದ್ಧ ಯಾತ್ರಾಸ್ಥಳಗಳಾದ ಗೋಕರ್ಣ, ಹಂಪಿ, ಗೋವಾಗಳ ಇನ್ನೊಂದು ಮುಖವನ್ನು ಅರಿತರೆ ವಿಷಾದವಾಗುತ್ತದೆ. ಹಣದ ಆಸೆಯಿಂದ ಎಲ್ಲವೂ ವ್ಯಾಪಾರೀ ಸರಕಾಗಿ ಪರಿವರ್ತನೆಗೊಳ್ಳುವಾಗ ಜನರ ವರ್ತನೆ ಬದಲಾಗುತ್ತದೆ. ಆತ್ಮೀಯ

ಆತಿಥ್ಯಗಳು, ಮಾನವ ಸಂಬಂಧಗಳು ಎಲ್ಲವೂ ವಾಣಿಜ್ಯೀಕರಣಗೊಂಡು ವಾತಾವರಣ ಕಲುಷಿತಗೊಳ್ಳುತ್ತದೆ. ಪ್ರವಾಸ-ಪ್ರವಾಸಿಗಳಿಗೆ ವಿಲಾಸಕ್ಕಾದರೆ - ಈ ಭಯವಿದೆ. ಸಂಸ್ಕೃತಿಯ ಭಾಗವಾದರೆ ಹೀಗೆ ಆಗುವುದಿಲ್ಲ. ಪ್ರವಾಸವು ಉದ್ಯಮೀಕರಣಗೊಳ್ಳುವಾಗಿನ ವಿಕಾರ ಮುಖಗಳಿವು.

ಕರ್ನಾಟಕದ ಭೂವೈವಿಧ್ಯ, ಸಹಜವಾಗಿ ಪ್ರವಾಸಿಗಳನ್ನು ಕೈಬೀಸಿ ಕರೆಯುವಂತಿದೆ. ಕಾಡು, ಕಡಲು, ಬಯಲು ಎಲ್ಲವೂ ಇಲ್ಲಿದೆ. ಬಹಳ ಛಳಿ, ಬಹಳ ಮಳೆ, ಬಹಳ ಬಿಸಿಲಿನ ತಾಣಗಳೂ ಇಲ್ಲಿವೆ. ಕರ್ನಾಟಕದಲ್ಲಿ ೩೫ಕ್ಕೂ ಮಿಕ್ಕಿ ಜಲಪಾತಗಳಿವೆ. ನಯಾಗರ ಜಲಪಾತವನ್ನು ನೋಡಿದಾಗ ಕರ್ನಾಟಕದ ಉದ್ದಗಲಕ್ಕೂ ಇರುವ ಅನೇಕ ಜಲಪಾತಗಳನ್ನು ನಯಾಗರ ಮಾದರಿಯಲ್ಲಿ ಮಾರ್ಕೆಟ್ ಮಾಡಿದ್ದರೆ ಎಂಥ ವ್ಯತ್ಯಾಸವಾಗಬಹುದಿತ್ತು ಎನಿಸುತ್ತದೆ. ೨೦ಕ್ಕೂ ಹೆಚ್ಚು ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಅಣೆಕಟ್ಟುಗಳಿವೆ. ಸರೋವರವನ್ನು ಜ್ಞಾಪಿಸುವ ಕೆರೆಗಳಿವೆ. ಕರಾವಳಿಯ ಉದ್ದಕ್ಕೂ ಸಮುದ್ರವಿದೆ. ಜಲಕ್ರೀಡೆಯ ತಾಣಗಳಾಗಿ ಇವನ್ನು ಅಭಿವೃದ್ಧಿ ಪಡಿಸಬೇಕು. ಆಗ ಕರ್ನಾಟಕದ ಪ್ರವಾಸೋದ್ಯಮ ಸ್ಥಿತಿಯೇ ಬದಲಾಗುತ್ತದೆ.

ಕರ್ನಾಟಕದ ಪ್ರವಾಸೋದ್ಯಮ ಸಾಧ್ಯತೆಗಳನ್ನು ಗಮನದಲ್ಲಿರಿಸಿ ಈ ಕೆಳಗಿನ ವಿಭಾಗಗಳನ್ನು ಮಾಡಬಹುದು. ಕೆಲವು ಸ್ಥಳಗಳು ಒಂದಕ್ಕೂ ಹೆಚ್ಚು ವಿಭಾಗಗಳಲ್ಲಿ ಸೇರುತ್ತವೆ. ಈ ವಿಭಾಗೀಕರಣ ಕರ್ನಾಟಕದ ಪ್ರವಾಸೋದ್ಯಮ ನಕ್ಷೆಯನ್ನು ಸಿದ್ಧಪಡಿಸುವಾಗ ಮಾದರಿಯಾಗಲಿ ಎಂಬುದಷ್ಟೇ ನನ್ನ ಆಶಯ.

ಧಾರ್ಮಿಕ ಪ್ರವಾಸೋದ್ಯಮ

ಕರ್ನಾಟಕ ಉದ್ದಗಲಕ್ಕೆ ಧಾರ್ಮಿಕ ಕ್ಷೇತ್ರಗಳಿವೆ. ಹೆಚ್ಚಾಗಿ - ಕರ್ನಾಟಕ ಜನ ಪ್ರವಾಸ ಹೋಗುವುದೆಲ್ಲ ಈ ಪ್ರವಾಸೀ ತಾಣಗಳಿಗೆ. ದೇವರ ಸೇವೆಯೂ ಆಗಬೇಕು. ದೈನಂದಿನ ಜಂಜಡದಿಂದ ಬದಲಾವಣೆಯೂ ಸಿಗಬೇಕು ಎಂಬುದು ಉದ್ದೇಶವಾಗಿರಬಹುದು. ವರ್ಷವರ್ಷವೂ ಹೀಗೆ ತೀರ್ಥಕ್ಷೇತ್ರಗಳನ್ನು ಅರಸಿ ಹೋಗುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ ನಮ್ಮ 'ಪುಣ್ಯಕ್ಷೇತ್ರ'ಗಳು ಗಿಜಿಗುಡುತ್ತಿವೆ. ಪ್ರತೀ ಜಿಲ್ಲೆಯಲ್ಲೂ ಈ ಧಾರ್ಮಿಕ ತಾಣಗಳಿದ್ದು ಒಳನಾಡು ಪ್ರವಾಸೋದ್ಯಮಕ್ಕೆ ಮಹತ್ವ ತಂದಿದೆ.

ಈಗ ನಮಗೆ ಧಾರ್ಮಿಕ ಪ್ರವಾಸವೆಂದಾಗ ನೆನಪಿಗೆ ಬರುವುದು ಧರ್ಮಸ್ಥಳ, ಸುಬ್ರಹ್ಮಣ್ಯ-ಉಡುಪಿಗಳೇ. ಹಿಂದೆಯೇ ಹೇಳಿದಂತೆ ಕರ್ನಾಟಕದ ಉದ್ದಗಲದಲ್ಲಿ ಇಂಥ ನೂರಾರು ತಾಣಗಳಿವೆ. ಅವುಗಳಿಗೆ ಮಠ-ಮಾನ್ಯರ ಉಸ್ತುವಾರಿ ದೊರಕದೇ ಅಭಿವೃದ್ಧಿ ಹೊಂದಿಲ್ಲ. ಕೆಲವೇ ಕ್ಷೇತ್ರಗಳು ಧಾರ್ಮಿಕ ಪ್ರವಾಸದ ವಾರಸುದಾರಿಕೆ

ಪಡೆದಂತೆ ಕಾಣುವುದು ಈ ಕಾರಣಕ್ಕೆ. ಹೊಸದಾಗಿ ಧಾರ್ಮಿಕ ಪ್ರವಾಸದ ನಕ್ಷೆ ಹಾಗೂ ತಾಣಗಳು ಅಭಿವೃದ್ಧಿಗೊಳ್ಳುವುದು ಈಗಿನ ಅಗತ್ಯ.

ಪರಿಸರ ಪ್ರವಾಸೋದ್ಯಮ

ಕರ್ನಾಟಕದ ಪರಿಸರವು ಪ್ರವಾಸೋದ್ಯಮ ಅಭಿವೃದ್ಧಿಗೆ ಹೇರಳ ಅವಕಾಶಗಳನ್ನು ಒದಗಿಸಿದೆ. ನಂದಿಬೆಟ್ಟ, ಕೆಮ್ಮಣ್ಣು ಗುಂಡಿ ಎರಡು ಉದಾಹರಣೆಗಳು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಪರಿಸರ ಪ್ರವಾಸೋದ್ಯಮಕ್ಕೆ ಉಪಯುಕ್ತ ತಾಣ ಕೆಮ್ಮಣ್ಣುಗುಂಡಿಯೊಂದೇ ಅಲ್ಲ. ಅಂಥ ಹತ್ತಾರು ತಾಣಗಳು, ನವರಾಶಿ ಗಿರಿಪರ್ವತಗಳೂ ಇವೆ. ನಗರಜೀವನದಲ್ಲಿ ಬೇಸತ್ತ ಜನ ಇಂಥ ಪ್ರಕೃತಿಯ ಮಡಿಲಲ್ಲಿ ವಾರಾಂತ್ಯ ಪ್ರವಾಸ ಮಾಡಲು ಹಪಹಪಿಸುತ್ತಾರೆ. ಸೂಕ್ತ ಸೌಕರ್ಯಗಳಿಲ್ಲದ ಕಾರಣ ಆಕರ್ಷಕ ಪರಿಸರದ ವಿಹಾರ ತಾಣಗಳು ಇನ್ನೂ ನಗಣ್ಯವಾಗಿ ಉಳಿದಿವೆ.

ಪರಿಸರ ಪ್ರವಾಸೋದ್ಯಮದ ಇನ್ನೊಂದು ಭಾಗ ಚಾರಣ. ಈಗೀಗ ಚಾರಣಕ್ಕಾಗಿ ಗಿರಿಕಂದರಗಳನ್ನು ಅರಸಿ ಬರುವ ಉತ್ಸಾಹಿಗಳು ಹೆಚ್ಚುತ್ತಿದ್ದಾರೆ. ಕರ್ನಾಟಕದ ತುಂಬ ಚಾರಣಿಗರನ್ನು ಕೈಬೀಸಿ ಕರೆಯುವ ತಾಣಗಳೂ ಇವೆ. ಇಡೀ ಚಿಕ್ಕಮಗಳೂರು ಜಿಲ್ಲೆಯೇ ಚಾರಣಿಗರ ಸ್ವರ್ಗ. ಮುಳ್ಳಯ್ಯನ ಗಿರಿ ಕರ್ನಾಟಕದ ಅತ್ಯುನ್ನತ ಶಿಖರವಂತೆ. ಅದನ್ನು ಹತ್ತಿ ನಿಲ್ಲುವುದೊಂದು ಅಭೂತ ಅನುಭವ. ಹಾಗೆಯೇ ಇತ್ತ ಪಶ್ಚಿಮ ಘಟ್ಟಗಳಲ್ಲಿ ಅತ್ತ ಬಯಲು ಸೀಮೆಯ ನಡುವೆ ಅಲ್ಲಲ್ಲಿ ತ್ರಾಣ ಇರುವವರು ಮಾತ್ರ ಹತ್ತಬಹುದಾದ ಗುಡ್ಡಗಳಿವೆ.

ಮೂಲತಃ ಪ್ರವಾಸೋದ್ಯಮ ಇಲಾಖೆ ಈ ತಾಣಗಳಿಗೆ ಸಾಕಷ್ಟು ಪ್ರಚಾರ ನೀಡಬೇಕು. ಚಾರಣ ಹೋಗಬಹುದಾದ ಮಾರ್ಗಗಳು, ಉಳಿಯಬಹುದಾದ ಸ್ಥಳಗಳು ಮುಂತಾದವುಗಳ ನಕ್ಷೆ ಎಲ್ಲೆಡೆ ಲಭ್ಯವಾಗಬೇಕು. ಹಿಂದಿನ ವರ್ಷ ಹಾಸನದ ಘಾಟಿಗಳಲ್ಲಿ ಚಾರಣದ ಹಾದಿಹುಡುಕಿ ಹೋದವರು ಇಬ್ಬರು ನಾಪತ್ತೆಯಾದ, ವರ್ಷದ ಬಳಿಕ ಹೆಣವಾಗಿ ಸಿಕ್ಕಿದ ಭಯಾನಕ ಘಟನೆ ಒಂದು ಕಪ್ಪು ಚುಕ್ಕೆ.

ಚಾರಿತ್ರಿಕ ಪ್ರವಾಸೋದ್ಯಮ

ಇದನ್ನು ನಾನು ಹೆಸರಿಸಿದ್ದು ಕರ್ನಾಟಕ ಚಾರಿತ್ರಿಕ ಸ್ಥಳಗಳನ್ನು ಗಮನದಲ್ಲಿಟ್ಟು. ಹಂಪಿ ನಮ್ಮ ಚರಿತ್ರೆ, ಸಂಸ್ಕೃತಿ ಎಲ್ಲವುಗಳ ಪ್ರತಿನಿಧಿ. ಶ್ರೀರಂಗಪಟ್ಟಣ, ಮೈಸೂರು, ಬಾದಾಮಿ, ಬಿಳಗಿ, ಸ್ವಾದಿ, ಕೆಳದಿ, ಗೇರುಸೊಪ್ಪೆ... ... ನಾಡಿನ ತುಂಬ ಇಂಥ ಚಾರಿತ್ರಿಕ ಸ್ಥಳಗಳಿವೆ. ಕಾಲದ ಮಹಿಮೆಯೆಂಬಂತೆ ಇಲ್ಲಿ ಅಳಿದುಳಿದ ಚಾರಿತ್ರಿಕ

ಕುರುಹುಗಳೂ ಅಪಾಯದ ಅಂಚಿನಲ್ಲಿವೆ. ಈ ರಾಜ ವೈಭವದ ತಾಣಗಳನ್ನು ಪ್ರಜಾಪ್ರಭುತ್ವದ ಈ ಕಾಲದಲ್ಲಿ ಮತ್ತೆ ಅಭಿವೃದ್ಧಿಪಡಿಸುವುದು ಕನಸಿನ ಮಾತು. ಆದರೆ ಇರುವ ಸ್ಥಿತಿಯಲ್ಲಿ ಉಳಿಸಿಕೊಳ್ಳುವ, ನಮ್ಮ ಚರಿತ್ರೆ ಸಾರುವ ಸ್ಥಳಗಳನ್ನು ಪ್ರವಾಸೀ ತಾಣಗಳಾಗಿ ಅಭಿವೃದ್ಧಿಪಡಿಸಿ ನಗದೀಕರಿಸಿಕೊಳ್ಳುವ ಕೆಲಸ ಆಗಬೇಕು. ಈಗ ಈ ಚಾರಿತ್ರಿಕ ಸ್ಥಳಗಳಲ್ಲಿ ಪ್ರಾಚ್ಯ ವಸ್ತು ಇಲಾಖೆ ಒಂದು ಬೋರ್ಡನ್ನು ನೆಡುವುದು ಬಿಟ್ಟರೆ ಬೇರೇನೂ ಇರುವುದಿಲ್ಲ. ಇವು ಕತ್ತಲ ಚಟುವಟಿಕೆಗಳ ತಾಣವಾಗುವುದೇ ಹೆಚ್ಚು.

ಸಾಂಸ್ಕೃತಿಕ ಪ್ರವಾಸೋದ್ಯಮ

ಮೈಸೂರಿನಲ್ಲಿ ಕರ್ನಾಟಕ ಸರ್ಕಾರದ ನಾಟಕ ರೆಪರ್ಟರಿ 'ರಂಗಾಯಣ' ಇದೆ. ಪ್ರತಿ ವಾರಾಂತ್ಯ ನಾಟಕ ಪ್ರದರ್ಶನವಿದೆ. ಪ್ರತಿ ಶನಿವಾರ ರಂಗಾಯಣದ ವನರಂಗದಲ್ಲಿ ಪ್ರವಾಸೋದ್ಯಮ ಇಲಾಖೆಯ ನೆರವಿನಿಂದ ಜಾನಪದ ಕಲಾ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತದೆ. ಹಾಗೆ-ಸಾಗರ ತಾಲ್ಲೂಕಿನ ಹೆಗ್ಗೋಡಿಗೆ ನಮ್ಮ ಸಾಂಸ್ಕೃತಿಕ ಉತ್ಸವ ಹಾಗೂ ಹತ್ತನೇ ದಿನದ ಭವ್ಯ ಮೆರವಣಿಗೆ ರಾಜ್ಯದ ಪ್ರವಾಸೋದ್ಯಮದ ಪ್ರಮುಖ ದಿನಗಳು. ಈಗ ಸರ್ಕಾರವೇ ಹಂಪಿ ಉತ್ಸವ, ಪಟ್ಟದಕಲ್ಲು ಉತ್ಸವ, ಕರಾವಳಿ ಉತ್ಸವ ಕದಂಬೋತ್ಸವ, ಲಕ್ಕುಂಡಿ ಉತ್ಸವ ಮುಂತಾದ ಉತ್ಸವಗಳನ್ನು ಆಚರಿಸುತ್ತಿದೆ. ಇವೆಲ್ಲ ಸಾಂಸ್ಕೃತಿಕ ಪ್ರವಾಸೋದ್ಯಮಕ್ಕೆ ಇಂಬು ಕೊಡುವ ಸಂದರ್ಭಗಳು. ಇಂಥ ಪ್ರಯತ್ನಗಳು ಖಾಸಗೀ ನೆಲೆಯಲ್ಲೂ ಆಗುತ್ತಿವೆ. ಉದಾಹರಣೆಗೆ, ಮೂಡುಬಿದಿರೆಯಲ್ಲಿ ವಾರ್ಷಿಕವಾಗಿ ನಡೆಯುತ್ತಿರುವ ಆಳ್ವಾಸ್ ನುಡಿಸಿರಿ, ಹಾಸಣಗಿಯಲ್ಲಿ ಪ್ರತಿವರ್ಷ ನಡೆಯುವ ರಾಜಗುರು ಸಂಗೀತೋತ್ಸವ ಇಂಥ ಪ್ರಯತ್ನಗಳು. ಇವು ಸಂಸ್ಕೃತಿಯನ್ನು ಬಿಂಬಿಸುತ್ತವೆ. ಪ್ರವಾಸಿಗಳನ್ನು ಕೈಬೀಸಿ ಕರೆಯುತ್ತವೆ.

ಮಾನವ ನಿರ್ಮಿತ ಪ್ರವಾಸೀ ಆಕರ್ಷಣೆಗಳು

ವಿಜಾಪುರದ ಗೋಲಗುಂಬಜ್, ಶ್ರವಣಬೆಳ್ಗೊಳದ ಬಾಹುಬಲಿ, ಕೈವಾರದ ಕೋಟಿ ಲಿಂಗಗಳು, ಮುರುಡೇಶ್ವರದ ಈಶ್ವರ ಇವೆಲ್ಲ ಮಾನವ ನಿರ್ಮಿತ ಪ್ರವಾಸೀ ಆಕರ್ಷಣೆಗಳು. ಹಿಂದೆ ಮುರುಡೇಶ್ವರದ ಕ್ಷೇತ್ರ ಮಾಮೂಲಿ ಸಮುದ್ರ ದಂಡೆಯಾಗಿತ್ತು. ಏಕವ್ಯಕ್ತಿಯ ಪ್ರಯತ್ನದ ಫಲವಾಗಿ ರಾಜ್ಯದ ಪ್ರಮುಖ ಆಕರ್ಷಣೆಯ ಕೇಂದ್ರವಾಗಿ ಬೆಳೆದಿರುವುದಕ್ಕೆ ನಾವೆಲ್ಲ ಸಾಕ್ಷಿಗಳಾಗಿದ್ದೇವೆ. ಹೀಗೆ ಮಾನವ ನಿರ್ಮಿತ ಪ್ರವಾಸೀ ಆಕರ್ಷಣೆಗಳು ಕರ್ನಾಟಕದಲ್ಲಿ ಹೇರಳವಾಗಿ ಇವೆ. ಹೆಚ್ಚಾಗಿ ಇವು ಖಾಸಗೀ ವಲಯದಲ್ಲೇ ಇದ್ದು ಸಾಕಷ್ಟು ಬೆಳೆದಿವೆ.

ಆಧ್ಯಾತ್ಮ ಪ್ರವಾಸೋದ್ಯಮ

ಧಾರ್ಮಿಕ ಕ್ಷೇತ್ರಗಳನ್ನು ಬಿಟ್ಟು ಆಧ್ಯಾತ್ಮಿಕ ಪ್ರವಾಸೋದ್ಯಮವನ್ನೇ ಪ್ರತ್ಯೇಕವಾಗಿ ವಿಭಾಗಿಸುವುದಕ್ಕೆ ಕಾರಣಗಳಿವೆ. ಪುತ್ತೂರಿನಲ್ಲಿ ಒಬ್ಬ ಅಜ್ಜ ಇದ್ದರು. ತಾನು – ಸತ್ತು ಪುನರ್‌ಜನ್ಮ ಪಡೆದವನೆಂದೇ ನಂಬಿದವರು ಅವರು. ಪುತ್ತೂರು ಅಜ್ಜನೆಂದೇ ಖ್ಯಾತರಾಗಿದ್ದ ಅವರನ್ನು ಅರಸಿಕೊಂಡು ಅದೆಷ್ಟು ವಿದೇಶೀ ಪ್ರವಾಸಿಗರು ಬರುತ್ತಿದ್ದರು! ದೇಶವಿದೇಶಗಳ ಬುದ್ಧಿವಂತರು – ಶ್ರೀಮಂತರು ಅವರ ಅನುಯಾಯಿಗಳಾಗಿದ್ದರು. ಹೇಳಿಕೇಳಿ, ನಮ್ಮದು ಸಂತರ, ಆಚಾರ್ಯರ ನಾಡು. ಮೈಸೂರಿನಲ್ಲಿ ಅವಧೂತ ದತ್ತ ಪೀಠವಿದೆ. ಅದರ ಮುಖ್ಯಸ್ಥರಾದ ಗಣಪತಿ ಸಚ್ಚಿದಾನಂದ ಸ್ವಾಮಿಗಳಿಗೆ ಜಗತ್ತಿನಾದ್ಯಂತ ಶಿಷ್ಯರಿದ್ದಾರೆ. ಶಾಂತಿಯನ್ನು ಅರಸಿ ಅವರ ಬಳಿ ಬರುತ್ತಾರೆ. ಕೆಲವರಿಗೆ ಅದು ಮೌಢ್ಯವಾಗಿ ಕಾಣಬಹುದಾದರೂ ಯಾರಿಗೆ, ಯಾವುದರಲ್ಲಿ ಶಾಂತಿ ಸಿಕ್ಕೀತೆಂದು ಹೇಗೆ ಹೇಳಬಹುದು? ಆದರೆ ಆಧ್ಯಾತ್ಮ ಪ್ರವಾಸೋದ್ಯಮವೂ ನಮ್ಮ ಮಠ–ಪೀಠಗಳು, ಸಾಧು–ಸಂತರ ಕಾರಣದಿಂದ ಬೆಳೆಯಬಹುದಾದ ಒಂದು ಉದ್ಯಮ ಎಂಬುದು ಖಚಿತ ನಂಬಿಕೆ.

ಆಹಾರ ಪ್ರವಾಸೋದ್ಯಮ

ರಾಮನಗರದ ಬಳಿಯಿರುವ ಜಾನಪದ ಕಲಾಲೋಕದಲ್ಲಿ ಕಾಮತ್ ಲೋಕರುಚಿ ಎಂಬ ಹೊಟೇಲಿದೆ. ಅಲ್ಲಿ ಉತ್ತರ ಕರ್ನಾಟಕದ ಶೈಲಿಯಲ್ಲಿ ಎಣ್ಣೆಗಾಯಿ ಹಾಗೂ ಜೋಳದ ರೊಟ್ಟಿಯನ್ನು ಬಡಿಸುತ್ತಾರೆ. ತಿನ್ನಲು ಜನ ಕ್ಯೂ ನಿಲ್ಲುತ್ತಾರೆ! ಉತ್ತರ ಕರ್ನಾಟಕದ ಜೋಳದ ರೊಟ್ಟಿ ಈಗ ದಕ್ಷಿಣ ಕರ್ನಾಟಕದಲ್ಲಿ ಜನಪ್ರಿಯವಾಗಿರುವುದು ಆಹಾರ ಪ್ರವಾಸೋದ್ಯಮದ ಕಲ್ಪನೆಯನ್ನು ಗಟ್ಟಿಗೊಳಿಸುತ್ತದೆ. ಮಂಗಳೂರಿನ ಮೀನು, ಸೋಮೇಶ್ವರದ ನೀರುದೋಸೆ, ಶಿರಸಿಯ ತೊಡೆದೇವು, ಗೋಕಾಕದ ಕರದಂಟು, ದಾವಣಗೆರೆಯ ಬೆಣ್ಣೆದೋಸೆ... ... ಹೀಗೆ ಆಯಾ ಊರಿನ ಹೆಸರು ಗಳಿಸಿದ ತಿಂಡಿತಿನಿಸುಗಳು ಬಹಳ ಇವೆ. ತೊಡೆದೇವು ತಿನ್ನುದಕ್ಕಾದರೂ ಶಿರಸಿಗೆ ಹೋಗಬೇಕು ಎನ್ನುವ ಪರಿಸ್ಥಿತಿ ನಿರ್ಮಾಣವಾದರೆ ಆಹಾರ ಪ್ರವಾಸೋದ್ಯಮ ಚಾಲ್ತಿಗೆ ಬರುತ್ತದೆ. ಮಾತ್ರವಲ್ಲ ಪ್ರವಾಸೋದ್ಯಮಕ್ಕೆ ಕುಮ್ಮಕ್ಕು ಬರುತ್ತದೆ. ಒಂದು ಕಾಲದಲ್ಲಿ ಗೋವಾದ ಮೀನು ಮತ್ತು ಮದ್ಯ ಸಮುದ್ರದ ಹಾಗೆ ಆಕರ್ಷಣೆಯ ಕೇಂದ್ರವಾಗಿತ್ತಲ್ಲ?

ಹೀಗೆ ಹಲವು ರೀತಿಗಳಲ್ಲಿ ಕರ್ನಾಟಕದ ಪ್ರವಾಸೋದ್ಯಮ ಸಾಧ್ಯತೆಗಳನ್ನು ವಿಭಾಗಿಸಿ ನೋಡಬಹುದು. ಇಷ್ಟೇ ಅಂತ ಅಲ್ಲ. ಕರ್ನಾಟಕದ ಪ್ರವಾಸೋದ್ಯಮ ಸಾಧ್ಯತೆಗಳು ಅನಂತ. ಅದನ್ನು ಸರಿಯಾಗಿ ಬಳಸಿಕೊಳ್ಳುವ ಪ್ರಯತ್ನಕ್ಕೆ ಆಮೂಲಾಗ್ರ ಬದಲಾವಣೆ ಆಗಬೇಕು. ಕರ್ನಾಟಕದ ಪ್ರವಾಸೋದ್ಯಮ ಪುನರ್ ಜನ್ಮ ಪಡೆಯಬೇಕು ಎಂದರೆ ತಪ್ಪಲ್ಲ.

ಕರ್ನಾಟಕದ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಜಾನಪದದ ಪಾತ್ರ

ಜೀವನದಿಂದ ಜಾನಪದವನ್ನು ಪ್ರತ್ಯೇಕಿಸಿ ನೋಡುವುದು ಅಸಾಧ್ಯ. ಒಂದು ದೇಶಕ್ಕೆ ಪ್ರವಾಸ ಹೋಗುವುದೆಂದರೆ ಆ ದೇಶದ ಜನ-ಜೀವನ ವಿಧಾನ, ಸಂಸ್ಕೃತಿ-ಕಲೆ ಎಲ್ಲವನ್ನೂ ಅರ್ಥಮಾಡಿಕೊಳ್ಳಬೇಕು. ಅಂದರೆ ಆ ದೇಶದ ಜನಪದರ ಇಡೀ ಜೀವನವನ್ನು ಹೊಕ್ಕು ಹೊರಬರಬೇಕು. ಆಗಷ್ಟೇ ಆ ದೇಶ ಅರ್ಥವಾಗುತ್ತದೆ. ವಿಮಾನದಲ್ಲಿ ಬಂದು, ಪಂಚತಾರಾ ಹೊಟೇಲಲ್ಲಿ ಉಳಿದು ಸೂಟು-ಬೂಟು ಹಾಕಿದವರು ನಡೆಸುವ ಸೆಮಿನಾರುಗಳಲ್ಲಿ ಭಾಗವಹಿಸಿದ ಮಾತ್ರಕ್ಕೆ ಈ ದೇಶ ಅರ್ಥವಾದೀತೇ? ನಿಜವಾದ 'ಭಾರತ' ಅರ್ಥವಾಗಬೇಕಾದರೆ ಹಳ್ಳಿಗಳಲ್ಲಿ ಸುತ್ತಬೇಕು. ಹಳ್ಳಿ ಜನರನ್ನು ಮಾತನಾಡಿಸಬೇಕು. ಅವರೊಡನೆ ಬೆರೆಯಬೇಕು.

ರಾಜಸ್ಥಾನದ ಮರುಭೂಮಿಗಳಲ್ಲಿ ಪ್ರವಾಸ ಹೋದವರಿಗೆ ಒಂದು ಅವಕಾಶವಿದೆ. ರಾತ್ರಿ ಈ ಮರುಭೂಮಿಯಲ್ಲಿ ಟೆಂಟುಗಳಲ್ಲಿ ಉಳಿಯಬಹುದಂತೆ. ರಾತ್ರಿ ಹಳ್ಳಿಗಳ ಊಟ ಸವಿದು, ಹಳ್ಳಿಗರ ನರ್ತನ ನೋಡಿ, ಬೆಂಕಿಯ ಸುತ್ತ ಕುಳಿತು ಹರಟಬಹುದಂತೆ.

ಹಾಗೆಯೇ ಗೋವಾದಲ್ಲಿ ಹಡಗಿನಲ್ಲಿ ರಾತ್ರಿವೇಳೆ ಪ್ರವಾಸಿಗರನ್ನು ವಿಹಾರಕ್ಕೆ ಕರೆದೊಯ್ಯುತ್ತಾರೆ. ಆ ಹಡಗನ್ನು ವಿಶೇಷವಾಗಿ ಅಲಂಕರಿಸಿರುತ್ತಾರೆ. ಒಳಗಡೆ ಗೋವಾದ ಊಟ-ಮದ್ಯದ ಸರಬರಾಜು. ಅದಕ್ಕೆ ರಂಗೇರಿಸುವಂತೆ ಸ್ಥಳೀಯರಿಂದ ನೃತ್ಯ ಪ್ರದರ್ಶನ. ಗೋವಾದ ಪ್ರವಾಸೋದ್ಯಮದಲ್ಲಿ ಇದು ಅತ್ಯಂತ ಆಕರ್ಷಣೆಯ ಕೇಂದ್ರವಾಗಿದೆ. ಹೈದರಾಬಾದಿನಲ್ಲೂ ಇಂಥ ವ್ಯವಸ್ಥೆ ಬುದ್ಧಪ್ರತಿಮೆಯ ಬಳಿಯಿದೆ.

ಬೆಂಗಳೂರಿನ ಶ್ರೀಮಂತ ಕ್ಲಬ್ಬುಗಳಲ್ಲಿ ಇಂಥ ನರ್ತನಗಳಿರುವುದನ್ನು ಬಿಟ್ಟರೆ, ಪ್ರವಾಸಿಗಳ ಸೆಳೆಯಲು ಸ್ಥಳೀಯ ಆಹಾರ-ವಿಹಾರ-ನರ್ತನ ಸಾಧ್ಯತೆಗಳನ್ನು ಬಳಸಿಕೊಂಡ ಪ್ರಯೋಗಗಳು ಹೆಚ್ಚಾಗಿ ನಡೆದಂತಿಲ್ಲ. ನಮ್ಮಲ್ಲಿ ವಿಶಾಲ ಸಮುದ್ರವಿದೆ. ಹೊಳೆ ದಂಡೆಗಳಿವೆ. ಹೊಳೆಗಳು ಕೂಡುವ ಸಂಗಮ ಸ್ಥಾನಗಳಿವೆ. ಅಲ್ಲಿ ದೋಣಿವಿಹಾರಗಳನ್ನು ಏರ್ಪಡಿಸಬಹುದು. ಅರಬ್ಬೀ ಸಮುದ್ರವನ್ನು ಪ್ರವಾಸೀ ಆಕರ್ಷಣೆಯಾಗಿ ಬಳಸಿಕೊಳ್ಳಲು ನಾವು ಸೋತಿದ್ದೇವೆ. ಹಾಗೆಯೇ ಕರಾವಳಿಯ ಹಾಡು-ಕುಣಿತ-ಭೂತಕೋಲ ಮುಂತಾದ ಸಂಪ್ರದಾಯಗಳು, ಜಾನಪದ ಕಲಾ ಪ್ರಕಾರಗಳನ್ನು ಉಳಿಸಲಿಕ್ಕಾದರೂ ಪ್ರವಾಸೀ ಆಕರ್ಷಣೆಯ ಬಂಡವಾಳವನ್ನಾಗಿಸಿ ನಗರೀಕರಿಸಿಕೊಳ್ಳುವ ಅಗತ್ಯವಿದೆ. ಪ್ರವಾಸೋಅರಬ್ಬೀ ಸಮುದ್ರವನ್ನು ಪ್ರವಾಸೀ ಆಕರ್ಷಣೆಯಾಗಿ ಬಳಸಿಕೊಳ್ಳಲು ನಾವು ಸೋತಿದ್ದೇವೆ. ಹಾಗೆಯೇ ಕರಾವಳಿ ಹಾಡು-ಕುಣಿತ-ಭೂತಕೋಲ ಮುಂತಾದ ಸಂಪ್ರದಾಯಗಳು, ಜಾನಪದ ಕಲಾ

ಪ್ರಕಾರಗಳನ್ನು ಉಳಿಸಲಿಕ್ಕಾದರೂ ಪ್ರವಾಸೀ ಆಕರ್ಷಣೆಯ ಬಂಡವಾಳವನ್ನಾಗಿಸಿ ನಗರೀಕರಿಸಿಕೊಳ್ಳುವ ಅಗತ್ಯವಿದೆ. ಪ್ರವಾಸೋದ್ಯಮ ಇಲಾಖೆ ಈ ನಿಟ್ಟಿನಲ್ಲಿ ಶ್ರಮಿಸಬೇಕಿದೆ. ಊರೂರ ಜಾತ್ರೆ-ತೇರಿನ ಸಂದರ್ಭಗಳಲ್ಲಿ ವಿಶೇಷವಾಗಿ ಹಾಡುವ ಹಾಗೂ ಕುಣಿಯುವ ಸಂಪ್ರದಾಯಗಳಿವೆ. ಕರಾವಳಿಯ ಗುಮಟೆ ಪದ, ಹೂವಿನ ಮಕ್ಕಳ ಹಾಡು-ಕುಣಿತವನ್ನು ನಾನು ಚಿಕ್ಕಂದಿನಲ್ಲಿ ನೋಡಿ ಆನಂದಿಸಿದ್ದೇನೆ. ಈಗ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಆರಂಭಗೊಂಡಿರುವ ತಿಂಗಳಿಗೊಮ್ಮೆ ನಡೆಯುವ ಜಾನಪದ ಕಾರ್ಯಕ್ರಮಗಳು ಪ್ರತಿ ಜಿಲ್ಲೆಯಲ್ಲಿ ತಿಂಗಳಿಗೊಮ್ಮೆ ನಡೆಯುವಂತಾಗಬೇಕು. ಜಿಲ್ಲೆ-ಜಿಲ್ಲೆಗಳ ಕಲೆಗಳ ಕೂಡುಕೊಳ್ಳುವಿಕೆ ಆಗಬೇಕು. ನಿಗದಿತ ದಿನಗಳಂದು ನಡೆಯುವ ಈ ಕಾರ್ಯಕ್ರಮಗಳಿಗೆ ವ್ಯಾಪಕ ಪ್ರಚಾರ ನೀಡಿ ದೇಶ-ವಿದೇಶೀಯರನ್ನು ಆಕರ್ಷಿಸುವಂತಾಗಬೇಕು. ಹೀಗೆ ಮಾಡುವುದರಿಂದ ಮೂರು ಪ್ರಯೋಜನಗಳಿವೆ.

೧. ನಮ್ಮ ಜನಪದಕಲೆಗಳು ಉಳಿಯುತ್ತವೆ. ಹೊಸ ಬೆಳಕಿನಲ್ಲಿ ಹೊಸ ಮೆರಗು ಪಡೆದು ಪ್ರಜ್ವಲಿಸುವಂತಾಗುತ್ತದೆ.

೨. ಉತ್ತರ ಕನ್ನಡದ ಜನ ಬೀದರು, ಕೋಲಾರದ ಕಲೆಗಳನ್ನು ನೋಡುವ, ಕಲಿಯುವ ಅವಕಾಶವಾಗುತ್ತದೆ. ಕರ್ನಾಟಕದ ಕಲೆಗಳಲ್ಲಿ ಎಂಥಾ ವೈವಿಧ್ಯವಿದೆಯೆಂದರೆ ನಮ್ಮವರಿಗೇ ಅವು ಅಪರಿಚಿತವಾಗಿ ಉಳಿದಿವೆ. ಪ್ರತಿ ತಿಂಗಳು ಪೂರ್ವ ಸ್ಥಳ ಹಾಗೂ ದಿನಾಂಕಗಳಂದು ಬೇರೆ ಬೇರೆ ಜಿಲ್ಲೆಗಳ ಕಲಾ ಪ್ರಕಾರಗಳನ್ನು ಪ್ರದರ್ಶಿಸುವುದರಿಂದ ಈ ಕಲೆ ಹಾಗೂ ಕಲಾವಿದರುಗಳಿಗೆ ಪ್ರಚಾರ ಸಿಕ್ಕುತ್ತದೆ.

೩. ಪ್ರವಾಸೋದ್ಯಮದ ದೃಷ್ಟಿಯಿಂದ ಈ ಬೆಳೆವಣಿಗೆ ಬಹಳ ಉಪಯುಕ್ತ. ಹೆಚ್ಚಿನ ಪ್ರವಾಸಿಗರನ್ನು ಸೆಳೆಯುವ ಉಪಾಯಗಳು. ಒಂದು ಊರಿಗೆ ನೂರು ಜನ ಬೇರೆ ಊರಿನ ಪ್ರೇಕ್ಷಕರು ಬಂದರೂ ಊರಿನ ವ್ಯಾಪಾರ-ವಹಿವಾಟುಗಳು ಹೆಚ್ಚುತ್ತವೆ. ಜನಗಳ ದುಡಿಮೆಯ ಅವಕಾಶಗಳು ವಿಸ್ತರಿಸುತ್ತವೆ. ಪ್ರವಾಸೋದ್ಯಮದ ಅಭಿವೃದ್ಧಿ ಒಂದು ಜಿಲ್ಲೆಯ ಸರ್ವಾಂಗೀಣ ಪ್ರಗತಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣವಾಗುವುದು ಹೀಗೆ.

* ಒಟ್ಟಾರೆ ಕರ್ನಾಟಕದಲ್ಲಿ ಪ್ರವಾಸೋದ್ಯಮ ಸಾಧ್ಯತೆಗಳ ಕುರಿತಾಗಿ ನನ್ನ ಚಿಂತನೆಗಳನ್ನು ಹೀಗೆ ಸಮೀಕರಿಸುತ್ತೇನೆ.
* ಪ್ರವಾಸೋದ್ಯಮ ಜಗತ್ತಿನ ಪ್ರಮುಖ ಉದ್ಯಮವಾಗಿದ್ದು ಆಯಾ ಪ್ರದೇಶಗಳ ಅಭಿವೃದ್ಧಿಗೆ ಉತ್ತಮ ಕಾಣಿಕೆ ನೀಡಬಲ್ಲದು.
* ದೇಶದಲ್ಲಿ ಕರ್ನಾಟಕವು ಪ್ರವಾಸೋದ್ಯಮ ನಕ್ಷೆಯಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದು, ಪ್ರವಾಸೋದ್ಯಮ ಇಲಾಖೆ ಕರ್ನಾಟಕದ ಪ್ರವಾಸೀ ನಕ್ಷೆಯನ್ನು ಪುನಾರಚಿಸಿದರೆ, ಮೊದಲ ಸ್ಥಾನಕ್ಕೆ ಏರುವ ಎಲ್ಲಾ ಅರ್ಹತೆ ಕರ್ನಾಟಕಕ್ಕೆ ಇದೆ.

* ಕರ್ನಾಟಕದ ಎಲ್ಲಾ ಪ್ರವಾಸೀ ತಾಣಗಳನ್ನು ಜೋಡಿಸುವ ರೈಲು ಪ್ರಯಾಣ ಸಾಧ್ಯವಾಗಬೇಕು. ಮೂಲ ಸೌಕರ್ಯಗಳ ಅಭಿವೃದ್ಧಿಯಾಗಬೇಕು.
* ಜಿಲ್ಲಾ ಮಟ್ಟದಲ್ಲಿ ಜಾನಪದ ಕಲೆಗಳ ಪ್ರದರ್ಶನ ಪೂರ್ವ ನಿಗದಿತ ಸ್ಥಳ. ದಿನಾಂಕಗಳಂದು ನಡೆದು ಜಾನಪದ ಕಲೆಗಳ ವಿನಿಮಯವಾಗಬೇಕು. ಪ್ರವಾಸಿಗರನ್ನು ಆಕರ್ಷಿಸಲು ಈ ಕಲೆಗಳನ್ನು ಬಳಸಿಕೊಳ್ಳಬೇಕು.
* ಪ್ರವಾಸವು ವಿಲಾಸಕ್ಕಲ್ಲ, ವಿಕಾಸಕ್ಕೆ. ಸಾಂಸ್ಕೃತಿಕ ಅನನ್ಯತೆಗೆ ಧಕ್ಕೆಯಾಗದ ಪ್ರವಾಸೋದ್ಯಮ ಅಭಿವೃದ್ಧಿಗೊಳ್ಳಬೇಕು.

❑

೪. ಗೌರಿಪುರದ ಉಮಾಮಹೇಶ್ವರ ದೇವಾಲಯ – ಒಂದು ಅಧ್ಯಯನ

– ಎಸ್.ಜಿ. ರಾಮದಾಸರೆಡ್ಡಿ

ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕಿನಿಂದ ಸುಮಾರು ೨೨ ಕಿ.ಮೀ. ದೂರದಲ್ಲಿದ್ದು ನಾಯಕನಹಟ್ಟಿ ಪುಣ್ಯಕ್ಷೇತ್ರಕ್ಕೆ ಹೋಗುವ ರಸ್ತೆಯಲ್ಲಿ ಖುದಾಪುರ ಕುರಿಫಾರಂನಿಂದ ಬಲಕ್ಕೆ ತಿರುಗಿ ಸುಮಾರು ೩. ಕಿ.ಮೀ. ಒಳಹಾದಿಯಲ್ಲಿ ಚಲಿಸಿದರೆ ಸಿಗುವುದೇ 'ಗೌರಿಪುರ'.

ಗೌರಿಪುರ ಎಂಬ ಹೆಸರು "ಪಾಂಡವರು ಅಜ್ಞಾತವಾಸದ ಸಂದರ್ಭದಲ್ಲಿ ಗಜಗೌರಿವ್ರತ ಮಾಡಿದರೆಂದು, ಇದೇ ಸ್ಥಳದಲ್ಲಿ ಗೌರಿಶಂಕರ ದೇವಾಲಯ ನಿರ್ಮಾಣ ಆಗಿದೆಯೆಂದು ಅದಕ್ಕೆ 'ಗೌರಿಪುರ' ಎಂಬ ಹೆಸರು ಬಂದಿದೆ ಎಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಪಾಂಡವರು ನೆಲೆಸಿದ್ದರೆಂಬುದಕ್ಕೆ ಪಕ್ಕದಲ್ಲೇ ಭೀಮನಕೆರೆ ಎಂಬ ಹಳ್ಳಿಯಿದೆ. ಹಿಂದೆ ಇದೇ ಸ್ಥಳದಲ್ಲಿ ದೊಡ್ಡಕೆರೆಯಿದ್ದು ಆ ಕೆರೆಯಲ್ಲಿ ಭೀಮ ಈಜುತ್ತಿದ್ದನೆಂದು ಪ್ರತೀತಿ. ಈಗ ಕೆರೆ ಹಾಳಾಗಿದ್ದು ಊರಿಗೆ ಮಾತ್ರ ಭೀಮನ ಕೆರೆ ಎಂದು ಹೆಸರಿದೆ. ಆದರೆ "ನಾಯಕನಟ್ಟಿ ಬಖೈರ್" ನಲ್ಲಿ ಭೀಮನ ಕೆರೆಯನ್ನು ಬೋಡಿಮಲ್ಲಪ್ಪನಾಯಕನ ಕಾಲದಲ್ಲಿ ನಿರ್ಮಾಣ ಆಗಿದೆ ಎಂದಿದೆ.

ಉಮಾಮಹೇಶ್ವರ ದೇವಾಲಯವು ನಾಯಕನಹಟ್ಟಿ ಕೆರೆಯಿಂದ ಹರಿದು ಬರುವ ಹಳ್ಳದ ಬಲದಂಡೆಯ ಮೇಲೆ ಪೂರ್ವ–ಪಶ್ಚಿಮಾಭಿಮುಖವಾಗಿ ಊರಿನ ಪಕ್ಕದಲ್ಲೇ ಉತ್ತರ ದಿಕ್ಕಿಗಿದೆ. ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪ, ಕಂಬಗಳು, ಗೋಪುರ, ಪೌಳಿಗೋಡೆ ಇತರೇ ಅಂಶಗಳಿಂದ ದೇವಾಲಯ ನಿರ್ಮಾಣಗೊಂಡಿದೆ.

ಗರ್ಭಗುಡಿಯು ೭ ಅಡಿ ವಿಸ್ತೀರ್ಣದಲ್ಲಿ ಚಚ್ಚೌಕಾಕಾರವಾಗಿದ್ದು, ಮೂರ್ತಿಶಿಲ್ಪವು ೫ ೧/೨ ಅಡಿ ಎತ್ತರ, ೩ ಅಡಿ ಅಗಲ, ೨ ೧/೨ ಅಡಿ ದಪ್ಪವಿರುವ ಈ ಮೂರ್ತಿ ಶಿಲ್ಪ ಬಳಪದ ಕಲ್ಲಿನಲ್ಲಿದೆ. ಶಿವ ಚತುರ್ಭುಜಾಸಾನದಲ್ಲಿದ್ದು ಬಲಗೈಯಲ್ಲಿ ಗಂಡು ಕೊಡಲಿ, ಎಡಗೈಯಲ್ಲಿ ಚಿಗರೆ, ಇನ್ನೊಂದು ಕೈಯಲ್ಲಿ ಪಾರ್ವತಿಯ ಸೊಂಟ ಹಿಡಿದಿದ್ದಾನೆ. ಇನ್ನೊಂದು ಬಲಗೈಯಲ್ಲಿ ಅಭಯ ಹಸ್ತ ನೀಡಿದ್ದಾನೆ. ಶಿವ ಎಡಗಾಲನ್ನು ಅರಳಿದ ಕಮಲದ ಹೂವಿನ ಮೇಲೆ ಇಟ್ಟಿದ್ದಾನೆ.

ಪಾರ್ವತಿಯು ಬಲಗೈಯಲ್ಲಿ ಕಮಲವನ್ನು, ಎಡಗೈಯನ್ನು ಶಿವನ ತೊಡೆಯ ಮೇಲೆ, ಎರಡು ಕಾಲುಗಳನ್ನು ಕಮಲದ ಹೂವಿನ ಮೇಲೆ ಇಟ್ಟಿದ್ದಾಳೆ. ಪಾರ್ವತಿಯು ಪರಮೇಶ್ವರನ ಎಡಕಾಲಿನ ತೊಡೆಯ ಮೇಲೆ ಕುಳಿತಿದ್ದಾಳೆ. ಮೂರ್ತಿಶಿಲ್ಪ ಬಹಳ ಆಕರ್ಷಕವಾಗಿ ಜಾಲಾಂಧ್ರದಲ್ಲಿ ಕೆತ್ತಲಾಗಿದೆ. ಈ ಶಿಲ್ಪ ಪ್ರತಿಯೊಬ್ಬರನ್ನು ಆಕರ್ಷಿಸುವ ಶಾಂತ ಸ್ವರೂಪದ ಮೂರ್ತಿಶಿಲ್ಪವಾಗಿದೆ. ಈ ಮೂರ್ತಿಶಿಲ್ಪವನ್ನು ಪ್ರೊ. ಬಿ.ಪಿ. ವೀರೇಂದ್ರಕುಮಾರ್ ಅವರು "ಶಿವನ ಮೂರ್ತಿಶಿಲ್ಪಗಳಲ್ಲಿ ಒಂದಾದ ಶಾಂತ ಸ್ವರೂಪದ ಚಂದ್ರಶೇಖರಮೂರ್ತಿ ಶಿಲ್ಪ" ಆಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಮೂರ್ತಿಶಿಲ್ಪದ ಹಾಗೆ ಮದ್ರಾಸ್ ವಸ್ತು-ಸಂಗ್ರಹಾಲಯದಲ್ಲಿರುವ ಪೆನಗೊಂಡದ, ಶಿವನ ಮೇಲೆ ಪಾರ್ವತಿ ಕುಳಿತಿರುವ ಶಿಲ್ಪ, ಗುಡಿಕೋಟೆಯಲ್ಲಿ, ಶಿವನ ಮೇಲೆ ಪಾರ್ವತಿ ಕುಳಿತಿರುವ ಶಿಲ್ಪಗಳು ಅಪರೂಪದ ಶಿಲ್ಪಗಳಾಗಿವೆ.

ಸುಕನಾಸಿಯು ೬ ೧/೨ ಅಡಿ ವಿಸ್ತೀರ್ಣದ, ಚಚ್ಚೌಕಾಕಾರದಲ್ಲಿರುವ ಯಾವುದೇ ಮೂರ್ತಿಶಿಲ್ಪಗಳಿಲ್ಲದೆ ಸರಳವಾಗಿದೆ.

ನವರಂಗವು ೨೪ ಅಡಿ ವಿಸ್ತೀರ್ಣದ ಚಚ್ಚೌಕಾಕಾರದಲ್ಲಿದ್ದು ಕಂಬಗಳು, ಗರ್ಭಗುಡಿಯ ಎದುರಿಗೆ ದಷ್ಟಪುಷ್ಟವಾದ ನಂದಿಯ ಶಿಲ್ಪವಿದೆ. ಕಂಬಗಳಲ್ಲಿ ವಿವಿಧ ರೀತಿಯ ಶಿಲ್ಪಗಳಾದ ರಾಮ; ಲಕ್ಷ್ಮಣ, ಸೀತೆ, ಸರಸ್ವತಿ, ಗಣೇಶ, ದುರ್ಗಿ, ನರಸಿಂಹ, ಆಂಜನೇಯ, ಷಣ್ಮುಖ, ಗಂಡಭೇರುಂಡ, ಗಣೇಶ, ಬೇಡರಕಣ್ಣಪ್ಪ, ಭೈರವ, ವೀರಭದ್ರ ಇನ್ನಿತರ ಶಿಲ್ಪಗಳು ಹಾಗೂ 'ಕಾಮಧೇನು' ಎಂದು ಕರೆಯುವ ಶಿಲ್ಪ ಒಂದೇ ದೇಹ ನಾಲ್ಕು ಹಸುಮುಖಗಳಿವೆ. ಒಂದು ಮುಖ ದೇವಿಯ ಕಡೆ, ಎರಡನೇ ಮುಖ ಮೇಲೆ ನೋಡುತ್ತಿದೆ. ಮೂರನೇ ಮುಖ ಶಿವಲಿಂಗದ ಮೇಲೆ ಬಾಯಿ ಇಟ್ಟಿದೆ. ನಾಲ್ಕನೇ ಮುಖ ಹಸುವಿನ ಕೆಚ್ಚಲಲ್ಲಿ ಹಾಲು ಕುಡಿಯುತ್ತಿದೆ. ವಿಶೇಷ ಶಿಲ್ಪವಾಗಿದೆ. ಜೊತೆಗೆ ಶ್ರೀದೇವಿ, ಭೂದೇವಿಯರ ಶಿಲ್ಪಗಳು, ಪುರುಷಮೃಗ, ಪ್ರಾಣಿಗಳ, ಪಕ್ಷಿಗಳ, ಹೂಬಳ್ಳಿಗಳ ಇನ್ನಿತರ ಶಿಲ್ಪಗಳನ್ನು ಕುಸುರಿ ಕೆಲಸದಿಂದ ಕೆತ್ತಲ್ಪಟ್ಟಿರುವ ಶಿಲ್ಪಗಳು ವಿಶೇಷವಾಗಿವೆ. ಮೇಲ್ಛಾವಣಿ ನಾಲ್ಕು ಪುಷ್ಪ ಬೋದಿಗೆಗಳಿಂದ ಅಲಂಕಾರಗೊಂಡಿವೆ. ಮುಖಮಂಟಪವು ೬ ಅಡಿ ಉದ್ದ, ೭ ಅಡಿ ಅಗಲ

ವಿರುವ ಚಿಕ್ಕ ಶಿಲ್ಪಗಳಿಂದ, ಹೂ ಬಳ್ಳಿಗಳಿಂದ ಗಜಲಕ್ಷ್ಮೀಶಿಲ್ಪದಿಂದ ಅಲಂಕಾರಗೊಂಡಿರುವ ಭಾಗವಾಗಿದೆ.

ದೇವಾಲಯದಲ್ಲಿ ೧೦೦ ವರ್ಷಗಳ ಹಿಂದೆ ದೇವಾಲಯಕ್ಕೆ ದಾನ ಮಾಡಿದ ಜಾಗಟೆ ಬಾರಿಸುವುದರ ಮೂಲಕ ಶ್ರಾವಣ ಮಾಸದಲ್ಲಿ ದೇವರಿಗೆ ರುದ್ರಾಭಿಷೇಕ, ಇನ್ನಿತರೇ ಪೂಜೆಗಳನ್ನು ನೆರವೇರಿಸಿದರೆ, ಕಾರ್ತಿಕಮಾಸ ಸ್ವಾಮಿಯ ಜಾತ್ರೆ ನಡೆಯುತ್ತದೆ. ಜಾತ್ರೆಗೆ ಸುತ್ತ ಮುತ್ತಲ ಹಳ್ಳಿಗಳಿಂದ ಸಾವಿರಾರು ಜನ ಭಕ್ತಾದಿಗಳು ಬಂದು ಬೂದಿ ದಿಬ್ಬದವರೆಗೆ ನಿಲ್ಲುತ್ತಾರೆ. ಬೂದಿದಿಬ್ಬದಲ್ಲಿ ಸಿಗುವ ಬೂದಿಯನ್ನು ಸ್ವೀಕರಿಸಿ ಪೂಜೆ ಮಾಡಿಕೊಂಡು ಹೋಗುತ್ತಾರೆ. ಬೂದಿದಿಬ್ಬವು ದೇವಾಲಯದಿಂದ ೧/೨ ಕಿ.ಮೀ. ದೂರದಲ್ಲಿದ್ದು ಇಲ್ಲಿ ಸಿಗುವ ಬೂದಿ 'ದೇವರ ಎತ್ತುಗಳ ಬೂದಿ' ಎಂದು ಭಕ್ತಿ ಭಾವದಿಂದ ಸ್ವೀಕರಿಸುತ್ತಾರೆ. ('ದೇವರ ಎತ್ತುಗಳ ಬೂದಿ' ಎಂದರೆ– ದೇವರಿಗೆ ಬಿಟ್ಟ ಎತ್ತುಗಳಿಂದ ಸಂಗ್ರಹಿಸಿದ ಸಗಣಿಯ ರಾಶಿ, ಸುಟ್ಟು ಬೂದಿಯಾದುದು. ಈ ಬೂದಿ ಪವಿತ್ರವಾದುದು ಎಂದು ಭಕ್ತಿಯಿಂದ ಸ್ವೀಕರಿಸುತ್ತಾರೆ)

ದೇವಾಲಯದಿಂದ ಸುಮಾರು ೧/೨ ಕಿ.ಮೀ. ದೂರದಲ್ಲಿ ದೇವಾಲಯದ ಎದುರಿನಲ್ಲಿ 'ಹಾವಡದಮ್ಮ' ಮೂರ್ತಿಶಿಲ್ಪವಿದೆ. ಹಾವಿನ ರೂಪದಲ್ಲಿರುವ ಸ್ತ್ರೀ ಶಿಲ್ಪವಾಗಿದ್ದು ಪಶ್ಚಿಮಕ್ಕೆ ಮುಖ ಮಾಡಿಕೊಂಡು ದೇವಸ್ಥಾನದ ಎದುರಿಗೆ ಇರುವ ಶಿಲ್ಪವು ಸುಮಾರು ೧೬, ೧೭ನೇ ಶತಮಾನದ ಶಿಲ್ಪವಾಗಿದೆ. ಹಿಂದೆ ದೇವಸ್ಥಾನದಿಂದ ಹಾವಡದಮ್ಮ ಮೂರ್ತಿಯವರೆಗೆ ಸ್ವಾಮಿಗೆ ಕಂಚಿನ ರಥವನ್ನು ಎಳೆಯುತ್ತಿದ್ದಾರೆಂದು ರಥವು ಪಾಳೇಗಾರರ ಕಾಲದಲ್ಲಿ ನಾಶವಾಯಿತೆಂದು, ಈ ರಥದ ಅವಶೇಷಗಳು ದೇವಾಲಯದ ಮುಂದೆ ಇರುವ ಒಂದು ಶಿಲ್ಪವನ್ನು ತೋರಿಸಿ ಇದೇ ಸ್ಥಳದಲ್ಲಿ ಕಂಚಿನ ರಥಯಿದೆ ಎಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ.

ಹಾವಡದಮ್ಮ ಮೂರ್ತಿಶಿಲ್ಪದ ಸುತ್ತಮುತ್ತ ನವಶಿಲಾಯುಗ ಸಂಸ್ಕೃತಿಯ ಅವಶೇಷಗಳಾದ ಬೂದು ಬಣ್ಣದ ಮಡಿಕೆ ತುಂಡುಗಳು, ಬೂದು ಮಿಶ್ರಿತ ಕೆಂಪುಬಣ್ಣದ ಮಡಿಕೆ ತುಂಡುಗಳು, ಕವಣೆಕಲ್ಲು, ಅರೆಯುವ, ಕುಟ್ಟುವ ಕಲ್ಲುಗಳು ಕಂಡುಬರುತ್ತವೆ. ದೇವಾಲಯದಿಂದ ಸುಮಾರು ೧ ಕಿ.ಮೀ. ದೂರದಲ್ಲಿ ಊರಿನ ಪೂರ್ವಕ್ಕೆ ಬೂದಿದಿಬ್ಬದ ನೆಲೆಯಲ್ಲಿ ನವಶಿಲಾಯುಗ, ಬೃಹತ್ ಶಿಲಾಯುಗ ಸಂಸ್ಕೃತಿಗಳ ಅವಶೇಷಗಳು ದೊರಕಿವೆ.

ಗೋಪುರವು ಸರಳವಾಗಿ ಅಲಂಕಾರಗೊಂಡಿದ್ದು, ಸುಮಾರು ೩೦ ಅಡಿ ಎತ್ತರದಲ್ಲಿದ್ದು ಕಳಸ ಅಲಂಕಾರಿಕವಾಗಿದೆ. ಇಂದು ದೇವಾಲಯ ಊರಿನ ಯುವಕರ ಉತ್ಸಾಹದಿಂದ ಜೀರ್ಣೋದ್ಧಾರಗೊಂಡಿದೆ.

ದೇವಾಲಯದ ವಾಸ್ತುಶಿಲ್ಪದ ಆಧಾರದ ಮೇಲೆ ಕಾಲಮಾನವನ್ನು ವಿಜಯನಗರೋತ್ತರ ಪಾಳೆಗಾರರ ಕಾಲದ ಶೈಲಿಯನ್ನು ಹೋಲುತ್ತದೆ. ಕ್ರಿ.ಶ. ೧೬೦೦ರ ಸಮಯದಲ್ಲಿ ಹಟ್ಟಿ ಪಾಳೆಗಾರರಾದ ಬೋಡಿ ಮಲ್ಲಪ್ಪನಾಯಕ ಕಟ್ಟಿಸಿದನೆಂದು ನಾಯಕನಹಟ್ಟಿ ಬಖೈರ್‌ನಿಂದ ತಿಳಿದುಬರುತ್ತದೆ.

ಒಟ್ಟಿನಲ್ಲಿ ದೇವಾಲಯದ ಮೂರ್ತಿಶಿಲ್ಪ, ವಾಸ್ತು ಶಿಲ್ಪಗಳ ದೃಷ್ಟಿಕೋನಗಳಿಂದ ಪ್ರಮುಖವಾಗಿದ್ದು, ಜಿಲ್ಲೆಯ ವಾಸ್ತುಶಿಲ್ಪಕ್ಕೆ ಮೆರಗು ಚೆಲ್ಲಿ, ಪ್ರವಾಸಿ ಕೇಂದ್ರವಾಗಲು ಯೋಗ್ಯವಾದ ಸ್ಥಳವಾಗಿದೆ.

ಆಕರ ಗ್ರಂಥಗಳು :

೧) ಚಂದ್ರವಳ್ಳಿ - ಎಂ.ವಿ. ಶ್ರೀನಿವಾಸ್, ಲಕ್ಷ್ಮಣ ತೆಲಗಾವಿ - ಪುಟ-೩೨

೨) ನಾಯಕನಹಟ್ಟಿ ಬಖೈರ್ - (ಸಂ.) ೧೯೭೯.

೩) ಸಿದ್ದಪ್ಪ, ಅರ್ಚಕರು ಇವರಿಂದ ಮಾಹಿತಿ.

೪) ಗಣೆಯ ದನಿ - ಮೀರಾಸಾಬಿಹಳ್ಳಿ ಶಿವಣ್ಣ, ಪುಟ-೯೩, ೨೦೦೦

೫) ವಿರೂಪಾಕ್ಷಿ ಪೂಜಾರಹಳ್ಳಿ ಅವರ ಪ್ರಜಾವಾಣಿ ಪತ್ರಿಕಾ ವರದಿ.

೬) ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ

೭) ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್

೮) ಚಿತ್ರದುರ್ಗ ಜಿಲ್ಲಾದರ್ಶಿನಿ

೯) ಪ್ರೊ. ಬಿ.ಪಿ. ವೀರೇಂದ್ರಕುಮಾರ್ ಅವರಿಂದ ಮಾಹಿತಿ.

❑

೫. "…. ಕಣ್ಣು ಕಾಣದ ಗಾವಿಲರು"

– *ಜೆ. ಲೋಹಿತ್*

ತೊಟ್ಟಿಲನ್ನು ತೂಗುವ ಕೈ ದೇಶವನ್ನು ಆಳಿ ತೋರಿಸಿಯಾಯ್ತು; ಅಂತರಿಕ್ಷಕ್ಕೂ ಹೋಗಿ ಬಂದಾಯ್ತು. ಆದರೂ ಈ ಪುರುಷ ಪ್ರಧಾನ ಸಮಾಜದ ನರನಾಡಿಗಳ ತುಂಬೆಲ್ಲಾ 'ಹೆಣ್ಣು' ಎಂದರೆ ಈಗಲೂ ಒಂದು ಬಗೆಯ ತಾತ್ಸಾರ. ಹೆಣ್ಣನ್ನು ದೇವಿಯೆಂದೆಲ್ಲ ಕೊಂಡಾಡುವ ಸಮಾಜದಲ್ಲೇ ಹೆಣ್ಣಿನ ಭ್ರೂಣ ಹತ್ಯೆ ನಡೆಯುವುದು ನಾಗರಿಕ ಸಮಾಜದ ಇಬ್ಬಂದಿತನಕ್ಕೆ ಹಿಡಿದ ಕೈಗನ್ನಡಿಯಾಗಿದೆ.

'ಹೆಣ್ಣು' ಅಂದು, ಇಂದು, ಎಂದೂ ಬಯಸಿ, ಬೇಡಿ, ಹರಕೆ ಹೊತ್ತು ಪಡೆಯುವ ಮಗುವಾಗಿರಲಿಲ್ಲ. ಏಕೆಂದರೆ, ಹೆಣ್ಣು ಹುಟ್ಟಿದ ಮನೆಯಲ್ಲಿಯೇ ಇರದೆ ಇನ್ನೊಂದು ಮನೆಗೆ ಹೋಗುವವಳು ಎಂದು.

'ಅಭಿಜ್ಞಾನ ಶಾಕುಂತಲ'ದಲ್ಲಿ ಕಣ್ವರು "ಅರ್ಥೋ ಹಿ ಕನ್ಯಾ ಪರಕೀಯ ಏವ" ಎಂದಿದ್ದಾರೆ. ಪಂಪನೂ 'ವಿಕ್ರಮಾರ್ಜುನ ವಿಜಯ'ದಲ್ಲಿ ಹೆಣ್ಣನ್ನು "ಪೆಱರೊಡವೆ" ಎಂದಿದ್ದಾನೆ. 'ಐತರೇಯ ಬ್ರಾಹ್ಮಣ'ವು "ಹೆಣ್ಣು ಎಂದಿದ್ದರೂ ಹುಟ್ಟಿದ ಮನೆಯನ್ನು ಬಿಟ್ಟು ಹೋಗುವವಳು. ಆದರೆ ಗಂಡು ಮಕ್ಕಳು ಹುಟ್ಟಿದ ಮನೆಯಲ್ಲಿಯೇ ಇದ್ದು ತಮ್ಮ ದುಡಿಮೆಯಿಂದ ತಾಯಿ–ತಂದೆಗಳನ್ನು ಪೋಷಿಸುವರು. ಹೆಣ್ಣು ಎಲ್ಲಾ ಕಷ್ಟಗಳಿಗೂ ಮೂಲ. ಗಂಡು ಮಗನೊಬ್ಬನೇ ಸಂಸಾರದ ಆಶಾಜ್ಯೋತಿ" ಎಂದಿದೆ.

ಜಾನಪದರೂ ಸಹ ಹೆಣ್ಣನ್ನು "ನೆರೆಮನೆಯ ಸಿರಿದೇವಿ" ಎಂದಿದ್ದಾರೆ. "ಅಪುತ್ರಸ್ಯ ಗತಿರ್ನಾಸ್ತಿ" ಎಂಬ ಮಾತೂ ಇದೆ. ಪುತ್ರನಿಲ್ಲದಿದ್ದರೆ ಸದ್ಗತಿಯೇ ಇಲ್ಲ. ತಮ್ಮ ಸಾವಿನ ನಂತರ ತಮಗೂ, ತಮ್ಮ ಪಿತೃಗಳಿಗೂ ಪಿಂಡವನ್ನು ಹಾಕುವವರು ಯಾರು? ಕುಲಧರ್ಮವನ್ನು ಕಾಪಾಡಿಕೊಂಡು ಬರುವವರು ಯಾರು? ಎಂಬ ಭಾವನೆ ಎಲ್ಲರಲ್ಲಿಯೂ ಮನೆ ಮಾಡಿರುವುದರಿಂದಲೇ ಎಲ್ಲರೂ ಗಂಡು ಮಗುವನ್ನು ಬಯಸುವುದು.

ಯಾವುದೇ ಶಾಸನಗಳನ್ನು ತೆಗೆದುಕೊಳ್ಳಿ. ಅಲ್ಲಿಯೂ ಗಂಡಿಗಾಗಿ ಹಂಬಲಿಸಿ, ಹರಕೆ ಹೊತ್ತು ಬೇಡಿಕೊಂಡಿರುವ ವಿಷಯ ತಿಳಿಯುತ್ತದೆಯೇ ಹೊರತು ಹೆಣ್ಣಿಗಾಗಿ ಹಂಬಲಿಸಿ, ಹರಕೆ ಹೊತ್ತು ಬೇಡಿಕೊಂಡಿರುವುದು ಕಾಣುವುದಿಲ್ಲ. ಶಾಸನಗಳು "ರಾತ್ರಿಗೆ ಚಂದ್ರ ದೀಪಕ, ಹಗಲಿಗೆ ಸೂರ್ಯ ದೀಪಕ, ಮೂರು ಲೋಕಗಳಿಗೂ ಧರ್ಮವು ದೀಪಕ, ಹಾಗೆಯೇ ಕುಲಕ್ಕೆ ಪುತ್ರನು ದೀಪಕ" ಎಂದು ತಿಳಿಸಿವೆ.

ಪ್ರಾಚೀನ ಕಾಲದಿಂದಲೂ ಹೆಣ್ಣಿಗಿಂತ ಗಂಡು ಮಕ್ಕಳೆಂದರೆ ಅಕ್ಕರೆ, ಪ್ರೀತಿ, ವಾತ್ಸಲ್ಯ, ಮಮತೆ, ವ್ಯಾಮೋಹಗಳು ಹೆಚ್ಚು. ಹೆಣ್ಣನ್ನು ಅಧೈರ್ಯ, ಅಬಲೆ, ಅಶಕ್ತೆ, ಚಂಚಲೆ, ಅವಲಂಬಿತೆ ಎಂದೂ ; ಗಂಡನ್ನು ಬೆಳಕು, ದೃಢತೆ, ಧೈರ್ಯ, ಸಬಲ, ಸ್ವತಂತ್ರ – ಇತ್ಯಾದಿಯಾಗಿಯೂ ಸಮಾಜವು ಗುರುತಿಸುತ್ತದೆ.

ಗಂಡು-ಹೆಣ್ಣಿನ ನಡುವಿನ ತಾರತಮ್ಯಗಳು ಹೇಗಿವೆ ನೋಡಿ; "ಹೆಣ್ಣು ಮೂರು ಕಾಸಿನ ಬಿಲ್ಲೆ, ಗಂಡು ಲಕ್ಷದ ತಲೆ", "ಗಂಡು ಕುಟುಂಬದ ತೊಲೆಗಂಬ", "ಹೆಣ್ಣು ಹುಟ್ಟಿದ ಮನೆ ಹಾಳು, ಕಳೆ ಹೆಚ್ಚಿದ ಹೊಲ ಹಾಳು", "ಹೆಣ್ಣು ಹೆತ್ತೋರು ಹಣ್ಣಾದರು, ಗಂಡು ಹೆತ್ತೋರು ಗುಂಡಾದರು", "ಗಂಡು ಆದಾಯದ ಮೂಲ, ಹೆಣ್ಣು ಖರ್ಚಿನ ಹೊರೆ", "ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ" ಎಂಬ ಭಾವನೆಗಳು ಜನರ ಮನದಲ್ಲಿವೆ.

ಜಾನಪದರಲ್ಲೂ ಹೆಣ್ಣಿನ ಬಗೆಗೆ ಅಷ್ಟೇನೂ ಒಲವಿಲ್ಲ. ಹೆಣ್ಣು ಮಗಳೊಬ್ಬಳಿಗೆ ಹೆರಿಗೆಯಾಗಿದೆ. ಆ ವಿಷಯವನ್ನು ಗಂಡನ ಮನೆಯವರಿಗೆ ತಿಳಿಸಬೇಕು. ಆದರೆ ಮಗಳು ತಾಯಿಗೆ "ಹೆಣ್ಣು ಹುಟ್ಯಾದಂಥ ಹೇಳಿ ಕಳುವಲಿ ಬೇಡ, ಹೆಣ್ಣೆಂದರವರು ಹೆದರ‍್ಯಾರು" ಎನ್ನುತ್ತಾಳೆ. ಆ ಮಾತಿನಲ್ಲಿ ಹೆಣ್ಣಿನ ಜನನದ ಸುದ್ದಿಯೇ ಎಷ್ಟು ಮಾರಣಾಂತಿಕವಾದುದಾಗಿತ್ತು ಎಂಬ ಸತ್ಯ ಗೋಚರವಾಗುತ್ತದೆ.

> **ಹೆಣ್ಣು ಹುಟ್ಟಿದ ಮನಿ ಹೆಗ್ಗಣ್ಣತ್ತಿದ್ಹಾಂಗ**
> **ಗಂಡಸಮಗ ಗಜಭೀಮ ಹುಟ್ಟಿದರ**
> **ಚಿಲಕಿ ಚಿತ್ತಾರ ನಗತಾವ॥**

ಆದರೆ ಜಾನಪದರಲ್ಲಿ ಹೆಣ್ಣಿನ ಬಗೆಗೆ ಒಲವಿರದಿದ್ದರೂ ತಾತ್ಸಾರವಿಲ್ಲ. "ಹೆಣ್ಣಿಲ್ಲದ ಮನೆ ಹಣ್ಣಿಲ್ಲದ ಮರ"– ಒಂದೇ ಎಂಬ ಭಾವನೆಯೂ ಅವರಲ್ಲಿದೆ. ಏಕೆಂದರೆ, ಹೆಣ್ಣಿನ ಜೀವನ ಮತ್ತು ತಾಯ್ತನ ಪರಿಪೂರ್ಣವಾಗಬೇಕಾದರೆ ಗಂಡು-ಹೆಣ್ಣು ಎರಡೂ ಬೇಕು. ಹೆಣ್ಣಿನಿಂದ ಕನ್ಯಾದಾನದ ಪುಣ್ಯವೂ ಬೇಕು. ಗಂಡಿನಿಂದ ಸದ್ಗತಿಯೂ ಬೇಕು. ಹೆಣ್ಣಿಲ್ಲದಿದ್ದರೆ "ನಿನಗೇನು ಹೆಣ್ಣಿದೆಯಾ? ಹೆಣ್ಣಿದ್ದರೆ ಗೊತ್ತಾಗ್ತಿತ್ತು ಅದರ ಕಷ್ಟ. ಹೆಣ್ಣಿಲ್ಲದ ಬಂಜೆ ನೀನು" ಎನ್ನುವ ಚುಚ್ಚು ಮಾತುಗಳೂ ಕೇಳಿ ಬರುತ್ತಿದ್ದವು.

ಆದ್ದರಿಂದಲೇ ಆಕೆ :

ಹತ್ತು ಗಂಡ್ಹಡೆದರು ಮತ್ತೆ ಬಂಜೆಂಬೋರು
ದಟ್ಟೀಯ ಉಡುವ ಧರಣೀಯ ಹಡೆದರೆ
ಹೆತ್ತ ತಾಯೆಂದು ಕರೆದಾರು ॥

ಗಂಡು ಮಕ್ಕಳ ಒಂಬತ್ತು ಕೊಡುಸ್ವಾಮಿ
ಬಂಡೀಯ ಮುಂದೆ ಕಳಸಕ್ಕೆ ಒಪ್ಪುವಂಥ
ಒಬ್ಬ ಹೆಣುಮಗಳ ಕೊಡು ದೇವ ॥

ನಾಕು ಮಕ್ಕಳ ಕೊಟ್ಟು ಸಾಕು ಮಾಡೋ ಶಿವನೆ
ನಾಕರ ಮ್ಯಾಲೆ ಆರುತಿಯ ಹಿಡಿಲಾಕ
ನಾರೀಯ ಕೊಟ್ಟು ಕಡೆ ಮಾಡೊ ॥

ಎಂದು ಬೇಡುತ್ತಾಳೆ.

ಕಷ್ಟ-ಕೋಟಲೆಗಳನ್ನು, ಚುಚ್ಚು ನುಡಿಗಳನ್ನು ನೋಡಿ, ಕೇಳಿ, ಈ ಹೆಣ್ಣು ಜನ್ಮವೇ ಬೇಡ ಎನ್ನುವ ಸ್ಥಿತಿ ತಲುಪುತ್ತಾಳೆ ಹೆಣ್ಣು. ಆದ್ದರಿಂದಲೇ,

ಹೆಣ್ಣಾಗಿ ಹುಟ್ಟೋಕಿಂತ ಮಣ್ಣಾಗಿ ಹುಟ್ಟಿದರೆ
ಮಣ್ಣೀನ ಮೇಲೊಂದು ಮರವಾಗಿ ಬೆಳೆದರೆ
ಪುಣ್ಯವಂತರಿಗೆ ನೆರಳಾದೋ ॥

ಹೆಣ್ಣು ಜನುಮಾಕಿಂತ ಬೀದಿನಾಯಿಯ ಜನ್ಮ
ಕಡುಲೇಸು ಎಲೆ ಜೀವ । ಹೆಣ್ಣಾಗಿ
ಬಾಳ ಹೊರಬೇಡ

– ಎಂಬಂತಹ ಆಕ್ರಂದನ ಕೇಳಿ ಬರುತ್ತದೆ. ಏಕೆಂದರೆ, ಹೆಣ್ಣು ಯಾವಾಗಲೂ ಪರಾವಲಂಬಿ. ಆಕೆ ಎಂದೂ ಸ್ವತಂತ್ರಳಲ್ಲ. "ಪಿತಾ ರಕ್ಷತಿ ಕೌಮಾರೇ, ಭರ್ತಾ ರಕ್ಷತಿ ಯೌವನೆ, ರಕ್ಷಂತಿ ಸ್ಥಾವಿರೇ ಪುತ್ರಾ, ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂದಿದೆ 'ಮನುಸ್ಮೃತಿ'ಯಲ್ಲಿ. ಇದೇ ತರಹದ ಮಾತುಗಳನ್ನು ಹೊನ್ನಮ್ಮಳು ತನ್ನ 'ಹದಿಬದೆಯ ಧರ್ಮ'ದಲ್ಲಿ ಹೇಳಿದ್ದಾಳೆ.

ತಡೆಯದೆಳಮೆಯೊಳು ತಂದೆತಾಯಿಗಳಿಗೆ
ನಡುವರೆಯದೊಳು ನಲ್ಲನಿಗೆ
ಕಡು ಮುದುಪಾದ ಕಾಲದೊಳು ತನ್ನಣುಗರಿ
ಗಡಕ ಮೆನಿಪುದಬಲೆಯರು

ಹೀಗೆ ಹೆಣ್ಣು ಇನ್ನೊಬ್ಬರ ನೆರವಿಲ್ಲದೆ ಬದುಕಲಾರಳು. ಆಕೆ ಬೆಳೆದು ದೊಡ್ಡವಳಾಗುವವರೆಗೂ ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಬೇಕು, ಇನ್ನೊಬ್ಬರ ಮನೆಗೆ ಕೈ

ತುಂಬ ಕೊಟ್ಟು, ಮೈ ತುಂಬ ಚಿನ್ನ ಹಾಕಿ, ಅದ್ಧೂರಿಯಾಗಿ ಮದುವೆ ಮಾಡಿಕೊಡಬೇಕು, ಹಬ್ಬ-ಹರಿದಿನಗಳಿಗೆ ಕರೆದು ಉಡುಗೊರೆ ಕೊಟ್ಟು ಕಳುಹಿಸಬೇಕು, ಗರ್ಭಿಣಿಯಾದರೆ ಹೆರಿಗೆಗೆ ಕರೆತರಬೇಕು. ನಂತರ ಅವಳಿಗೆ, ಮಗುವಿಗೆ ಮತ್ತೆ ಬೆಳ್ಳಿ, ಬಂಗಾರ ಕೊಟ್ಟು ಕಳುಹಿಸಬೇಕು, ವಿಧವೆಯಾದರೆ ಆಕೆಯನ್ನು ತಮ್ಮ ಮನೆಗೇ ಕರೆತರಬೇಕು. ಹೀಗೆ 'ಬೇಕು'ಗಳ ಪಟ್ಟಿ ಹೆಣ್ಣಿನ ಪಾಲಿಗೆ ಬೆಳೆಯುತ್ತಲೇ ಹೋಗುತ್ತದೆ.

ಇಷ್ಟೆಲ್ಲಾ ಕೊಟ್ಟು, ಬಿಟ್ಟು ಮಗಳನ್ನು ಗಂಡನ ಮನೆಗೆ ಕಳುಹಿಸಿದರೂ ಎಷ್ಟೋ ಹೆಣ್ಣುಮಕ್ಕಳು ಗಂಡನ ಮನೆಯಲ್ಲಿ ನೆಮ್ಮದಿಯಾಗಿ, ಸಂತೋಷವಾಗಿ ಇರುವುದಿಲ್ಲ. ಏಕೆಂದರೆ ಧನಪಿಶಾಚಿಗಳಾದ ಗಂಡ, ಅತ್ತೆ-ನಾದಿನಿಯರ ಕಾಟ. ಇದನ್ನು ನೋಡಿ ಹೆತ್ತವರಿಗೆ ಚಿಂತೆ, ತನ್ನ ಮಗಳ ಬಾಳು ಹೀಗಾಯಿತಲ್ಲಾ ಎಂದು. ಆದಲೇ ತಾಯಿ 'ಹೆಣ್ಣು ಜನುಮ'ವೇ ಬೇಡವೆಂದು ಆಕ್ರಂದಿಸುವುದು. ಆದರೆ ಗಂಡಿಗೆ ಇದ್ಯಾವುದರ ಬಿಸಿ ತಾಕುವುದೇ ಇಲ್ಲ.

'ಭರತೇಶ ವೈಭವ'ದಲ್ಲಿ ರತ್ನಾಕರವರ್ಣಿ, ಭರತ ಚಕ್ರೇಶನು ತನ್ನ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಅವರ ಗಂಡಂದಿರ ಜೊತೆ ಕಳುಹಿಸಿಕೊಡುವ ಸಂದರ್ಭದಲ್ಲಿ ರಾಣಿಯರು ಕಣ್ಣೀರು ಸುರಿಸುವುದನ್ನು ಕಂಡು;

> **ಆ ಕುವರಿಯರೊತ್ತಿನೊಳಗೆ ಕಂಬನಿದಾಳ್ದ**
> **ವ್ಯಾಕುಲ ಸತಿಯರ ನೋಡಿ**
> **ಏಕೆ ಪೆಣ್ಣಾಡೆದಿರ್ ಗಂಡುವಡೆಯದೆಂದು**
> **ಭೂ ಕಾಂತ ಮರುಕದೊಳ್ ನುಡಿದ ॥**

ಹಾಗೆಯೇ ಪದ್ಮನಾಭ ಕವಿ 'ಪದ್ಮಾವತೀ ಚರಿತೆಯಲ್ಲಿ:

> **ಹೆಣ್ಣು ಮಕ್ಕಳ ಹೆತ್ತು ಹೆರರ ಬಾಳಿಗೆ ಕೊಟ್ಟು**
> **ಕಣ್ಣೀರಿಕ್ಕುತ ಮನದಿ**
> **ಉಣ್ಣದೂ ಉಡರೋ ಎನುತ ಚಿಂತಿಸುತಿಹ**
> **ಹೆಣ್ಣಿಂದ ಫಲವುಂಟೆ ನಮಗೆ** – ಎಂದಿದ್ದಾನೆ.

ಇದೇ ರೀತಿ, ಸೀತೆ ಲಕ್ಷ್ಮಣನೊಡನೆ ಅರಣ್ಯಕ್ಕೆ ಬಂದಾಗ ಸತ್ಯ ಸಂಗತಿ ತಿಳಿದು ಹಲುಬುತ್ತಾಳೆ. ಕಡೆಗೆ :

> **ಕರುಣಾಳು ರಾಘವನಲ್ಲಿ ತಪ್ಪಿಲ್ಲ**
> **ಕುಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ**
> **ಮೊದಲಂ ಮೊರೆವುದೆನ್ನೊಳಪರಾಧ ಮುಂಟು**

ಎಂದು ಶೋಕಿಸುತ್ತಾಳೆ. ಇಂತಹ ಆಳವಾಗಿ ಬೇರೂರಿರುವ ಭಾವನೆಗಳಿಂದ ಉಂಟಾದ ಮನಸ್ಥಿತಿಯು ಹೆಣ್ಣು ಶಿಶು ಹುಟ್ಟುವುದಕ್ಕಿಂತ ಮುಂಚೆಯೇ ಅದನ್ನು

ಹೊಸಕಿ ಹಾಕಿಬಿಡುವ ಕ್ರೌರ್ಯದಲ್ಲಿ ಪರ್ಯವಸಾನಗೊಳ್ಳುತ್ತಿದೆ. ಇಂತಹ ಮನಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಿಕೊಳ್ಳುವುದು ನಾಗರಿಕರೆನಿಸಿಕೊಂಡವರೆಲ್ಲರ ಕರ್ತವ್ಯವಾಗಿದೆ.

ಆದರೆ ಹೆಣ್ಣಿನ ಕುರಿತಾದಂತೆ ಇರುವ ನೇತ್ಯಾತ್ಮಕ ಭಾವನೆಗಳಷ್ಟೇ ಆಕೆಯನ್ನು ಕುರಿತಾದಂತಹ ಸಕಾರಾತ್ಮಕ ಭಾವನೆಗಳನ್ನೂ ಹಿಂದಿನಿಂದಲೂ ಗುರುತಿಸಬಹುದು. ಹಿಂದಿನವರು ಹೆಣ್ಣನ್ನು ಜಗದ್ಧಾತ್ರಿ, ಶಕ್ತಿಸ್ವರೂಪಿನಿ, ಜಗಜ್ಜನನಿಯಾಗಿ ಕಂಡಿದ್ದಾರೆ. 'ಮಾತೃ ದೇವೋ ಭವ' ಎಂದಿದ್ದಾರೆ. 'ಹೆಣ್ಣು ಸಂಸಾರದ ಕಣ್ಣು', 'ಮನೆಯೇ ಮೊದಲ ಪಾಠಶಾಲೆ, ಜನನಿ ತಾನೇ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರು ಧನ್ಯರು' ಎಂಬ ಭಾವನೆಯಿದೆ.

ವಚನಕಾರರು "ಹೆಣ್ಣು ಮಾಯೆಯಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂದು ಸಾರಿದರು. ಒಂದು ಗಂಡು ಮಗುವಿಗೆ ಜನ್ಮ ನೀಡುವವಳೂ ಒಬ್ಬ ಹೆಣ್ಣೇ ತಾನೇ? ಆದ್ದರಿಂದಲೇ "ಪುರುಷನಂ ಪೆತ್ತವಳು ಸಂಪೂಜ್ಯಳಲ್ತೆ" ಎಂಬ ಆದರಕ್ಕೆ ಪಾತ್ರಳಾಗಿದ್ದಾಳೆ. ಮನು ಕೂಡ ಎಲ್ಲಿ ಸ್ತ್ರೀಯರು ಗೌರವಿಸಲ್ಪಡುವರೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ ಎಂದಿದ್ದಾನೆ. ಪತ್ನಿಯು ...ಗೆ ಎಂತಹ ಅಮೂಲ್ಯ ಪದಾರ್ಥ, ಪತಿಗೆ ಎಂಥ ಹತ್ತಿರದ ಹಿತೈಷಿ ಎಂಬುದನ್ನು ... "ನಾಸ್ತಿ ಭಾರ್ಯಾಸಮಂ ಮಿತ್ರಂ ನರಸ್ಯಾರ್ತಸ್ಯ ಭೇಷಜಮ್"–ದೈನ್ಯ ...ದಿವ ಮನುಷ್ಯನಿಗೆ ಹೆಂಡತಿಗೆ ಸಮನಾದ ಸ್ನೇಹಿತನೂ, ಉಪಾಯವೂ ...ಯಾವುದೂ ಇಲ್ಲ ಎಂದಿದ್ದಾನೆ. ಹೆಣ್ಣಿನಿಂದ ಏನೇನಾಗುವುದೆಂಬುದನ್ನು ...ನ್ನಮ್ಮನು 'ಹದಿಬದೆಯ ಧರ್ಮ'ದಲ್ಲಿ ಹೀಗೆ ತಿಳಿಸಿದ್ದಾಳೆ:

ಪೆಣ್ಣುಪೆತ್ತವರ ಬಳಗ ಬಳೆವುದು ಬೇಗ
ಪೆಣ್ಣು ಪೆತ್ತವರು ಪೆರ್ಚುವರು
ಪೆಣ್ಣು ಪೆತ್ತುದರಿಂದೆ ಪೆಸರೆನಿಸಿತುಮಿಗೆ
ಬಣ್ಣವೇರಿತು ಪಾಲ್ಗಡಲು ॥

ಪೆಣ್ಣಿಂದ ಪೆರ್ಮೆಗೊಂಡನು ಹಿಮವಂತನು
ಪೆಣ್ಣಿಂದ ಭೃಗ ಪೆರ್ಚಿದನು
ಪೆಣ್ಣಿಂದ ಜನಕರಾಯನು ಜಸವಡೆದನು
ಪೆಣ್ಣ ನಿಂದಿಸಲೇಕೆ ಪೆರರು॥

ಕುಲಪುತ್ರನೋದಿ ತಿಳಿದು ನಡೆದಲ್ಲದೆ
ಕುಲವನುದ್ಧರಿಸಲರಿಯನು
ಕುಲಪುತ್ರಿಯೊಳ್ಗುವರನಿಗಿತ್ತ ಮಾತ್ರಕೆ
ಕುಲಕೋಟಿಯನುದ್ಧರಿಪಳು ॥

ಅರಿತು ನಿಟ್ಟಿಸೆ ಗಂಡು ಮಕ್ಕಳಿಂದತಿಶಯ
ದೆರಕದೊಳೆಸೆವ ಪೆಣ್ಗಳನು ಏಕೆ
ನಿಂದಿಸುವಿರಿ ?

ಹೆಣ್ಣಾಗಲಿ, ಗಂಡಾಗಲಿ ಯಾರು ಒಳ್ಳೆಯ ಗುಣದಿಂದ ಕೂಡಿರುತ್ತಾರೋ ಅವರ ನಡತೆಯಿಂದ ತಂದೆ-ತಾಯಿಗಳಿಗೆ ಕೀರ್ತಿಯುಂಟಾಗುತ್ತದೆ.

ಕುವರನಾದೊಡೆ ಬಂದ ಗುಣವೇನದರಿಂದ?
ಕುವರಿಯಾದೊಡೆ ಕುಂದೇನು?
ಇವರಿರ್ವರೊಳೇಳ್ಗೆವಡೆದವರಿಂದ
ಸವನಿಮುದಿಹಪರ ಸೌಖ್ಯ

ಹೀಗೆ ಹೆಣ್ಣು ಹೀನಳಲ್ಲಾ ಮಾನ್ಯಳು ಎಂದು ಕವಿಗಳು, ದಾರ್ಶನಿಕರು ಎಲ್ಲಾ ಕಾಲದಲ್ಲೂ ಹೇಳುತ್ತಾ ಬಂದಿದ್ದಾರೆ. "ಹೆಣ್ಣು ಹೆಣಕ್ಕೆ ಅಳ್ತು, ಗಂಡು ಗಂಟಿಗೆ ಅಳ್ತು" ಎಂಬ ಗಾದೆಯಂತೆ ಗಂಡು ಮಕ್ಕಳಿಗೆ ಹೆಣ್ಣು ಮಕ್ಕಳ ಹಾಗೆ ಬಾಂಧವ್ಯದ ಮಮಕಾರವಿರುವುದಿಲ್ಲ. ಇಂದಿನ ಸಮಾಜದಲ್ಲಿ ಆಸ್ತಿಗಾಗಿ ತಂದೆತಾಯಿಗಳನ್ನೇ ಕೊಲ್ಲುವ, ಇಲ್ಲವೇ ವೃದ್ಧಾಶ್ರಮಗಳಿಗೆ ಕಳುಹಿಸಿ ತಾವು ಮೋಜಿನ ಜೀವನ ನಡೆಸುವ ಕುಲದೀಪಕರಿದ್ದಾರೆ.

ಆದರೆ ಹೆಣ್ಣು, ಗಂಡಿನಷ್ಟು ಕ್ರೂರಿಯಲ್ಲ. ತನ್ನ ಕಷ್ಟಗಳನ್ನೆಲ್ಲಾ ಬದಿಗೊತ್ತಿ ಮನೆಯವರಿಗಾಗಿ ಗಾಣದೆತ್ತಿನ ಹಾಗೆ ದುಡಿಯುತ್ತಾಳೆ. ತನ್ನ ನೋವನ್ನು ಮರೆತು ಇತರರ ಸಂತೋಷಕ್ಕಾಗಿ ಹಾತೊರೆಯುತ್ತಾಳೆ. ಹುಟ್ಟಿದ ಮನೆಗೆ, ಕೊಟ್ಟ ಮನೆಗೆ ಕೀರ್ತಿ ತರುತ್ತಾಳೆ.

ಹಾಲುಂಡ ತವರಿಗೆ ಏನೆಂದು ಹಾಡಲೀ
ಹೊಳೆದಂಡೇಲಿರುವ ಗರಿಕೇಯ
ಕುಡಿಹಂಗ ಹಬ್ಬಲೇ ಅವರ ರಸಬಳ್ಳಿ

ಎಂದು ಹಾಡಿ ಹರಸುತ್ತಾಳೆ.

ಇವತ್ತಿನ ಯುಗದಲ್ಲಂತೂ "ಆಡು ಮುಟ್ಟದ ಸೊಪ್ಪಿಲ್ಲ"ವೆಂಬಂತೆ ಹೆಣ್ಣು ದುಡಿಯದ, ಹೆಸರು ಗಳಿಸದ ಕ್ಷೇತ್ರವೇ ಇಲ್ಲವೆನ್ನಬಹುದು. ಆದರೂ ಹುಟ್ಟಿದ ಮಗು ಹೆಣ್ಣೆಂದು ತಿಳಿದಾಗ ಭ್ರೂಣದಲ್ಲೇ ಹತ್ಯೆ ಮಾಡುವ ಪೈಶಾಚಿಕ ಕೃತ್ಯ ಒಂದೆಡೆಯಾದರೆ, ಹುಟ್ಟಿರುವ ಹೆಣ್ಣುಮಕ್ಕಳು 'ಹೊರೆ' ಎಂದು ಅಸಡ್ಡೆ ತೋರುವ ಪ್ರವೃತ್ತಿ ಇನ್ನೊಂದೆಡೆ ಮುಂದುವರಿಯುತ್ತಿದೆ. ಇಂತಹ ಪೂರ್ವಾಗ್ರಹ ಪೀಡಿತ ಮನಸ್ಸುಗಳು ಪರಿಶುದ್ಧವಾಗಬೇಕು. ಹೆಣ್ಣಿನ ಕುರಿತಾದ ಕೀಳರಿಮೆ, ತಾರತಮ್ಯ, ತಾತ್ಸಾರ, ಅನಗತ್ಯ ಭೀತಿಗಳು ಜನರ ಮನೋಭೂಮಿಕೆಯಿಂದ ಅಳಿಸಿಹೋಗಬೇಕು. ಆಗ ಮಾತ್ರ ಮನುಷ್ಯತ್ವ ತನ್ನ ನಿಜವಾದ ಅರ್ಥವನ್ನು ಕಂಡುಕೊಳ್ಳುವುದು.

ಗ್ರಂಥ ಋಣ

೧. ಚಿನ್ನದ ಬೆಳಸು - ಕನ್ನಡ ಸಾಹಿತ್ಯ ಪರಿಷತ್ತು

೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ - ಡಾ.ನಂ. ತಪಸ್ವೀಕುಮಾರ್

೩. ನಮ್ಮ ಸುತ್ತಿನ ಗಾದೆಗಳು - ಸುಧಾಕರ

೪. ವಿಜಯ ಕರ್ನಾಟಕ ದಿನಪತ್ರಿಕೆ

೫. ಹದಿಬದೆಯ ಧರ್ಮ

❑

೬. ಕೆ.ಸಿ. ಭಟ್ಟಾಚಾರ್ಯರ ತತ್ವಜ್ಞಾನದಲ್ಲಿ ಸೈದ್ಧಾಂತಿಕ ಪ್ರಜ್ಞೆ

– ಡಾ. ಎಂ.ಪಿ. ರಮೇಶ್

ವಿಜ್ಞಾನ ಮತ್ತು ತತ್ವ ಜ್ಞಾನ ಎರಡೂ ಸತ್ಯಾಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಅದರಲ್ಲಿಯೂ ತತ್ವಜ್ಞಾನವು ವಿಜ್ಞಾನಕ್ಕಿಂತ ಒಂದು ಹೆಜ್ಜೆ ಮುಂದಿಡುತ್ತದೆ. ಸೈದ್ಧಾಂತಿಕ ಪ್ರಜ್ಞೆಯ ಬಗ್ಗೆ ವಿಜ್ಞಾನ ಮತ್ತು ತತ್ವಜ್ಞಾನಗಳು ತಮ್ಮದೇ ಆದ ನಿಲುವನ್ನು ಹೊಂದಿರುತ್ತವೆ. ಸೈದ್ಧಾಂತಿಕ ಪ್ರಜ್ಞೆಯು ಒಂದು ಸಿದ್ಧಾಂತ. ಏಕೆಂದರೆ ಅದು ನಂಬಿಕೆ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಇಲ್ಲಿ ಕೆ.ಸಿ. ಭಟ್ಟಾಚಾರ್ಯರವರು ಸೈದ್ಧಾಂತಿಕ ಪ್ರಜ್ಞೆಯನ್ನು 'ಅತಿ ಕೆಳಗಿನ ದರ್ಜೆಯಲ್ಲಿ ಸೈದ್ಧಾಂತಿಕ ಪ್ರಜ್ಞೆಯೆಂದರೆ ವಾಕ್ ತಿಳುವಳಿಕೆ'. ಯಾವುದೇ ವಿಷಯವನ್ನು ಕುರಿತು ವಿಚಾರ ಮಾಡಿದಾಗ ಅದರಲ್ಲಿ ನಂಬಿಕೆಯು ಉತ್ಪತ್ತಿಯಾಗುತ್ತದೆ. ಮೊದಲ ಬಾರಿ ವಿಚಾರಗಳು ನಂಬಿಕೆಗೆ ಅರ್ಹವಾಗಿದ್ದಾಗ ಅವುಗಳ ಸತ್ಯಾಂಶಗಳನ್ನು ಯಥಾರ್ಥವಾಗಿ ತಿಳಿಯಲು ನಿವಾರಣೋಪಾಯಗಳು ಬೇಕಾಗುತ್ತವೆ. ಈ ಒಂದು ಅಂಶವನ್ನು ಕೆ.ಸಿ. ಭಟ್ಟಾಚಾರ್ಯರವರು ಒಂದು ಉದಾ: ಆಯತಾಕಾರದ ವೃತ್ತ (Square circle) ಈ ಉದಾಹರಣೆಯಲ್ಲಿ ಬರುವ ಅರ್ಥವು ನಂಬಿಕೆಗೆ ದೂರವಾದದ್ದು ಮತ್ತು ಅಪನಂಬಿಕೆಗೂ ದೂರವಾದುದು. ಅದಕ್ಕೆ ಯಾವುದೇ ರೀತಿಯ ಸೈದ್ಧಾಂತಿಕ ಅರ್ಥವನ್ನು ಕೊಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಈ ರೀತಿಯಾಗಿರುವುದು ಸೈದ್ಧಾಂತಿಕ ಪ್ರಜ್ಞೆಯ ಭಾಗವಾಗುವುದಿಲ್ಲ. ಅದು ಸೈದ್ಧಾಂತಿಕ ಪ್ರಜ್ಞೆಯ ಒಂದು ರೂಪಾತ್ಮಕ ಭಾಗ. ಅಂದರೆ ಅದು ಕೇವಲ ಮಾತನಾಡುವುದಕ್ಕೆ ಸಾಧ್ಯ. ಅಲ್ಲದೆ ಕೆ.ಸಿ. ಭಟ್ಟಾಚಾರ್ಯರವರ ಅಭಿಪ್ರಾಯದಲ್ಲಿ ಯಾವುದೇ ವಿಷಯವು ಮಿಥ್ಯವಾಗಿದ್ದರೂ ಸಹ ಅದು ಸೈದ್ಧಾಂತಿಕ ಪ್ರಜ್ಞೆಯ ಭಾಗವಾಗಿರುತ್ತದೆ. ಅಲ್ಲದೇ ಅಂತಹ ವಾಕ್ಯಗಳನ್ನು ಉಚ್ಚರಿಸಿದಾಗ ಅದರಲ್ಲಿ ನಂಬಿಕೆಗೆ ಯೋಗ್ಯವಾದ ಅಂಶವು ಇರುತ್ತದೆ ಮತ್ತು ಕೆಲವೊಂದು ಸಂದರ್ಭದಲ್ಲಿ

ವ್ಯಕ್ತಿ ನನ್ನನ್ನು ನಂಬು 'Belive me' ಎನ್ನುವ ಶಬ್ದದಲ್ಲಿಯೂ ಅರ್ಥಗರ್ಭಿತವಾದ ಸೈದ್ಧಾಂತಿಕ ಪ್ರಜ್ಞೆಯ ಭಾಗವಿರುವುದನ್ನು ನಂಬುತ್ತೇವೆ. ಈ ರೀತಿಯಲ್ಲಿರುವ ಪರಿಪೂರ್ಣವಾದ ಜ್ಞಾನವಲ್ಲ. ಏಕೆಂದರೆ ಅದರಲ್ಲಿ ನಂಬಿಕೆಗೆ ಯೋಗ್ಯವಾಗಿರುವುದನ್ನು ಒಳಗೊಂಡಿರುತ್ತದೆ. ಜ್ಞಾನವೆಂದರೆ ಯಥಾರ್ಥವಾಗಿರುವ ಅಥವಾ ಸಾಧ್ಯವಿರುವ ಸತ್ಯ ಅಥವಾ ಘಟನೆಗಳಾಗಿರುತ್ತವೆ. ಆದರೆ ಸೈದ್ಧಾಂತಿಕ ಪ್ರಜ್ಞೆಯ ಅರಿವು ಸಂಭವನೀಯ ಪರಿಸ್ಥಿತಿಯಲ್ಲಿರುತ್ತದೆ. ಆದ್ದರಿಂದ ಕೃಷ್ಣಚಂದ್ರರು ಹೇಳುವಂತೆ ಸೈದ್ಧಾಂತಿಕ ಪ್ರಜ್ಞೆಯ ಜ್ಞಾನವನ್ನು ಒಳಗೊಂಡಿರುವುದಿಲ್ಲ. ಬದಲಾಗಿ ಗ್ರಹಿಕೆಯನ್ನು ಒಳಗೊಂಡಿರುತ್ತದೆ.

ಸೈದ್ಧಾಂತಿಕ ಪ್ರಜ್ಞೆಯ ನಾಲ್ಕು ದೃಷ್ಟಿಕೋನಗಳು

ಪ್ರತಿಯೊಂದು ಸೈದ್ಧಾಂತಿಕ ಪ್ರಜ್ಞೆಯು ತಿಳಿಯಲ್ಪಡುವ ಭಾಷೆಯನ್ನು ಮತ್ತು ವಿಚಾರಿಸಲ್ಪಡುವ ವಿಷಯಗಳನ್ನು ಒಳಗೊಂಡಿರುತ್ತದೆ. ಮೊದಲನೆಯ ಭಾಗವನ್ನು ಶಬ್ದಚಿಂತನ ವಿಚಾರ ಅಂದರೆ ಉಳಿದ ಮೂರು ಭಾಗಗಳನ್ನು ಸಾಂಕೇತಿಕ ಇಂದ್ರಿಯಾನುಭವ ಎನ್ನುವ ಅರ್ಥದಲ್ಲಿ ತಿಳಿಯಬಹುದು. ಶಬ್ದಾಂತಿಕ ಚಿಂತನೆಯು ಪ್ರಮುಖವಾಗಿ ಒಂದು ಶುದ್ಧ ಚಿಂತನೆಯಲ್ಲ. ಆದರೂ ಅದು ನಾಲ್ಕು ಭಾಗಗಳನ್ನು ಒಳಗೊಂಡಿರುತ್ತದೆ.

(೧) ಅನುಭವ ಜನ್ಯ

(೨) ವಸ್ತುನಿಷ್ಠ

(೩) ವ್ಯಕ್ತಿಗತ ಅಥವಾ ಆತ್ಮವರ್ತಿ (Spiritual)

(೪) ಅನುಭವಾತೀತ

೧. ಇಂದ್ರಿಯಾನುಭವ : (Empirical) ಪ್ರಜ್ಞೆಯು ಯಾವಾಗಲೂ ಒಂದು ವಸ್ತುವನ್ನು ನಿರ್ದೇಶಿಸುತ್ತದೆ. ಈ ಒಂದು ನಿರ್ದೇಶನವು ಆಕಸ್ಮಿಕವಲ್ಲ. ಅದು ಸಂದರ್ಭಕ್ಕೆ ಸರಿಯಾದ ಅರ್ಥವನ್ನು ಒಳಗೊಂಡಿರುವಂತಹುದ್ದಾಗಿರುತ್ತದೆ. ಅಂದರೆ ಅನುಭವ ಪ್ರಜ್ಞೆಯು ಒಂದು ವಸ್ತುವಿನ ಪ್ರಜ್ಞೆಯ ಅರಿವಾಗಿರಬಹುದು. ಮುಂದೆ ವಿಚಾರದ ಗಣನೆಗೆ ತೆಗೆದುಕೊಳ್ಳುವ ವಸ್ತುವಾಗಿರಬಹುದು. ಇಲ್ಲಿ ವಸ್ತು ಮತ್ತು ಘಟನೆಗಳನ್ನು ಒಂದೇ ಅರ್ಥದಲ್ಲಿ ಬಳಸಲಾಗಿದೆ.

೨. ವಸ್ತುನಿಷ್ಠ : (Objective) ಈ ಪ್ರಜ್ಞೆಯೂ ಸಹ ವಸ್ತುನಿಷ್ಠವಾಗಿರುತ್ತದೆ. ಈ ವಸ್ತುನಿಷ್ಠ ವರ್ಗಕ್ಕೂ ಮತ್ತು ಇಂದ್ರಿಯಾನುಭವ ವರ್ಗಕ್ಕೂ ವ್ಯತ್ಯಾಸವುಂಟಾಗುತ್ತದೆ. ವಸ್ತುನಿಷ್ಠ ಎಂದರೆ ಅದು ಇಂದ್ರಿಯಾನುಭವ ಆಧಾರದಿಂದ ಉಂಟಾಗುವಂತಹುದು. ಆದರೆ ಅನುಭವಕ್ಕೆ ಅದರ ಅವಶ್ಯಕತೆಯಿಲ್ಲ. ಬುದ್ಧಿಜನ್ಯವಾದ ವಿಚಾರದಲ್ಲಿ ವಿಷಯಕ್ಕೆ

ಯಾವುದೇ ರೀತಿಯಲ್ಲಿ ಅವಕಾಶವಿರುವುದಿಲ್ಲ. ಆದರೆ ವಸ್ತುನಿಷ್ಠ ಪ್ರಜ್ಞೆಯಲ್ಲಿ ವಿಷಯ ಮತ್ತು ವಸ್ತುವಿಗೆ ಸಂಬಂಧವಿರುತ್ತದೆ. ಆದ್ದರಿಂದ ಅನುಭವಜನ್ಯ ತಿಳುವಳಿಕೆಯಲ್ಲಿ ಒಂದು ವಸ್ತು ಸ್ಥಿತಿಯನ್ನು ಘಟನೆಯಾಗಿ ಪರಿವರ್ತಿಸಲಾಗುತ್ತದೆ. ಅದೇ ರೀತಿಯಾಗಿ ವಸ್ತುನಿಷ್ಠ ಪ್ರಜ್ಞೆಯಲ್ಲಿ ಘಟನೆಯನ್ನು ವಸ್ತುವೆಂದು ಪರಿಗಣಿಸಲಾಗದೆ ಅದೊಂದು ಆತ್ಮವರ್ತಿ (Self subsistence) ಎಂದು ತಿಳಿಯಲಾಗುತ್ತದೆ.

೩. **ವ್ಯಕ್ತಿನಿಷ್ಠ ಪ್ರಜ್ಞೆ:** (Self subsistence) ಈ ರೀತಿಯಾಗಿರುವ ಪ್ರಜ್ಞೆಯು ವಸ್ತುವಿಗೆ ಸೀಮಿತವಾಗಿರುವುದಿಲ್ಲ. ಅದು ಪೂರ್ಣವಾಗಿ ವ್ಯಕ್ತಿನಿಷ್ಠವಾಗಿರುತ್ತದೆ. ಅಂದರೆ ಒಂದು ವಸ್ತುವಿನ ಲಕ್ಷಣಗಳನ್ನು ವಸ್ತುವಿನಲ್ಲಿದ್ದರೂ ಸಹ ಅವುಗಳನ್ನು ಪುನರವಲೋಕನದಿಂದ ವ್ಯಕ್ತಿಗತವಾಗಿ ತಿಳಿಯುವುದಾಗಿದೆ. ಅದೇ ಒಂದು ಉಲ್ಲಾಸಕರ ಪ್ರಜ್ಞೆ, ಮೊದಲನೆಯ ಎರಡು ವರ್ಗದಲ್ಲಿ ವಿಷಯುವು ವಿಚಾರಾತ್ಮಕವಾಗಿರುತ್ತದೆ. ಅದರರ್ಥ ವಸ್ತು ವಿಷಯವೂ ಅಲ್ಲ ವ್ಯಕ್ತಿನಿಷ್ಠವೂ ಅಲ್ಲ ಬದಲಾಗಿ ಅದು ಅಂತರಾತ್ಮದಲ್ಲಿ ಪೂರ್ಣ ವ್ಯಕ್ತಿಗತ ಭಾವನೆಗಳೊಂದಿಗೆ ತಿಳಿಯುವುದಾಗಿದೆ. ಅದೇ ಸತ್ಯ.

೪. **ಅನುಭವಾತೀತ :** (Transeendental) ಈ ಪ್ರಜ್ಞೆಯಲ್ಲಿ ವಸ್ತುನಿಷ್ಠ ಅಥವಾ ವ್ಯಕ್ತಿನಿಷ್ಠಕ್ಕೆ ಸಾಂದರ್ಭಿಕ ಅಂಶಗಳನ್ನು ಅನುಭವಾತೀತ ವಿಷಯವನ್ನು ಒಳಗೊಂಡಿದ್ದು ಆಗಿರುತ್ತದೆ. ಅದರಿಂದ ಅನುಭವಾತೀತ ಪ್ರಜ್ಞೆಯಲ್ಲಿಯ ವಿಷಯಗಳು ಅನುಭವವೇತವೇ, ಅದೇ ಸತ್ಯ.

ಮೇಲೆ ವಿವರಿಸಿದ ನಾಲ್ಕು ಅಂಶಗಳನ್ನು ತಿಳಿಯುವುದಕ್ಕಿಂತ ಮೊದಲು ಅವುಗಳ ಬಗ್ಗೆ ಕೆಲವೊಂದು ಅಂಶಗಳನ್ನು ತಿಳಿಯುವುದು ಅವಶ್ಯವಾಗಿದೆ. "ಕೆ.ಸಿ. ಭಟ್ಟಾಚಾರ್ಯರವರ ಪ್ರಕಾರ ತತ್ವಶಾಸ್ತ್ರವು ಪ್ರಮುಖವಾಗಿ ಇಂದ್ರಿಯ ಚೇತನಕ್ಕೆ ಸಂಬಂಧಿಸಿರದೆ ಉಳಿದ ಮೂರು ಸೈದ್ಧಾಂತಿಕ ಪ್ರಜ್ಞಾಪೂರ್ವಕ ಅಂಶಗಳಿಗೆ ಅನ್ವಯಿಸುತ್ತದೆ. ಇಂದ್ರಿಯ ಪ್ರಜ್ಞೆಯು ವಿಚಾರದೊಂದಿಗೆ ವಾಸ್ತವಿಕ ಅಂಶಗಳ ಅಧ್ಯಯನವನ್ನು ಮಾಡುತ್ತದೆ. ಆದ್ದರಿಂದ ಇದನ್ನು ವಿಜ್ಞಾನ ಎಂದೂ ತಿಳಿಯಬಹುದು. ಆದರೆ ಉಳಿದ ಮೂರು ವಿಷಯಗಳು ಶುದ್ಧಬುದ್ಧಿಗೆ ಮಾತ್ರ ಸೀಮಿತವಾಗಿವೆ. ಅಂದರೆ ವಾಸ್ತವಿಕ ಅಂಶ ವ್ಯಕ್ತಿಗತ ಅಂಶ ಮತ್ತು ಅನುಭವಾತೀತ ಅಂಶ ಇವು ತತ್ವಶಾಸ್ತ್ರದ ಪ್ರಮುಖ ವಿಷಯವಾಗಿದೆ."

ಇಂದ್ರಿಯಾನುಭವ ವಿಚಾರವು ಈಗಾಗಲೇ ತಿಳಿದಿರುವ ಹಾಗೆ ವಾಸ್ತವ ಅಂಶಗಳನ್ನು ತನ್ನ ಅಧ್ಯಯನಕ್ಕೆ ಬಳಸಿಕೊಳ್ಳುತ್ತದೆ. ಆದ್ದರಿಂದ ಇದು ಒಂದು ವಿಜ್ಞಾನವಾಗಿದೆ. ಇಲ್ಲಿ ಕೆಲವೊಂದಿಷ್ಟು ಅಂಶಗಳನ್ನು ಮತ್ತು ವಿಷಯ ವಸ್ತುವನ್ನು

ಇದು ತಿಳಿದುಕೊಳ್ಳುತ್ತದೆ. ಅದರಲ್ಲಿ ಪ್ರಮುಖವಾಗಿ ತೀರ್ಮಾನ ವಾಕ್ಯಗಳು ಕರ್ಮ ಮತ್ತು ಕರ್ತೃಗಳ ಸಂಬಂಧದ ಬಗ್ಗೆ ತಿಳಿವಳಿಕೆಯನ್ನು ನೀಡುತ್ತದೆ. ಉದಾಹರಣೆಗೆ, 'x', 'is' ಇದು ಒಂದು ಸ್ವಾಭಾವಿಕ ಸತ್ಯವನ್ನು ವಿವರಿಸಲು ಮತ್ತು ವಾಕ್ಯಗಳ ನಡುವಿನ ಸಂಬಂಧವನ್ನು ತಿಳಿಸುತ್ತದೆ. ಈ ಸಂಬಂಧವನ್ನು ವಿವರಿಸಲು ಅಸಾಧ್ಯವಾದ ವಾಕ್ಯಗಳು ಸಂಬಂಧವನ್ನು ಸೂಚಿಸಲಾರರು. ಅಂದರೆ 'x', 'is' ಅನ್ನುವುದು ಸಾಂಕೇತಿಕ ರೂಪದಲ್ಲಿ ವಿವರಿಸಲು ಸಹ ಸಾಧ್ಯವಾಗುತ್ತದೆ. ಸತ್ಯ ಸಂಗತಿಗಳ ಬಗ್ಗೆ ನಂಬಿಕೆಗಳು, ಅಂದರೆ ಅರ್ಥವಿರುವಂತೆ ತೀರ್ಮಾನ ವಾಕ್ಯಗಳು ಮತ್ತು ಸಾಂಕೇತಿಕ ರೂಪದಲ್ಲಿರುವ ವಾಕ್ಯಗಳು ಸಹ ಮಹತ್ವದ ಪಾತ್ರವನ್ನು ವಹಿಸುತ್ತವೆ. ನಮಗೆ ತಿಳಿಯಲು ಸಾಧ್ಯವಿರದ ಅಂಶಗಳನ್ನು ಸಹ ಅವು ತಿಳಿಸುತ್ತವೆ. ಆದ್ದರಿಂದ ಅಂತಹ ಸಾಂಕೇತಿಕ ವಾಕ್ಯಗಳು ಸಹ ತೀರ್ಮಾನ ವಾಕ್ಯಗಳೇ ಎಂಬುದು ಕೃಷ್ಣ ಚಂದರ ವಾದ.

ಈಗ 'x', 'is' ಎನ್ನುವುದನ್ನು ಸಾಂಕೇತಿಕ ತೀರ್ಮಾನ ವಾಕ್ಯವೆಂದು ತಿಳಿದುಕೊಂಡರೆ, 'x' ಎನ್ನುವುದು ವ್ಯಕ್ತಿಗತವಿರಬಹುದು ಅಥವಾ ಸತ್ಯಾಂಶವೂ ಸಹ ಇರಬಹುದು. ಕೃಷ್ಣಚಂದ್'ರವರು ಸತ್ಯ ಎನ್ನುವುದನ್ನು ಸಾಂಕೇತಿಕವಾಗಿ ಮಾತನಾಡಲು ಸಾಧ್ಯವಿದೆ ಎಂದು ಅಭಿಪ್ರಾಯಪಡುತ್ತಾರೆ ಮತ್ತು ವ್ಯೆಯಕ್ತಿಕ ವಿಷಯವನ್ನು ತಿಳಿಯುವುದಕ್ಕೆ ಅದರಿಂದ ಸಾಧ್ಯವಿದೆ. ಆದ್ದರಿಂದ ಸಾಂಕೇತಿಕ ವಿಚಾರವಿದ್ದರೆ (ತತ್ವಶಾಸ್ತ್ರೀಯ ತೀರ್ಮಾನ ವಿಷಯಗಳನ್ನು ಸಹ ಸಾಂಕೇತಿಕವಾಗಿ ತಿಳಿಯಬಹುದು) ಮೂರು ಅಂಶಗಳನ್ನು ತಿಳಿಯಲು ಸಾಧ್ಯವಾಗುತ್ತದೆ

೧. ತೀರ್ಮಾನ ವಾಕ್ಯದಲ್ಲಿರುವ 'x', 'is' ಎನ್ನುವುದರ ರೂಪ ಸಾಂಕೇತಿಕವಾಗಿದ್ದರೂ ವಾಸ್ತವಿಕವಾಗಿರುತ್ತದೆ.

೨. 'x', 'is' ಅನ್ನುವುದರಲ್ಲಿ ಇರುತ್ತದೆ ಎಂಬುದು ಸಾಂಕೇತಿಕವಾಗಿರುತ್ತದೆ ಎಂಬುದು ವ್ಯಕ್ತಿಗತವಾಗಿರುತ್ತದೆ.

೩. 'x', 'is' ಎನ್ನುವುದರಲ್ಲಿ x ಎನ್ನುವುದು ಸಾಂಕೇತಿಕವಾಗಿರಬಹುದು. ಅದರಲ್ಲಿ ಮೊದಲನೆಯದರಲ್ಲಿ ವಿಚಾರಾತ್ಮಕ ಅಂಶವಿದ್ದರೆ ಎರಡನೆಯದರಲ್ಲಿ ಆನಂದ ಅಂಶವನ್ನು ಒಳಗೊಂಡಿರುತ್ತದೆ. ಮೂರನೆಯದರಲ್ಲಿ ಅನುಭವಾತೀತ ಅಂಶಗಳನ್ನು ಒಳಗೊಂಡಿದೆ. ಇದನ್ನು ತತ್ವಶಾಸ್ತ್ರದ ಮೂರು ಅಂಶಗಳು ಎಂಬುದು ಅವರ ವಾದ.

೧. ವಸ್ತು ಆಧಾರಿತ ತತ್ವಶಾಸ್ತ್ರ

೨. ವ್ಯಕ್ತಿ ಆಧಾರಿತ ಅಥವಾ ವ್ಯಕ್ತಿಗತವಾದ ಅಂಶಗಳನ್ನು ಒಳಗೊಂಡಿರುವ ತತ್ವಶಾಸ್ತ್ರ

೩. ಪರಮಸತ್ಯ ಅಂಶಗಳನ್ನು ಒಳಗೊಂಡಿರುವ ತತ್ವಶಾಸ್ತ್ರ

ಆದ್ದರಿಂದ ಮೇಲೆ ತಿಳಿಸಿದ ಮೂರು ತಾತ್ವಿಕ ಭಾಗಗಳು ಒಂದಕ್ಕೊಂದು ಸಂಪೂರ್ಣವಾಗಿ ಸಂಬಂಧವನ್ನು ಬಿಟ್ಟುಕೊಡಲಾರದೆ ಆಂತರಿಕವಾದ ಸಂಬಂಧವನ್ನು ಹೊಂದಿವೆ. ತಾರ್ಕಿಕವಾಗಿ ಇವುಗಳನ್ನು ತಿಳಿಯುವುದಾದರೆ ಒಂದು ತಾತ್ವಿಕ ಚಿಂತನೆ ಇನ್ನೊಂದಕ್ಕೆ ಪ್ರಚೋದನೆ ಕೊಡುತ್ತದೆ. ಸಾಮಾನ್ಯವಾಗಿ ಅವುಗಳನ್ನು ತಿಳಿಯುವ ದೃಷ್ಟಿ ಕೆಲವೊಂದು ಸಲ ತಿಳಿಯುವ ವ್ಯಕ್ತಿಯನ್ನು ಸರಿಯಾದ ತಿಳುವಳಿಕೆಯಿಂದ ಮೋಸಗೊಳಿಸಬಹುದು. ಆದ್ದರಿಂದ ತಾತ್ವಿಕ ಚಿಂತನೆಯ ತೀರ್ಮಾನ ವಾಕ್ಯಗಳು ಸತತವಾಗಿ ಒಂದನ್ನೊಂದು ಹಿಂಬಾಲಿಸುತ್ತಿರುತ್ತವೆ. ಆದ್ದರಿಂದ ಪ್ರಗತಿಯತ್ತ ಸಾಗುತ್ತದೆ. ಹೇಗೆಂದರೆ ನಕಾರಾತ್ಮಕ ಅಂಶಗಳ ಹಿಂದಿರುವ ಉತ್ಸುಕತೆಯೇ ಮುಂದಿನ ಭಾಗವನ್ನು ತಿಳಿಯಲು ಪ್ರೇರಣೆಯಾಗುತ್ತದೆ . ಅದು ಅಂತಿಮ ಗುರಿಯನ್ನು ತಿಳಿಯುವವರೆಗೂ ಪ್ರೇರಣೆ ಕೊಡುತ್ತದೆ.

❑

೭. ಚಾಡಿ ಹೇಳಲು ಬೇಡ ನಾಲಿಗೆ

– ಜೆ. ಲೋಹಿತ್

ಜಗತ್ತಿನ ಜೀವರಾಶಿಗಳಲ್ಲಿ ಯಾವ ಜೀವ–ಜಂತುಗಳಿಗೂ ಇರದ ಅಸಾಧಾರಣ ವಾದ, ಅತ್ಯದ್ಭುತವಾದ ಒಂದು ಕೊಡುಗೆ ಮಾನವನಿಗೆ ದೊರೆತಿದೆ. ಅದೇ 'ಮಾತು'. ಇದೊಂದು ಅದ್ಭುತವಾದ ವರವಿಲ್ಲದಿದ್ದರೆ ಮಾನವನಿಗೂ ಪ್ರಾಣಿಗಳಿಗೂ ಯಾವುದೇ ವ್ಯತ್ಯಾಸವಿರುತ್ತಿರಲಿಲ್ಲ.

ಇಂತಹ ವರವನ್ನು ಪಡೆದ ಮನುಷ್ಯನ ಜನ್ಮ ಪರಮ ಪವಿತ್ರವಾದುದು. ಈ ಮನುಷ್ಯ ಜನ್ಮವನ್ನು ಉತ್ತಮವಾದ ಕೆಲಸ ಕಾರ್ಯಗಳಿಗೆ ಬಳಸಿಕೊಂಡು ಸಾರ್ಥಕಗೊಳಿಸಿಕೊಳ್ಳಬೇಕು. ಅದು ಬಿಟ್ಟು ಅಪವಿತ್ರ ಕೆಲಸಗಳಿಗೆ, ಇನ್ನೊಬ್ಬರಿಗೆ ಕೇಡನ್ನು ಬಯಸುವುದಕ್ಕೆ, ಪರರ ಮನಸ್ಸಿಗೆ ನೋವುಂಟು ಮಾಡಿ ತಾನು ಕ್ಷಣಿಕವಾದ ಆನಂದವನ್ನು ಹೊಂದುವುದಕ್ಕೆ, ಇನ್ನೊಬ್ಬರ ಮನೆಯನ್ನು ಹಾಳು ಮಾಡಲು ಉಪಯೋಗಿಸಿಕೊಂಡರೆ ಅವನಿಗೂ ಪ್ರಾಣಿಗಳಿಗೂ ಯಾವುದೇ ವ್ಯತ್ಯಾಸಗಳಿರುವುದಿಲ್ಲ.

ದಾಸವರೇಣ್ಯರು ಮಾನವನ ನಡತೆಯನ್ನು ಕಂಡು,

"ಕಲಿಯುಗದ ಮಹಿಮೆಯು ಕಾಣಬಂತೀಗ
ಮುಟ್ಟ ಭಾಷೆಯ ಕೊಟ್ಟು ಮೋಸವನೆ ಮಾಡುವರು
ಕಂಡುದನು ಹೇಳರು, ಕಾಣದನೆ ಪೇಳುವರು
ಉಂಡ ಮನೆಗೆರಡನ್ನು ಬಗೆಯುತ್ತಲಿಹರು"

ಎಂದು ವ್ಯಥೆಪಟ್ಟಿರುವುದರ ಜೊತೆಗೆ,

"ನಗೆಯು ಬರುತಿದೆ ಎನಗೆ ನಗೆಯು ಬರುತಿದೆ
ಜಗದೊಳಿರುವ ಮನುಜರೆಲ್ಲ ಹಗರಣವ ಮಾಡುವುದ ಕಂಡು"

ಎಂದು ಗೇಲಿ ಮಾಡಿ,

"ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು
ಬೇಡಿ ಹುಚ್ಚಪ್ಪಗಳಿರಾ"

ಎಂದು ಎಚ್ಚರಿಕೆಯನ್ನೂ ನೀಡಿದ್ದಾರೆ.

ಮಾತುಗಳಲ್ಲಿ ಅನುಭವದ ಮಾತು, ಗಾದೆ ಮಾತು, ಬುದ್ಧಿ ಮಾತು, ಪಿಸುಮಾತು, ಮೆಚ್ಚುಮಾತು, ನೇರ ಮಾತು, ಒರಟು ಮಾತು – ಹೀಗೆ ಹಲವಾರು ಬಗೆಗಳಿರುವಂತೆ **'ಚಾಡಿಮಾತೂ'** ಇದೆ.

ದೇವರ ಕೊಡುಗೆಯಾದ ಈ ಮಾತು ಮನುಷ್ಯನಿಗೆ ವರವೂ ಹೌದು, ಶಾಪವೂ ಹೌದು. ಏಕೆಂದರೆ, ಇಂದು ಮಾನವನ ವೈವಾಹಿಕ, ಸಾಮಾಜಿಕ, ರಾಜಕೀಯ ಜೀವನದಲ್ಲಿ ಘರ್ಷಣೆ, ವೈಮನಸ್ಸು, ಮನಸ್ತಾಪ, ಕೊಲೆಗಳು, ನೋವು–ಸಂಕಟಗಳು ಉಂಟಾಗುವುದಕ್ಕೆ ಮೂಲ ಈ ಮಾತೇ ಆಗಿದೆ.

ಈ ಮಾತುಗಳು ಚಾಡಿ ಮಾತಾಗಿರಬಹುದು, ಚುಚ್ಚು ಮಾತಾಗಿರಬಹುದು, ಅವಹೇಳನದ ಮಾತಾಗಿರಬಹುದು, ಅವಮಾನದ ಮಾತಾಗಿರಬಹುದು. ಒಟ್ಟಿನಲ್ಲಿ "ಮಾತೇ ಮುತ್ತು ಮಾತೇ ಮೃತ್ಯು" ಎನ್ನುವ ಗಾದೆಯ ಮಾತು ಸತ್ಯಸ್ಯಸತ್ಯ.

'ಚಾಡಿ ಮಾತು' ಎಂದರೇನು? ಅದರಿಂದಾಗುವ ಅನಾಹುತಗಳೇನು? ಚಾಡಿ ಹೇಳುವವರ ಮನಃಸ್ಥಿತಿ ಹೇಗಿರುತ್ತದೆ? ಇವೇ ಮೊದಲಾದ ವಿಷಯಗಳನ್ನು ಸ್ವಲ್ಪಮಟ್ಟಿಗೆ ಅವಲೋಕಿಸೋಣ.

'ಚಾಡಿ' ಎಂದರೆ ಇನ್ನೊಬ್ಬರ ಮೇಲೆ ಇಲ್ಲ ಸಲ್ಲದ ಅಪವಾದವನ್ನು, ದೂಷಣೆಯನ್ನು ಆರೋಪಿಸುವಂತಹ ದೋಷಾರೋಪಣೆಯ ಮಾತು. ಈ ಚಾಡಿ ಎನ್ನುವ ಪದಕ್ಕೆ ಚಹಡ, ಚಹಡೆ, ಚಾಡ, ಚಾಡಿ, ಚಾಹಡ, ಚಾಡಿಸು, ಛಾಡ, ಛಾಡಿ ಎನ್ನುವ ಪದ ಪ್ರಯೋಗಗಳೂ ಇವೆ. ಇದಕ್ಕೆ ಕೆಲವು ಉದಾಹರಣೆಗಳನ್ನು ನೋಡಬಹುದು.

(೧) "ದುಃಸ್ಥಿತಿ ಪ್ರೇರಕಂ ಚಹಡಂ" (ಮಂಗರಾ ೨೨–೨೩)

(೨) "ಆಡದಿರು ಪುಸಿ ನಿಂದ್ಯ ನಿಷ್ಠುರ ಚಾಡಮಂ" (ಶಂಕದಾ ೧೬–೪೮)

(೩) "ಮಂಚಣ್ಣ ಚಹಡಿಯಂ ವಿಸ್ತಾರದಿಂ ಪೇಳೆ" (ಚೆಬಪು – ೩)

(೪) "ದುರ್ಜನರ ಚಹಡೆಯ ಮಾತುಗಳ ಕೇಳ್ದು" (ಚೆಬಪು – ೯–೯)

(೫) "ಮಹರಸಿಕತನದೊಳು ಚಾಹಡವ ಪೇಳೆ ದೇವ–ದಾನವರು ಕನಲ್ದುರುಳುತಿಹರು" (ಪ್ರಭುಪು. ೭–೩೭)

(೬) "ರೂಥೀಶನೊಡನೆಯಂಬಲಿಯನುಂಡುದು ಯಿಾಶ ಚಾಡಿಸಿದನದರಿಂದ ಹೊಲಗೇರಿಯೊಳು ನಮ್ಮ ನೋಡಲಿಚ್ಛೈಸಿ ನೃಪ ಬಂದಪನು" (ಚೋರಬ – ೮–೫೨)

(೭) "ಗೋಕುಲದೊಳು ಬಲಭದ್ರನ ಚಾಡಿವಾತಂ ಕೇಳ್ದು" (ಬೆಕಬಿ-೧೮)

(೮) "ಭಾಡವ ಪೇಳಿ ಉತ್ತಮರನ್ನ ಬಳಲಿಸಿ ನಾಡೊಳು ಸ್ವಾಮಿ ದೈವ ದ್ರೋಹತನದಲ್ಲಿ ಆಡಬಾರದ ಮಾತುಗಳೆಲ್ಲ ಸರ್ವದಾ ಜೋಡಿಸಿ ನುಡಿವುತ್ತ" (ವಿಸಾಸು. ೮೪-೬)

(೯) "ಚಹಡತನಗಳನಜೆಯೆ ಏಗುವೆ ನೀನು ಹಸುಳೆಯಲಾ" (ಕಾಶಿರಾ ೧೮-೩೮)

ಚಾಡಿಯ ಮಾತನ್ನು ಹೇಳುವವರಿಗೆ ಅಂದರೆ ಒಬ್ಬರ ಮೇಲೆ ಇಲ್ಲದ ಅಪವಾದವನ್ನು ಸೃಷ್ಟಿಸಿ, ಹುಟ್ಟಿಸಿಕೊಂಡು ಹೇಳುವವರಿಗೆ 'ಚಾಡಿಕೋರರು' ಎಂದು ಹೇಳುವರು. ಈ ಚಾಡಿ ಹೇಳುವವರು ಹೆಂಗಸರಾದರೆ 'ಚಾಡಿಕೋರಿ' ಎನ್ನುವರು. ಈ ಚಾಡಿಕೋರರಿಗೆ ಪಿಸುಣರು ಎನ್ನುವ ಅರ್ಥವೂ ಇದೆ. ಇದಕ್ಕೆ ಕೆಲವು ಉದಾಹರಣೆಗಳನ್ನು ನೋಡಬಹುದು.

(೧) "ಆತನುಂ ನೀನುಂ ಆನುಂ ಪೊಱಗಾಗಿರ್ದೆವವನಿಪತಿಗೆ ಪಿಸುಣರಿಂ"

(೨) "ಪಿಸುಣಂಗುಪಕಾರ ಮಾಡೆ ತಪ್ಪದು ಕೇಡು"

(೩) "ಪಿಸುಣನ ದ್ರವ್ಯ ಲೋಭಿ ಬಯಸಿದ ಹಾಗೆ"

(೪) "ಪಿಸುಣಕೊಂಡೆಯ ಚಾಡಿಯೆನೆ ಕುತ್ಸಿತಕ್ಕೆ ಪೆಸರೆಸಗು"

(ಶಬ್ದಮಂ-೬೬)

(೫) "ಮೃಡನ ನಿಜವೇಳ್ಪಲ್ಲಿ ಪಾರಂಗತದ ಚಾಡಿಕಾಱನಾಗುತ ಚರಿಪುದು"

(ಷ. ತಿಲ ೧೩-೮)

(೬) "ನಾಱುತಿರ್ಪ ಮೂಗುಳ್ಳಾತನೆತ್ತಲುಂ ಚಾಡಿಕಾಱಂ ವದನದುರ್ಗಂಧಿಯಾ ಕೊಂಡೆಯದ ಸೂಚಕಂ" (ವೀಶೈಪು. ೪-೨೨-೨೩)

ಇವುಗಳನ್ನೆಲ್ಲಾ ನೋಡಿದಾಗ ಚಾಡಿ ಎಂದರೇನು? ಅದನ್ನು ಹೇಳುವವರು ಎಂತಹವರು? ಚಾಡಿ ಹೇಳುವುದರಿಂದಾಗುವ ದುಷ್ಪರಿಣಾಮಗಳೇನು? ಎನ್ನುವ ವಿಷಯ ಮನದಟ್ಟಾಗುವುದರ ಜೊತೆಗೆ ಈ 'ಚಾಡಿ' ಹೇಳುವುದು ಇಂದು-ನೆನ್ನೆಯ ವಿಷಯವಲ್ಲ ಎಂಬುದರ ಅನುಭವವಾಗುತ್ತದೆ. ಇದು ಪುರಾಣಗಳ ಕಾಲದಿಂದಲೂ ಚಾಲ್ತಿಯಲ್ಲಿರುವ ಒಂದು ಅನಿಷ್ಟ ಪದ್ಧತಿ ಹಾಗೂ ಒಂದು ಕೆಟ್ಟ ರೂಢಿಯಾಗಿ ನಿರಂತರವಾಗಿ ಹರಿದುಬರುತ್ತಲೇ ಇದೆ.

ರಾಮಾಯಣದಲ್ಲಿಯೇ ನೋಡಿ ಮಂಥರೆಯ ಚಾಡಿ ಮಾತನ್ನು ಕೇಳಿ ಕೈಕೆಯು ಶ್ರೀರಾಮನನ್ನು ಹದಿನಾಲ್ಕು ವರ್ಷ ವನವಾಸಕ್ಕೆ ಕಾಡಿಗೆ ಕಳುಹಿಸುತ್ತಾಳೆ. ಇದರಿಂದ ಇಡೀ ರಾಮಾಯಣವೇ ಬದಲಾಗುತ್ತದೆ. ಅದೇ ರೀತಿ ಅಗಸನೊಬ್ಬನ ಚಾಡಿ ಮಾತಿಗೆ ಶ್ರೀರಾಮ ತನ್ನ ಮಡದಿ ಸೀತೆಯನ್ನೇ (ಗರ್ಭಿಣಿಯಾದ) ಕಾಡಿಗಟ್ಟುತ್ತಾನೆ.

ಈ ರೀತಿ ಚಾಡಿ ಮಾತಿನಿಂದ ಸದ್ಗುಣಿಗಳು ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಕೊನೆಗೆ ಚಾಡಿ ಹೇಳಿದವರೂ ಪಶ್ಚಾತ್ತಾಪದಿಂದ ಬೇಯುತ್ತಾರೆ ಪ್ರಯೋಜನವೇನು? ಕಾಲ ಮಿಂಚಿ ಹೋಗಿರುತ್ತದೆ.

ಇದನ್ನೆಲ್ಲಾ ನೋಡಿದಾಗ ಚಾಡಿಯ ಮಾತನ್ನು ಕೇಳುವವರಿರುವವರೆಗೂ ಚಾಡಿಯ ಮಾತನ್ನು ಹೇಳುವವರೂ ಇರುತ್ತಾರೆ. ಇದಕ್ಕೆ ಅಂತ್ಯವೂ ಇಲ್ಲ. ಸಾವೂ ಇಲ್ಲ ಎನ್ನಬಹುದೇನೋ?

ಚಾಡಿ ಹೇಳುವುದು ಕೆಲವರಿಗೆ ಜನ್ಮತಃ ಅಂಟಿಕೊಂಡು ಬಂದಿರುವ ಒಂದು ಜಾಡ್ಯ ಎನ್ನಬಹುದು. ಇದಕ್ಕೆ ಯಾವುದೇ ಮದ್ದಿಲ್ಲ. ಚಾಡಿ ಹೇಳಿ ಇನ್ನೊಬ್ಬರಿಗೆ ತೊಂದರೆಕೊಟ್ಟು ಅವರ ಮನಸ್ಸಿನ ಸ್ವಾಸ್ಥ್ಯವನ್ನು ಹಾಳು ಮಾಡದಿದ್ದರೆ ಚಾಡಿ ಹೇಳುವವರಿಗೆ ಉಂಡ ಊಟವೇ ಅರಗುವುದಿಲ್ಲ. ಕಣ್ಣಿಗೆ ನಿದ್ದೆಯೂ ಹತ್ತುವುದಿಲ್ಲ. ಅಂತಹ ವಿಕೃತ ಮನಸ್ಸಿನವರು ಈ ಚಾಡಿಕೋರರು.

ಚಾಡಿಗ ಮೂಲಪುರುಷ 'ನಾರದ' ಎಂದು ಹೇಳುವುದು ರೂಢಿಯಲ್ಲಿ ಬಂದಿರುವ ವಿಚಾರವಾಗಿದೆ. ಏಕೆಂದರೆ ಯಾವ ವ್ಯಕ್ತಿಯೇ ಆಗಲಿ ಯಾವುದೋ ಒಂದು ವಿಷಯವನ್ನು ಕುರಿತು ಮಾತನಾಡುತ್ತಿರುವಾಗ ಇನ್ನೊಬ್ಬ ವ್ಯಕ್ತಿ ಈ ವಿಷಯವನ್ನು ಕುರಿತು ಆಗಲೇ ಅವರ ತಲೆಗೆ ಹುಳುಬಿಟ್ಟಿದ್ದೇನೆ ಎಂದರೆ ಸುಳುಹು ನೀಡಿದ್ದೇನೆ ಎಂದಾಗ ತಕ್ಷಣವೇ 'ನೀನು ಬಿಡಪ್ಪಾ 'ನಾರದ'ನಂತೆ ಬೀಜ ಬಿತ್ತಿ ಬಿಡುತ್ತೀಯಾ? ಎಂದು ಹೇಳುವ ಮಾತು ಪ್ರಚಲಿತದಲ್ಲಿದೆ. ಹಾಗೆಯೇ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ತಂದು ಹಾಕುವ ಬುದ್ಧಿ ಇರುವ ಕೆಲವರಿಗೆ 'ನಾರದ' ಎನ್ನುವುದನ್ನು ಅಡ್ಡ ಹೆಸರಾಗಿಯೂ ಕರೆಯುವುದಿದೆ.

ನಾರದ ಎಂದರೆ ಎಲ್ಲರ ಮನದಲ್ಲಿ ಮೂಡುವುದು ಜಗಳಗಂಟ, ಚಾಡಿಕೋರ, ಕಲಹಪ್ರಿಯ ಎಂದು ಭಾವನೆ. ಮೋಹನತರಂಗಿಣಿಯಲ್ಲಿ "ಖೂಳ ನಾರದ ಬಂದು ಬಾಣನೊಳ್ ಚಹಡಿಯ ಹೇಳಲುಜ್ಜುಗವೆತ್ತನಂತೆ" ಎಂಬ ಮಾತಿದೆ. ಹಾಗೆಯೇ "ನಾರದನು ಚಹಡಿಯ ಹೇಳಿ ಹಲವಂಗದಲಿ ಬಳಿಕಾ ಫಾಳಿಯನು ಕಳುಹಿದನು ಕೋಪಾಗ್ನಿಯನು ಹೊತ್ತಿಕ್ಕಿ" (ತಿಮ್ಮ ಶಾಂ-೫-೧೦೭) ಎನ್ನುವ ಮಾತೂ ಇದೆ.

ಇಲ್ಲಿ ನಾವು ಒಂದು ವಿಷಯವನ್ನು ಗಮನಿಸಬೇಕಾಗಿದೆ. ಅದೇನೆಂದರೆ ನಾರದ ಚಾಡಿಕೋರನಾದರೂ, ಕಲಹಪ್ರಿಯನಾದರೂ ಅವನು ಹೇಳುವ ಚಾಡಿ ಮಾತಿನಿಂದ ದುಷ್ಟರಿಗೆ ಶಿಕ್ಷೆಯಾಗಿ ಶಿಷ್ಟರಿಗೆ ರಕ್ಷೆಯಾಗುತ್ತಿತ್ತು. ಅಂದರೆ ನಾರದ ಯಾರಿಗೆ ಏನು ಹೇಳಿದರೂ, ಯಾರ ಮಧ್ಯದಲ್ಲಾದರೂ ಕಲಹದ ಬೀಜ ಬಿತ್ತಿದರೂ ಅದರಿಂದ ಇತರರಿಗೆ ತಾತ್ಕಾಲಿಕವಾಗಿ ನೋವುಂಟಾದರೂ ಅದು ಕ್ಷಣಿಕವಷ್ಟೇ. ಅದು ಲೋಕೋಪಕ್ಕಾರಕ್ಕಾಗಿಯೇ ಹೊರತು ಇನ್ನೊಬ್ಬರಿಗೆ ಮನನೋಯಿಸುವುದಕ್ಕಾಗಲೀ

ಅಥವಾ ಅವರ ಮನಸ್ಸಿಗೆ ನೋವು ಕೊಟ್ಟು ತಾವು ಆನಂದ ಹೊಂದುವುದಕ್ಕಾಗಲೀ ಅಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಆದರೆ ಇಂದು ಚಾಡಿ ಹೇಳುತ್ತಿರುವವರು ಯಾವ ಲೋಕೋಪಕ್ಕಾರಕ್ಕಾಗಿಯೂ ಅಲ್ಲ, ಯಾರೊಬ್ಬರ ಉದ್ಧಾರಕ್ಕಾಗಿಯೂ ಅಲ್ಲ. ಅದರ ಬದಲು ಒಬ್ಬರ ಸುಖ ಸಂಸಾರ ಮುರಿಯಲು, ಒಬ್ಬ ವ್ಯಕ್ತಿಯನ್ನು ಸರ್ವನಾಶ ಮಾಡಲು (ತನಗಾಗದವರನ್ನು) ಕಾರಣವಾಗುತ್ತಿದೆ. ಆದ್ದರಿಂದಲೇ ಏನೋ "ಚಾಡಿ ಮಾತಿನಿಂದ ಚಾವಡಿ ಹಾಳಾಯ್ತು" ಎನ್ನುವ ಗಾದೆ ಹುಟ್ಟಿಕೊಂಡಿದೆ ಎನಿಸುತ್ತದೆ. ಈ "ಚಾಡಿ ಮಾತಿನಿಂದ ಮನೆಯೂ ಕೆಡುತ್ತದೆ. ಜೊತೆಯೂ ಕೆಡುತ್ತದೆ" ಎನ್ನುವ ಮಾತೂ ನಿತ್ಯಸತ್ಯ.

ಮಾತಿಗೆ ಮೂಲ ನಾಲಿಗೆ. ಈ ನಾಲಿಗೆಯಿಂದಲೇ ಒಳ್ಳೆಯ ಮಾತು, ಕೆಟ್ಟ ಮಾತು, ಚಾಡಿ ಮಾತು – ಹೀಗೆ ಎಲ್ಲಾ ಮಾತುಗಳೂ ಹೊರಡುವುದು. ಆದ್ದರಿಂದಲೇ,

> **'ಲಕ್ಷ್ಮೀರ್ವಸತಿ ಜಿಹ್ವಾಗ್ರೇ, ಜಿಹ್ವಾಗ್ರೇ ಮಿತ್ರ ಬಾಂಧವಾಃ**
> **ಜಿಹ್ವಾಗ್ರೇ ಬಂಧನಂ ಪ್ರಾಪ್ತಂ, ಜಿಹ್ವಾಗ್ರೇ ಮರಣಂ ಧ್ರುವಂ"**

ಎಂದಿರುವುದು. ಅಂದರೆ ನಾಲಿಗೆಯ ತುದಿಯಲ್ಲಿ ಲಕ್ಷ್ಮೀ ನೆಲೆಸಿದ್ದಾಳೆ. ನಾಲಿಗೆಯ ತುದಿಯಲ್ಲೇ ಸ್ನೇಹಿತರು, ಬಂಧುಗಳು ನೆಲೆಸಿದ್ದಾರೆ. ನಾಲಿಗೆಯಿಂದಲೇ ಸಂಬಂಧಗಳು ಹುಟ್ಟಿಕೊಂಡವು. ಅಲ್ಲಿಂದಲೇ ಬಂಧನವೂ ಪ್ರಾಪ್ತವಾದೀತು. ಇಂತಿಪ್ಪ ನಾಲಿಗೆಯಲ್ಲೇ ಸಾವೂ ಕೂಡ ನೆಲೆಸಿದೆ" ಎಂದ ಮೇಲೆ ಈ ನಾಲಿಗೆ ಮನುಷ್ಯನ ಜೀವನದಲ್ಲಿ ಎಷ್ಟು ಮಹತ್ವ ಪಡೆದಿದೆ ನೋಡಿ !

ಆದ್ದರಿಂದಲೇ ಸರ್ವಜ್ಞನೂ ಕೂಡ, 'ಒಡಲೆಂಬ ಹುತ್ತಕ್ಕೆ ನುಡಿವ ನಾಲಿಗೆ ಸರ್ಪ' ಎಂದಿದ್ದಾನೆ.

ಚಾಡಿಕೋರರಿಗೆ 'ದ್ವಿ–ಜಿಹ್ವಃ' – ಎರಡು ನಾಲಿಗೆಗಳು–ಎನ್ನುವರು. ಏಕೆಂದರೆ ಚಾಡಿ ಹೇಳುವವರಿಗೆ ತಮಗೆ ತಾವು ಹೇಳಿದ ಚಾಡಿ ಮಾತಿನಿಂದಲೇ ಆಪತ್ತೊದಗುತ್ತಿದೆ ಎಂಬ ಅರಿವಾದ ಕೂಡಲೇ ಅಗಚಿದರೆ ಅಕ್ಕಿ ರೊಟ್ಟಿ, ಮಗಚಿದರೆ ರಾಗಿ ರೊಟ್ಟಿ ಎನ್ನುವಂತೆ ಸಮಯ ಸಂದರ್ಭಗಳನ್ನು ಅರಿತು ಹೇಗೆ ಬೇಕಾದರೂ ಹಾಗೆ ಹೊರಳಿಕೊಳ್ಳುವರು. ನಾನೇನು ಚಾಡಿಕೋರನಲ್ಲ. ನನಗೇನೂ ಅಂತಹ ಸ್ವಭಾವವಿಲ್ಲ. ಅದರಿಂದ ನನಗೇನು ಲಾಭವೂ ಇಲ್ಲ, ಏನೋ ಕಂಡಿದ್ದನ್ನು ಹೇಳಿದೆ, ಅದೂ ನೀವಾಗಿ ಕೇಳಿದ್ದಕ್ಕೆ ಹೇಳಿದೆ ಅಷ್ಟೇ ಎಂದು ಯಾವ ಮಾತನ್ನೋ ಯಾವ ಮಾತಿಗೋ ತಂದು ಗಂಟು ಹಾಕಿ ನುಣುಚಿಕೊಳ್ಳುವರು.

ಚಾಡಿ ಮಾತುಗಳಿಗೆ ಹೆಣ್ಣು-ಗಂಡು ತೋರಿಸುವ ದಲ್ಲಾಳಿಗಳದು ಎತ್ತಿದ ಕೈ. ಇವರು ಸಾವಿರ ಸುಳ್ಳು ಹೇಳಿ ಒಂದು ಮದುವೆಯನ್ನೂ ಮಾಡಿಸುತ್ತಾರೆ, ಹಾಗೆಯೇ ಒಂದು ಚಾಡಿಯ ಮಾತನ್ನು ಹೇಳಿ ಆಗುವ ಮದುವೆಯನ್ನೂ ಮುರಿಯುತ್ತಾರೆ. ಈ ದಲ್ಲಾಳಿಗಳನ್ನು ಸರಿಯಾಗಿ ನೋಡಿಕೊಳ್ಳದೆ ಅವರವರೇ ಮಾತುಕತೆಗೆ ಪ್ರಾರಂಭ ಮಾಡಿದ್ದೇ ಆದರೆ ಅದನ್ನು ಚಾಡಿಯ ಮೂಲಕ ಛಿದ್ರಗೊಳಿಸುತ್ತಾರೆ. ಇವರಿಗೆ ಎರಡೂ ಕಡೆಯಿಂದ ರಾಜಾತಿಥ್ಯ ದೊರಕಿ ಕೈ ತುಂಬಾ ಹಣವೂ ಸಿಕ್ಕಿದರೆ ಆಗ ಚಾಡಿಯನ್ನೇ ಮೋಡಿಯನ್ನಾಗಿ ಮಾಡಿ ಎರಡೂ ಸಂಬಂಧಗಳನ್ನು ಬೆಸೆಯುತ್ತಾರೆ. ಅದಕ್ಕೇ ಇರಬೇಕು, ಇಂತಹವರನ್ನು ನೋಡಿಯೇ ಎರಡು ನಾಲಗೆಯವರು ಎಂದಿರುವುದು ಎನಿಸುತ್ತದೆ.

ಮನೆಗೆಲಸದವರನ್ನೇ ತೆಗೆದುಕೊಳ್ಳಿ, ಅವರೂ ಸಹಾ ಒಬ್ಬರ ಮನೆಯದನ್ನು ಇನ್ನೊಬ್ಬರ ಮನೆಗೆ ಹರಡಿ, ಅಕ್ಕ-ಪಕ್ಕದ ಮನೆಯವರಿಗೇ ಕಲಹ, ವೈಮನಸ್ಸುಗಳನ್ನು ತಂದು ಹಾಕುತ್ತಾರೆ. ಇವರುಗಳು 'ನೆರೆ'ಯನ್ನೇ 'ಹೊರೆ'ಯನ್ನಾಗಿ ಮಾಡುವುದೂ ಇದೆ.

ಸ್ನೇಹಿತರ ವಿಷಯದಲ್ಲೇ ಆಗಲಿ – ಎಲ್ಲಾ ಸ್ನೇಹಿತರು ಆತ್ಮೀಯರಾಗಿರುವುದಿಲ್ಲ. ಕೆಲವರು ಹಲೋ ಹಲೋ ಅನ್ನುವಷ್ಟರಮಟ್ಟಿಗೆ ಇರುತ್ತಾರೆ. ಇನ್ನೂ ಕೆಲವರು ಸ್ವಲ್ಪಮಟ್ಟಿಗೆ ಸನಿಹದಲ್ಲಿರುತ್ತಾರೆ. ಆದರೆ ಹೃದಯಕ್ಕೆ ಸನಿಹದಲ್ಲಿರುವವರು ಬೆರಳೆಣಿಕೆಯಷ್ಟು ಮಾತ್ರ – ಅವರೂ ಸಹಾ ನಮ್ಮ ಔದಾರ್ಯವನ್ನು ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡು ಮತ್ತೊಬ್ಬರ ಬಳಿ ಇಲ್ಲಸಲ್ಲದ್ದನ್ನು ಸೃಷ್ಟಿಸಿ ಚಾಡಿ ಹೇಳಿ ಗೆಳೆತನವನ್ನೇ ಮುರಿಯುತ್ತಾರೆ. ಕೆಲವೊಮ್ಮೆ ಎಷ್ಟರಮಟ್ಟಿಗೆಂದರೆ ಅದು ಎಂದಿಗೂ ಸರಿಹೋಗುವುದಿಲ್ಲವೇನೋ ಎನ್ನುವಷ್ಟರಮಟ್ಟಿಗೆ ಚಾಡಿಯಿಂದ ಬೆಸುಗೆ ಹಾಕಿ ಬಿಗಿದಿರುತ್ತಾರೆ. ಈ ಮಾತು ಎಲ್ಲಾ ಸ್ನೇಹಿತರಿಗೂ ಅನ್ವಯಿಸುವುದಿಲ್ಲ. ಕೆಲವರ ಸ್ವಭಾವ, ಮನಸ್ಥಿತಿ ಹೀಗಿರುತ್ತದೆ ಅಷ್ಟೇ.

ಜನಪದರನ್ನೇ ನೋಡಿ, ಅವರು ಎಷ್ಟು ಮುಗ್ಧರೆಂದರೆ ಅವರಿಗೆ ಯಾವ ಮರೆ-ಮೋಸಗಳೂ ಗೊತ್ತಿರುವುದಿಲ್ಲ. ಒಮ್ಮೆ ಜನಪದದ ಹೆಣ್ಣು ಮಗಳೊಬ್ಬಳು ತನ್ನ ಗಂಡನಿಗೆ ಮನೆಯ ವ್ಯವಹಾರಕ್ಕೊ ಅಥವಾ ದಾಂಪತ್ಯದ ಬಗೆಗೋ ಪ್ರಶ್ನೆ ಮಾಡುತ್ತಾಳೆ ಅಥವಾ ತನಗೆ ಅನಿಸಿದ್ದನ್ನು ಕೇಳುತ್ತಾಳೆ. ಆಗ ಆಕೆಯ ಮಾತಿಗೆ ಸಿಟ್ಟಿಗೆದ್ದ ಗಂಡ ನಿನಗೆ ಇದನ್ನೆಲ್ಲಾ ಕೇಳಲು ಹೇಳಿದವರಾರು? ಯಾರು ನಿನಗೆ ಚಾಡಿ ಹೇಳಿದವರು? ಯಾರ ಚಾಡಿ ಮಾತು ಕೇಳಿ ನನ್ನನ್ನು ಪ್ರಶ್ನಿಸುತ್ತಿರುವೆ? ನಾನು ಹಾಗೆಯೇ, ನನ್ನನ್ನು ಕೇಳಲು ನೀನ್ಯಾರು? ಎಂದೆಲ್ಲಾ ಕೂಗಾಡಿ ರಂಪ ಮಾಡುತ್ತಾನೆ. ಆಗ ಆ ಹೆಣ್ಣುಮಗಳು,

"ಸಿಟ್ಟ್ಯಾಕೋ ರಾಯ ನನ ಮ್ಯಾಲೆ
ನಾನಂಥ ಹುಟ್ಟಸ್ಯಾಡುವರ ಮಗಳಲ್ಲ"

ಎನ್ನುತ್ತಾಳೆ. ಇಲ್ಲಿ ಚಾಡಿ ಎಂದರೆ ಇಲ್ಲದ್ದನ್ನೂ ಇದೆ ಎಂದು ಹುಟ್ಟಿಸಿಕೊಂಡು, ಕಲ್ಪನೆ ಮಾಡಿಕೊಂಡು, ಹೀಗಿರಬಹುದೇ ಎಂಬ ಊಹೆ ಮಾಡಿಕೊಂಡು ಆಡುವ ಮಾತು ಎನ್ನುವುದು ಅರಿವಾಗುತ್ತದೆ. ಜನಪದರಾರೂ ಕಿವಿಮಾತಿಗೆ ಅಂದರೆ ಈ ಚಾಡಿ ಮಾತುಗಳಿಗೆ ಮನಸ್ಸನ್ನು ಹರಿಯಬಿಟ್ಟವರಲ್ಲ.

ಜನಪದರು ಚಾಡಿ ಛಿದ್ರಗಳಿಗೆ ತಮ್ಮ ಜೀವನದಲ್ಲಿ ಎಂದೂ ಆಸ್ಪದವನ್ನೇ ನೀಡುವುದಿಲ್ಲ. ಅವರು ಯಾವಾಗಲೂ, ಯಾವುದೇ ವಿಷಯಕ್ಕಾದರೂ ದೇವರ ಮೊರೆ ಹೋಗುತ್ತಾರೆ. ನಮ್ಮ ತಪ್ಪುಗಳನ್ನು ಮನ್ನಿಸುವವನೂ ಅವನೇ, ನಮ್ಮನ್ನು ರಕ್ಷಿಸುವವನೂ ಅವನೇ ಎಂಬ ನಂಬಿಕೆ ಹೊಂದಿದವರು. ಆದ್ದರಿಂದಲೇ ಅವರು,

"ಭಾಗಾದಿ ಬಲಕಿರಲಿ, ವೈರಿ ತಾ ಎಡಕಿರಲಿ
ಛಾಡಿ ನಿನ ಮನಿಯು ಇದಿರಿರಲಿ ಬಲಭೀಮ
ದೇವ ನನಮ್ಯಾಲ ದಯವಿರಲಿ"

ಎಂದು ಮೊರೆಯಿಟ್ಟು ಬೇಡುವರು. ಇದೇ ರೀತಿ ಕಬೀರರೂ ಕೂಡ "ನಿಂದಿಸುವವರನ್ನು ಮನೆಯ ಅಂಗಳದಲ್ಲಿಯೇ ಗುಡಿಸಲು ಕಟ್ಟಿ ವಾಸಿಸುವಂತೆ ಮಾಡಬೇಕು. ಇದರಿಂದ ನೀರು ಸಾಬೂನು ಇಲ್ಲದೆಯೇ ನಮ್ಮ ಸ್ವಭಾವ ನಿರ್ಮಲವಾಗುವುದು" ಎಂದಿದ್ದಾರೆ.

ಜನಪದರು ಇನ್ನೊಬ್ಬರ ವಿಷಯಕ್ಕೆ ತಲೆಕೆಡಿಸಿಕೊಳ್ಳುವುದಿಲ್ಲ. ತಾವಾಯಿತು, ತಮ್ಮ ಕೆಲಸವಾಯಿತು ಎನ್ನುವವರು. ತಾವೂ ಇನ್ನೊಬ್ಬರ ವಿಷಯದಲ್ಲಿ ಮೂಗು ತೂರಿಸುವುದಿಲ್ಲ. ಹಾಗೆಯೇ ಯಾರು ಏನು ಹೇಳಿದರೂ ಅವರಿಗೆ ಯಾರ ಮೇಲೂ ಅನುಮಾನ, ಸಂದೇಹ, ಸಿಟ್ಟು ಸೆಡವುಗಳು ಬರುವುದಿಲ್ಲ. ಅದು ಅವರ ಸಹಜ ಸ್ವಭಾವ – ಆದರೆ ಇಂದು ಬದಲಾವಣೆಯ ಗಾಳಿ ಬೀಸಿ, ನಾಗರಿಕತೆ ಕೈ ಬೀಸಿ ನಗರದತ್ತ ಕರೆದೊಯ್ದುಮೇಲೆ ಎಲ್ಲಾ ಕಡೆಯಲ್ಲೂ ವಾತಾವರಣ ಕಲುಷಿತಗೊಂಡಿರುವುದರಲ್ಲಿ ಯಾವುದೇ ಅನುಮಾನವಿಲ್ಲ ಎನ್ನಬಹುದೇನೋ?

ಒಮ್ಮೆ ಒಬ್ಬಳು ಗೆಳತಿ ಇನ್ನೊಬ್ಬಳು ಗೆಳತಿಯ ಹತ್ತಿರ ಬಂದು ಅವಳ ಗಂಡನ ಬಗೆಗೆ,

"ಚಿಂತಾಕು ಇಟುಕೊಂಡು ಚಿಪ್ಪಾಟಿ ಬಳಿವಾಕಿ
ಚಿಂತಿಲ್ಲವೇನು ನಿನಗೀಟು। ನಿನ ಗಂಡ
ಅಲ್ಲೊಬ್ಬಳ ಕೂಡ ನಗುತಿದ್ದ॥

ಎಂದು ಚಾಡಿಯ ಮಾತು ಹೇಳುತ್ತಾಳೆ. ಆ ಮಾತನ್ನು ಕೆಲಸದಲ್ಲಿ ಮಗ್ನಳಾಗಿದ್ದ ಗೆಳತಿ ಕೇಳಿಸಿಕೊಂಡು, ಈಗಿನವರಂತೆ ನನ್ನ ಗಂಡ ಎಲ್ಲಿದ್ದ? ಯಾರವಳು? ಇಬ್ಬರೂ ಏನು ಮಾಡುತ್ತಿದ್ದರು? ಎಂದೆಲ್ಲಾ ಕೇಳಿ, ಅವರು ಮನೆಗೆ ಬರಲಿ ವಿಚಾರಿಸಿಕೊಳ್ಳುತ್ತೀನಿ. ಅವರಿಗೆ ನಾನೇನು ಕಡಿಮೆ ಮಾಡಿದ್ದೆ ಎಂದು ಕೂಗಾಡಿ ಕಿರುಚಾಡಿ ಅತ್ತೂ ಕರೆದು ರಂಪಾಟ ಮಾಡಿ ಮನಸ್ಸನ್ನು ರಾಡಿ ಮಾಡಿಕೊಳ್ಳದೆ ಒಂದೇ ಮಾತಿನಲ್ಲಿ ತನ್ನ ಗೆಳತಿಗೆ ಈ ರೀತಿ ಉತ್ತರಿಸುತ್ತಾಳೆ:

"ನಕ್ಕರೆ ನಗಲವ್ವ ನಗೆ ಮುಖದ ಕ್ಯಾದಿಗೆ
ನಾ ಮುಚ್ಚಿ ಮುಡಿದ ಪರಿಮಳದ ಆ ಹೂವ
ಅವಳೊಂದು ಗಳಿಗೆ ಮುಡಿಲೇಳು"

ಎಂದು ಚಾಡಿ ಹೇಳಲು ಬಂದ ಗೆಳತಿಗೆ ಇನ್ನೊಂದು ಮಾತನ್ನು ಹೇಳಲು ಅವಕಾಶ ಕೊಡದಂತೆ ಅವಳ ಬಾಯಿ ಮುಚ್ಚಿಸುತ್ತಾಳೆ.

ಇದೇ ಮಾತನ್ನು ವಿದ್ಯಾವಂತರಿಗೇನಾದರೂ ಹೇಳಿದ್ದರೆ ಮನೆಯಲ್ಲಿ ರಾದ್ಧಾಂತವಾಗಿ ಸಂಸಾರವೇ ಒಡೆದು ಛಿದ್ರವಾಗಿ ವಿಚ್ಛೇದನದವರೆಗೂ ಹೋಗುತ್ತಿತ್ತು. ಆದರೆ ಜನಪದರಲ್ಲಿ ಸಹನೆ ಇದೆ, ತಿಳುವಳಿಕೆಯ ಅರಿವಿದೆ.

ಪುರಂದರದಾಸರೂ ಕೂಡ ಪರರನ್ನು ದೂಷಿಸುವುದಕ್ಕೆ, ಅವರ ಮೇಲೆ ಇಲ್ಲ – ಸಲ್ಲದ ಆರೋಪಗಳನ್ನು ಹೊರಿಸುವುದಕ್ಕೆ, ಅವರನ್ನು ನಿಂದನೆ ಮಾಡುವುದಕ್ಕೆ ಚಾಚಿಕೊಂಡಿರುವಂತಹ ಈ ನಾಲಿಗೆಯನ್ನು ಈ ರೀತಿ ಬೇಡಿಕೊಳ್ಳುತ್ತಾರೆ :

"ಆಚಾರವಿಲ್ಲದ ನಾಲಿಗೆ
ನಿನ್ನ ನೀಚಬುದ್ಧಿಯ ಬಿಡು ನಾಲಿಗೆ
ವಿಚಾರವಿಲ್ಲದೆ ಪರರ ದೂಷಿಸುವುದಕ್ಕೆ
ಚಾಚಿಕೊಂಡಿರುವಂಥ ನಾಲಿಗೆ
ಚಾಡಿ ಹೇಳಲು ಬೇಡ ನಾಲಿಗೆ
ನಿನ್ನ ಬೇಡಿಕೊಂಬುವೆನು ನಾಲಿಗೆ"

ಎಂದು ಹೇಳುವುದರ ಜೊತೆಗೆ,

"ಚಾಡಿಗಳ ಹೇಳುವುದಿಲ್ಲಿ ನುಡಿದಾಡುವ ನಾಲಿಗೆ ಕೀಳುವರಲ್ಲಿ" ಎಂದು ಎಚ್ಚರಿಕೆಯನ್ನೂ ನೀಡಿದ್ದಾರೆ.

ಚಾಡಿಕೋರರು ಏಕಾಂಗಿಗಳಲ್ಲ. ಅವರಿಗೆ ಊರೆಲ್ಲಾ ನೆಂಟರು. ಜನರ ಸಂಪರ್ಕವೇ ಇಲ್ಲದಿದ್ದರೆ ಅವರು ಚಾಡಿ ಹೇಳುವುದು ಯಾರಿಗೆ? ಚಾಡಿ ಹೇಳದಿದ್ದರೆ ಅವರ ಮನಸ್ಸಿಗೆ ಸಮಾಧಾನ ಸಿಗುವುದಾದರೂ ಹೇಗೆ? ಆದ್ದರಿಂದ ಚಾಡಿಕೋರರು ತಮ್ಮ ವಾಕ್ಚಾತುರ್ಯನಿಂದ ಎಲ್ಲರ ಸ್ನೇಹ ಗಳಿಸುವರು. ಅವರ ಪೂರ್ವಾಪರಗಳನ್ನೆಲ್ಲಾ

ತಿಳಿದುಕೊಳ್ಳುವರು. ಇವರಿಗೆ ಹೇಗಿದ್ದರೆ ಇವರ ಸ್ನೇಹ–ವಿಶ್ವಾಸ ಗಳಿಸಿಕೊಳ್ಳ ಬಹುದೆಂಬ ಸೂಕ್ಷ್ಮತೆಗಳನ್ನು ಅರಿಯುವರು. ನಂತರ ಅವರಿಗಾಗದವರ ಹತ್ತಿರ ಹಾಗೂ ಅವರಿಗೆ ತೀರ ಸನಿಹದಲ್ಲಿರುವವರ ಹತ್ತಿರ ಚಾಡಿಯ ಬೀಜ ಬಿತ್ತಿ ಮನಸ್ಸನ್ನು ರಾಡಿ ಮಾಡುವರು.

ಚಾಡಿಕೋರರ ಮುಂದೆ ಮುಗ್ಧ ಮನಸ್ಸಿನವರು ತಮ್ಮ ಮನಸ್ಸಿನ ಅಂತರಂಗದ ಭಾವನೆಗಳನ್ನು ತೆರೆದಿಟ್ಟರೆ ಅದನ್ನೇ ತಮ್ಮ ಅಸ್ತ್ರವನ್ನಾಗಿ ಬಳಸಿಕೊಳ್ಳುವ ಚಾಕಚಕ್ಯತೆಯನ್ನು ಚಾಡಿಕೋರರು ಹೊಂದಿರುತ್ತಾರೆ. ಇದನ್ನು ಅರಿಯದೆ ಅವರ ಮುಂದೆ ಕಷ್ಟಸುಖಗಳನ್ನು ಹೇಳಿಕೊಂಡರೆ ಸುಂಕದವನ ಮುಂದೆ ತಮ್ಮ ದುಃಖವನ್ನು ತೋಡಿಕೊಂಡಷ್ಟೇ ಪ್ರಯೋಜನವಾಗುವುದು. ಏಕೆಂದರೆ ಚಾಡಿಕೋರರ ಮನಸ್ಸು ಕಠಿಣ. ಆದ್ದರಿಂದಲೇ ಅವರು ಏನು ಮಾಡಬೇಕೋ ಅದನ್ನೇ ಮಾಡಿ ಮುಗಿಸುತ್ತಾರೆ. ಏಕೆಂದರೆ ಅವರ ಮನಸ್ಸು ಸದಾ ಕಾಲವೂ ಕೆಟ್ಟದ್ದನ್ನು ಮಾಡಬೇಕೆಂಬ ತವಕದಲ್ಲಿರುತ್ತದೆ. ಹೀಗೆ ಚಾಡಿಕೋರರು ಎಲ್ಲಾ ಕಾಲದಲ್ಲೂ ಇರುತ್ತಾರೆ ಎಂದಲ್ಲಾ, ಎಲ್ಲೋ ಕೆಲವೊಮ್ಮೆ ಚಾಡಿಕೋರರಿಂದ ಒಳ್ಳೆಯದಾಗುವ ಸಂದರ್ಭವೂ ಇದೆ.

ಕೆಲವು ಸಂದರ್ಭಗಳಲ್ಲಿ ಯಾರೊಡನಾದರೂ ಮಾತನಾಡುತ್ತಿರುವಾಗ ಮಧ್ಯದಲ್ಲಿ ಇನ್ನೊಬ್ಬರ ಪ್ರವೇಶವಾದಾಗ ಇವರ ಮುಂದೆ ಯಾವ ಮಾತನ್ನೂ ಆಡಬೇಡಿ. ಇವರು ಒಂದಕ್ಕೆ ಎರಡು ಸೇರಿಸಿ ಚಾಡಿ ಹೇಳುತ್ತಾರೆ ಎಂದು ತಾವು ಮಾತನಾಡುತ್ತಿದ್ದ ವಿಷಯದ ದಿಕ್ಕನ್ನೇ ಬದಲಾಯಿಸುವ ಸಂದರ್ಭಗಳೂ ಇವೆ.

ಚಾಡಿ ಹೇಳುವವರಿಗೆ ಚಾಡಿಯನ್ನು ಕೇಳುವ ಕಿವಿಗಳೇ ಇಲ್ಲದಿದ್ದರೆ ಯಾರಿಗೆ ಚಾಡಿ ಹೇಳುವರು. ಅವರು ಬಾಯಿ ಮುಚ್ಚಿಕೊಂಡು ನಮ್ಮ ಬೇಳೆ ಎಲ್ಲೂ ಬೇಯುವುದಿಲ್ಲ ಎಂದು ಸುಮ್ಮನಿರುತ್ತಾರೆ. ಆದರೆ ಪರಿಸ್ಥಿತಿ ಹಾಗಿಲ್ಲ. ಚಾಡಿ ಕೇಳುವವರೂ ಇದ್ದಾರೆ. ಆದ್ದರಿಂದಲೇ ಚಾಡಿ ಕೇಳುವವರಿರುವವರೆಗೂ ಚಾಡಿ ಹೇಳುವವರೂ ಇರುತ್ತಾರೆ. ಈ ಚಾಡಿಯ ಮಾತನ್ನು ಕೇಳುವವರನ್ನು 'ಹಿತ್ತಾಳೆ ಕಿವಿ' ಯವರು ಎಂದು ಹೇಳುವುದುಂಟು. ಕೆಲವರಿಗೆ ಚಾಡಿ ಮಾತನ್ನು ಕೇಳುವುದೆಂದರೆ ಪಂಚಪರಮಾನ್ನ ಉಂಡಂತೆ, ಮನಸ್ಸಿಗೆ ಆನಂದ ಅವರಿಗೆ. ಏನೂ ಮಾತನಾಡದೆ, ಯಾರ ಬಗ್ಗೆಯೂ ಏನೂ ಹೇಳದೆ ಸುಮ್ಮನಿರುವವರನ್ನೂ ಇಂತಹವರು ಸುಮ್ಮನಿರಲು ಬಿಡದೆ ಅವರು ನನ್ನ ಬಗೆಗೆ ಏನೆಂದರು? ನನ್ನ ವಿಷಯದಲ್ಲಿ ಏನು ಮಾತನಾಡಿಕೊಳ್ಳುತ್ತಿದ್ದರು? ಅವರು ಏನು ಮಾಡುತ್ತಾರೆ? ಎಲ್ಲಿಗೆ ಹೋಗುತ್ತಾರೆ? ಅವರ ಮನೆಯವರು ಹೇಗೆ? ಅವರಿಗೆ ಇಷ್ಟೆಲ್ಲಾ ಮೋಜು ಮಾಡಲು ಹಣ ಎಲ್ಲಿಂದ ಬರುವುದು? – ಹೀಗೆ ಒಂದಲ್ಲ ಒಂದು ರೀತಿ ಕೆದಕಿ ಬೆದಕಿ ಕೇಳಿ ತಿಳಿಯಲು ಹವಣಿಸುತ್ತಿರುತ್ತಾರೆ. ಅವರಿಗೆ ಇದೊಂದು ಅಂಟಿಕೊಂಡಿರುವ

ಗೀಳು. ಅವರು ಹೀಗೆ ಕೇಳಿದ್ದಕ್ಕೆ ಏನಾದರೂ ಸರಿಯಾಗಿ ಹೇಳದಿದ್ದರೆ ಇವರಿಗೆ ಉಳಿಗಾಲವಿಲ್ಲ. ಹುಟ್ಟಿಸಿಕೊಂಡು ಹೇಳಲು ಮನವೊಪ್ಪುವುದಿಲ್ಲ. ಅವರು ಆತ್ಮವಂಚನೆ ಮಾಡಿಕೊಳ್ಳಲು ಸಿದ್ಧರಿರುವುದಿಲ್ಲ. ಅವರಿಗೆ ಇದು ಬಿಸಿತುಪ್ಪವಿದ್ದಂತೆ. ಇವರು ಹುಟ್ಟಿಸಿಕೊಂಡು ಇವರ ಮೂಗಿನ ನೇರಕ್ಕೆ ಅವರ ಮನ ಒಪ್ಪುವಂತೆ ಹೇಳದಿದ್ದರೆ ಇವರಿಗೆ ಯಾವ ಮನ್ನಣೆ, ಮಾನ್ಯತೆಗಳನ್ನೂ ಕೊಡದೆ ಕಿರುಕುಳ ಕೊಟ್ಟು ನೋವನುಭವಿಸುವಂತೆ ಮಾಡುವರು.

ಇನ್ನೂ ಕೆಲವರಿರುತ್ತಾರೆ. ಅವರು ಯಾರು ಯಾರ ಬಗ್ಗೆ ಕೇಳದೇ ಇದ್ದರೂ, ಬಿಡದೇ ಇನ್ನೊಬ್ಬರ ಬಗೆಗೆ ತುತ್ತೂರಿ ಊದುತ್ತಾರೆ. ಅವರು ಅಧಿಕಾರಿಗಳ ಪ್ರೀತಿ ಗಳಿಸಲು, ಅವರ ಹತ್ತಿರದ ಒಡನಾಟದಲ್ಲಿರಲು, ಅವರಿಂದ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಲು ಹಾತೊರೆಯುತ್ತಿರುತ್ತಾರೆ. ಅಧಿಕಾರಿಗಳ ಹಿಂದೆ-ಮುಂದೆ ಓಡಾಡುತ್ತಾ ಎಲ್ಲರ ಬಗ್ಗೆಯೂ ತನಗೆ ಗೊತ್ತು ಎಲ್ಲರ ವಿಷಯ ತಾನು ತಿಳಿದಿದ್ದೇನೆ ಎನ್ನುವ ರೀತಿ ಫೋಜು ಕೊಡುತ್ತಾ ಅನ್ಯರ ವಿರುದ್ಧ ಇಲ್ಲ ಸಲ್ಲದ ದೋಷಾರೋಪಣೆ ಮಾಡುತ್ತಾರೆ. ಹುಟ್ಟಿಸಿಕೊಂಡು, ಊಹೆ ಮಾಡಿಕೊಂಡು ಕೆಲವು ವಿಷಯವನ್ನು ಹೇಳುತ್ತಾರೆ. ಅವರುಗಳ ಬಗ್ಗೆ ಒಂದು ಎಳೆ ಸಿಕ್ಕಿದರೆ ಸಾಕು ಅದನ್ನು ಹಿಗ್ಗಾ ಮುಗ್ಗಾ ಜಗ್ಗಿ ಅದಕ್ಕೆ ಇನ್ನಿಲ್ಲದ ಬಣ್ಣ ಹಚ್ಚಿ ಹೇಳುತ್ತಾರೆ. ಇದರಿಂದ ಅವರಿಗೂ, ಅಧಿಕಾರಿಗಳಿಗೂ ಮನಸ್ತಾಪ ಬರುವಂತೆ ಮಾಡಿ ಅದರಿಂದ ತಾವು ಆನಂದ ಹೊಂದುತ್ತಾರೆ.

ಆದರೆ ಇಂತಹ ಚಾಡಿ ಮಾತುಗಳು ಹೆಚ್ಚು ದಿನ ನಡೆಯುವುದಿಲ್ಲ. ಎಲ್ಲಾ ಕ್ಷಣಿಕ ಮಾತ್ರ. ಸತ್ಯ ಒಂದಲ್ಲ ಒಂದು ದಿನ ಗೊತ್ತಾಗಲೇ ಬೇಕಲ್ಲ! ಮೋಡ ಮುಸುಕಿದ ಸೂರ್ಯನಂತೆ. ಸದಾಕಾಲ ಸೂರ್ಯನನ್ನು ಮೋಡ ಮುಚ್ಚಿಟ್ಟುಕೊಳ್ಳಲು ಸಾಧ್ಯವೇ ? ಹಾಗೆ.

ಕೆಲವೊಮ್ಮೆ ಚಾಡಿ ಹೇಳುವವರನ್ನು ಇವರು ಸರಿಯಿಲ್ಲ ಎಂಬುದನ್ನು ತಿಳಿದೇ ಹತ್ತಿರಕ್ಕೆ ಬಿಟ್ಟುಕೊಳ್ಳದೆ ದೂರದಲ್ಲೇ ಕೆಲವರು ಇಟ್ಟಿರುತ್ತಾರೆ. ಆದರೆ ಚಾಡಿಕೋರರಲ್ಲಿಯೂ ಕೆಲವರು ಮೊಂಡರಿರುತ್ತಾರೆ. ಅವರಿಗೆ ಯಾರೇನು ಅಂದರೂ ಯಾರೆಷ್ಟು ಹೀಯಾಳಿಸಿದರೂ ಕಿವಿಗೇ ಹಾಕಿಕೊಳ್ಳದೆ ಚಾಡಿ ಹೇಳುವುದೇ ತನ್ನ ಕಾಯಕವೆಂದು ತಿಳಿದು, ಏನ್ ಸಾರ್, ನೀವೆಲ್ಲಿ? ಅವರೆಲ್ಲಿ? ಅವರಿಗೆ ಎಷ್ಟು ಕೊಬ್ಬು ಅಂತೀರಾ! ನೀವು ಅವರಿಗೆ ಒಂದು ದಾರಿ ತೋರಿಸದಿದ್ದರೆ ಅವರಿಗೆ ಅನ್ನ ಎಲ್ಲಿತ್ತು? ಇವತ್ತು ನೋಡಿ, ಅವರು ನಿಮ್ಮನ್ನೇ ಧಿಕ್ಕರಿಸಿ ನಡೆಯುವ ಮಟ್ಟಕ್ಕೆ ಹೋಗಿದ್ದಾರೆ. ಅವರಿಗೆ ಉದ್ಯೋಗ ನೀಡಿದ್ದೇ ನಿಮ್ಮ ಮೊದಲ ತಪ್ಪಾಯಿತು. ಈಗ ಅವರಿಗೆ ನೀವು ಸರಿಯಾಗಿ ಮಟ್ಟ ಹಾಕದಿದ್ದರೆ ನಿಮ್ಮನ್ನೇ ಅವರು ಮೂಲೆ

ಗೊತ್ತರಿಸುತ್ತಾರೆ. ಆವೊತ್ತು ನಿಮ್ಮ ಮುಂದೆ ಬಾಲ ಮುದುರಿಕೊಂಡು ಕೈಕಟ್ಟಿ ಬೆನ್ನು ಬಾಗಿಸಿ ನಿಂತುಕೊಳ್ಳುತ್ತಿದ್ದರು. ಈಗ ನಿಮಗೆ ಆಗದವರನ್ನು ಕಟ್ಟಿಕೊಂಡು ನಿಮ್ಮ ವಿರುದ್ಧ ಪಿತೂರಿ ನಡೆಸುತ್ತಿದ್ದಾರೆ. ಅವರನ್ನು ಸುಮ್ಮನೆ ಬಿಡಬೇಡಿ ಎಂದು ಅವರ ತಿಳಿಯಾದ ಮನಸ್ಸಿಗೆ ಚಾಡಿ ಎಂಬ ವಿಷ ಬೀಜ ಬಿತ್ತಿ ರಾಡಿ ಮಾಡುತ್ತಾರೆ.

ಕೆಲವೊಮ್ಮೆ ಶಿಕ್ಷಕರೇ ವಿದ್ಯಾರ್ಥಿಗಳಿಗೆ ಚಾಡಿ ಹೇಳಿ ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟುವ ಸಂದರ್ಭಗಳೂ ಇವೆ. ಇಲ್ಲಿ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ ಎನ್ನುವ ಅರಿವೂ ಶಿಕ್ಷಕರಿಗೆ ಇರುವುದಿಲ್ಲ ಎನಿಸುತ್ತದೆ. ಹಾಗೆಯೇ ಕೆಲವೊಮ್ಮೆ ತಂದೆ-ತಾಯಿಗಳೇ ತಮ್ಮ ಎಳೆಯ ಮಕ್ಕಳಿಗೆ ಬಾಲ್ಯದಲ್ಲೇ ಚಾಡಿ ಹೇಳುವ ಬುದ್ಧಿಯನ್ನು ಕಲಿಸುತ್ತಾರೆ. ಅವರಿಗೆ ಆಗ ಇದರಿಂದ ಮುಂದೇನಾಗುತ್ತದೆ ಎಂಬ ಅರಿವೇ ಇರುವುದಿಲ್ಲ. ಮಗುವಿಗೆ ನಿನ್ನ ಸ್ನೇಹಿತನ ವಿರುದ್ಧ ಮೇಡಂಗೆ ಚಾಡಿ ಹೇಳಿ ಅವನಿಗೆ ಸರಿಯಾಗಿ ಬುದ್ಧಿ ಕಲಿಸು, ಅವರ ಅಮ್ಮನಿಗೂ ಹೋಗಿ ಹೇಳು, ನೀನು ಸುಮ್ಮನಿರಬೇಡ ಅವನಿಗೆ ತಕ್ಕ ಪಾಠ ಕಲಿಸು, ಬಿಡಬೇಡ ಎಂದು ಮಗುವಿನ ನಿರ್ಮಲವಾದ ಮನಸ್ಸಿನ ಮೇಲೆ ಚಾಡಿ ಎಂಬ ಛಿದ್ರವಾದ ಚಿತ್ತಾರ ಬರೆಯುವರು. ಇದು ಮುಂದೆ ಹೆಮ್ಮರವಾಗಿ ಬೆಳೆದು ಕುಲಕ್ಕೆ ಕೊಡಲಿಯ ಕಾವಾಗುತ್ತದೆ ಎನ್ನುವ ಪರಿಜ್ಞಾನ ತಂದೆ-ತಾಯಿಗಳಿಗಿರುವುದಿಲ್ಲ. ಅವರಿಗೆ ಆ ಹೊತ್ತಿಗೆ ಮಾತ್ರ ಅದರಿಂದ ಕ್ಷಣಿಕ ತೃಪ್ತಿ, ಆನಂದ ಸಿಗಬಹುದಷ್ಟೇ. 'ಮಕ್ಕಳ ಮಾತಿಗೆ ಒಕ್ಕಲು ಹೋದಂತೆ' ಎಂಬ ಗಾದೆ ಕೇಳಿಲ್ಲವೆ? ಹಾಗೆ.

ಮನುಷ್ಯನ ಮನಸ್ಸು ಮರ್ಕಟನಂತೆ. ಎಲ್ಲೆಂದರಲ್ಲಿ ಅದು ಓಡುವುದು. ಅದನ್ನು ಬುದ್ಧಿ ಮತ್ತು ವಿವೇಕಗಳೆಂಬ ಕಡಿವಾಣ ಹಾಕಿ ಹತೋಟಿಯಲ್ಲಿಟ್ಟುಕೊಳ್ಳಬೇಕು. ಆದ್ದರಿಂದಲೇ ಸರ್ವಜ್ಞನು,

> **"ಕಣ್ಣು, ನಾಲಗೆ ಮನವು ತನ್ನದೆಂದೆನಬೇಡ**
> **ಅನ್ಯರು ಕೊಂದರೆನಬೇಡ। ಇವು ಮೂರು**
> **ತನ್ನ ಕೊಲ್ಲುವುವು"** ಎಂದಿದ್ದಾನೆ.

ನಾವು ಚಾಡಿಕೋರರ ಮಧ್ಯೆಯೇ ಬದುಕು ಸಾಗಿಸಬೇಕಾಗಿರುವುದರಿಂದ ಚಾಡಿಕೋರರ ಮಾತುಗಳಿಗೆ ಎಂದೂ ಕಿವಿಗೊಡಬಾರದು. ಕೇಳಿದರೂ ಆ ಮಾತುಗಳಿಂದ ಪ್ರಭಾವಿತರಾಗಿ ಇನ್ನೊಬ್ಬರನ್ನು ದೂಷಿಸಲೂ ಬಾರದು, ತೆಗಳಲೂ ಬಾರದು. ಏಕೆಂದರೆ ಚಾಡಿಕೋರರು ಒಬ್ಬರ ಮೇಲೆ ಒಬ್ಬರನ್ನು ಚಾಡಿ ಹೇಳಿ ಎತ್ತಿ ಕಟ್ಟಿ 'ಉರಿವ ಮನೆಯಲ್ಲಿ ಹಿರಿದಿದ್ದೇ ಲಾಭ'ವೆಂಬಂತೆ ವಿಕೃತಾನಂದಪಡುತ್ತಾರೆ. ಅದಕ್ಕಾಗಿ.

ಒಟ್ಟಿನಲ್ಲಿ ಚಾಡಿ ಹೇಳುವವರಿಗೆ ಚಾಡಿ ಹೇಳುವುದರಿಂದ ಯಾವುದೇ ಪ್ರಯೋಜನವಿಲ್ಲ. ಅವರಿಗೆ ಯಾವುದೇ ರೀತಿಯ ಲಾಭವೂ ಇಲ್ಲ. ಯಾರ ಗಂಟೂ ಸಿಕ್ಕುವುದಿಲ್ಲ. ಆದರೂ ಇನ್ನೊಬ್ಬರ ಜೀವನದಲ್ಲಿ ಚೆಲ್ಲಾಟವಾಡುತ್ತಾರೆ. ಇಂತಹ ಚಾಡಿ ಮಾತುಗಳಿಂದ ಎಷ್ಟೋ ಸಂಸಾರಗಳು ಹಾಳಾಗಿವೆ. ಎಷ್ಟೋ ಜನರು ಬೀದಿಪಾಲಾಗಿದ್ದಾರೆ. ಎಷ್ಟೋ ಜನರ ಜೀವ ಬಲಿಯಾಗಿ ಹೋಗಿದೆ. ಈ ರೀತಿ ಚಾಡಿಯ ಮಾತುಗಳಿಂದ ಯಾವ ಯಾವ ರೀತಿಯ ಪರಿಣಾಮಗಳಾಗುತ್ತವೆ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಚಾಡಿ ಹೇಳುವವರ ಮನಸ್ಸು ಕಶ್ಮಲ, ಬಾಯಿ ಹೊಲಸು, ಎಲುಬಿಲ್ಲದ ನಾಲಗೆ – ಇಂತಹವರಲ್ಲಿ ಒಳ್ಳೆಯದನ್ನು ಬಯಸುವುದು ಹೇಗೆ?

ದಾಸರು ಹೇಳಿದಂತೆ "ಚಾಡಿ ಹೇಳಲಿ ಬೇಡ ನಾಲಿಗೆ ನಿನ್ನ ಬೇಡಿಕೊಂಬೆನು ನಾಲಿಗೆ" ಎಂದು ದೇವರಲ್ಲಿ ಮೊರೆಯಿಟ್ಟು ಬೇಡುವುದೇ ಸರಿ!

ಗ್ರಂಥಋಣ

೧. ಕನ್ನಡ ಸಾಹಿತ್ಯ ಪರಿಷತ್ ನಿಘಂಟು

೨. ಪುರಂದರದಾಸರು

೩. ಸರ್ವಜ್ಞ

೪. ಜನಪದ ಗೀತೆಗಳು

೫. ಹಣತೆ–ಎ.ವಿ. ನರಸಿಂಹಮೂರ್ತಿ

❑

೮. ದಾರ್ಶನಿಕ ಸಂತ ಕವಿ ಷರೀಫ

– ಡಾ. ಎಸ್. ವೆಂಕಟೇಶ್

ಕರ್ನಾಟಕದ ಕಬೀರರೆಂದೇ ಹೆಸರಾದ ಷರೀಫರು ಒಬ್ಬ ದಾರ್ಶನಿಕ ಸಂತ ಕವಿ. ಷರೀಫರ ಕವಿತೆಗಳಲ್ಲಿ ದಾರ್ಶನಿಕತೆಯ 'ಒಳನೋಟ' ವಿಚಾರಶೀಲತೆ, ಅರ್ಥ–ಸಮರ್ಥನೆಗಳು ನಮಗೆ ವೇದ್ಯವಾಗುತ್ತದೆ.

ನೈತಿಕತೆಯೇ ಅವರ ಕವಿತೆಯ ಜೀವಾಳ. ನೈಜ ಘಟನೆಗಳನ್ನೇ ಆಧಾರವಾಗಿ ಬಳಸಿಕೊಂಡು ಲೌಕಿಕತೆಯಿಂದ ಅಲೌಕಿಕತೆ ಎಡೆಗೆ ಕರೆದೊಯ್ಯುವ ಶಕ್ತಿ ಅವರ ತತ್ವಪದಗಳಿಗಿದೆ. ಕವಿ ತಾ ಕಂಡ ತತ್ವಗಳಲ್ಲಿ 'ಆನಂದ' ಕಾಣುತ್ತ ಜೊತೆಯಲ್ಲೇ ಕೇಳುಗರನ್ನು (ಓದುಗರನ್ನು) ಚಿಂತನೆಗೆ ಹಚ್ಚುವ ಕೆಲಸವನ್ನು ಮಾಡುತ್ತಾರೆ.

ರವೀಂದ್ರರು ಹೇಳುವಂತೆ "ಕಾವ್ಯದ ಮುಖ್ಯ ಕೆಲಸ ಜೀವನದ ಎಲ್ಲ ಅವಸ್ಥೆಗಳನ್ನು ಭಾವಗಳನ್ನು ಚಿತ್ರಿಸುವುದು" ಎನ್ನುವ ಮಾತಿಗೆ ಉತ್ತರಗಳನ್ನು ಷರೀಫರ ಕವಿತೆಗಳಲ್ಲಿ ನಾವು ಕಾಣಬಹುದಾಗಿದೆ.

ದೈವಿಕ ಆನಂದದಿಂದ ಅನುಭಾವಿಗಳಾದ ಷರೀಫರು ರಚಿಸಿ ಹಾಡಿದ ಪದಗಳಲ್ಲಿ ತತ್ವವಿದೆ. ಜೀವನ ರಸವಿದೆ ಎಲ್ಲರನ್ನು ತಲುಪುವ ಜಗಮತನವಿದೆ. ಈ ಎಲ್ಲಾ ಅಂಶಗಳನ್ನು ಷರೀಫರ ಕೆಲವು ಪದಗಳನ್ನು ಅವಲೋಕಿಸುವ ಮೂಲಕ ನಾವು ಕಾಣಬಹುದು.

'ಸೋರುತಿಹುದು ಮನೆಯ ಮಾಳಿಗಿ'
. . . .
. . . .

ಇದೊಂದು ಆಧ್ಯಾತ್ಮಿಕ ಅರ್ಥವನ್ನು ತನ್ನೊಳಗೆ ಅಡಗಿಸಿಕೊಂಡಿರುವ ಪದ. ಈ ದೇಹವೆನ್ನುವ ಮನೆ ಅಜ್ಞಾನದಿಂದ ಸೋರುತ್ತಿದೆ. ಅರಿಷಡ್ವರ್ಗದಿಂದ

ತುಂಬಿರುವ ಈ ದೇಹ ರೋಗ ರುಜಿನಗಳಿಂದ ಬಳಲುತ್ತಿದೆ. ಶಿಶುನಾಳಧೀಶನ ಕರುಣೆಯ ಬೆಳಕು ಇಲ್ಲದಿದ್ದರೆ ಇದು ನಾಶವಾಗುವುದಂತೂ ಖಂಡಿತ. ಮಳೆ ಎನ್ನುವುದು ಇಲ್ಲಿ ಜ್ಞಾನದ ಸಂಕೇತವಾಗಿ ದೇಹ ಮನಸ್ಸುಗಳನ್ನು ಬೆಳಗುತ್ತದೆ.

ಬೋಧ ಒಂದೇ

. . . .

. . . . **ಭವನಾಶ ಎಂದೆ –**

ಎನ್ನುವ ಪದದಲ್ಲಿ ಬ್ರಹ್ಮಜ್ಞಾನವೇ ನಿಜವಾದ ಜ್ಞಾನ; ಅದು ಎರಡಲ್ಲ ಒಂದೇ. ಅದರ ಮೂಲ ಒಂದೇ ಅದರ ಗುರಿ, ಭಾಷೆ ಎಲ್ಲವೂ ಒಂದೇ. ಏಕತೆ ನಮಗೆ ಅರಿವಾಗುವುದು ಭವನಾಶದಿಂದ ಎನ್ನುವ ದಾರ್ಶನಿಕ ಅಂಶಗಳು ಇಲ್ಲಿ ಗೋಚರವಾಗುತ್ತದೆ.

ಹುಡುಕುತ ನಾ ಎಲ್ಲಿ ಹೋಗಲಿ
ಹುಡುಕಿ ಬ್ಯಾಸತ್ತೆ, ಎಲ್ಲಂತ ಕಾಣಲಿ

. . . .

ಎನ್ನುವಲ್ಲಿ ವಿರಹಿ ಅನುಭವಿಸುವ ವಿರಹದ ವೇದನೆಯಂತೆ ದೇವರನ್ನು ಕಾಣದೇ ತಾವು ಅನುಭವಿಸಿದ ನೋವಿನ ಚಿತ್ರಣವನ್ನು ಬಿಚ್ಚಿಟ್ಟಿದ್ದಾರೆ. ಷರೀಫರು ಇಲ್ಲಿ. ಆತನಿಗಾಗಿ ಅವನ ಸೃಷ್ಟಿಯ ಪ್ರಕೃತಿಯನ್ನೆಲ್ಲಾ ಅಂದರೆ ಬಾವಿ, ನದಿ, ಅರಣ್ಯ ಊರಿನಿಂದ ಊರಿಗೆ ಕೊನೆಗೆ ಸುಡುಗಾಡನ್ನು ಬಿಡದೆ ಸಂಚರಿಸಿದೆ. ಆಗ ಗುರು ಶಿಶುನಾಳೇಶನ ಮಂತ್ರವನ್ನು ನೀಡಿ ನನ್ನನ್ನು ರಕ್ಷಿಸಿದ ಎನ್ನುತ್ತಾರೆ ಷರೀಫರು.

ಆಧ್ಯಾತ್ಮಿಕ ದಾರಿಯಲ್ಲಿ ನಡೆಯಲು ಗುರು ಉಪದೇಶ, ಗುರು ಮಾರ್ಗದರ್ಶನ ಬಹಳ ಮುಖ್ಯವಾದುದು. ಶಿಷ್ಯ ನಡೆಯುವ ದಾರಿಯನ್ನು ಗುರು ನಿರ್ಧರಿಸುತ್ತಾನೆ. ಬ್ರಹ್ಮಜ್ಞಾನ ಪಡೆಯಲು ಮನಸ್ಸನ್ನು ಹೇಗೆ ನಿಗ್ರಹಿಸಬೇಕೆನ್ನುವುದನ್ನು ಗುರು ಕಲಿಸುತ್ತಾನೆ ಎನ್ನುತ್ತಾರೆ ಷರೀಫರು.

ಹಾಕಿದ ಜನಿವಾರವ ಸದ್ಗುರುನಾಥ
ಹಾಕಿದ ಜನಿವಾರವ . . . .

. . . .

ಎನ್ನುವ ಪದದಲ್ಲಿ ತಮ್ಮ ಗುರುವಿನ ಸಹಾಯ ಹಸ್ತವನ್ನು ನೆನೆಯುವುದರ ಜೊತೆ ದೈವವನ್ನು ಕಾಣುವ ದಾರಿಯನ್ನು ತಿಳಿಸಿದ್ದಾರೆ.

"ಸಾಧು ಜನರ ಸಹಜ ಪಥವಿದು

. . . .

. . . .

ಎನ್ನುವ ಪದದಲ್ಲಿ ಅನುಭಾವಿಗಳ ಲಕ್ಷಣವನ್ನು ವರ್ಣಿಸಿದ್ದಾರೆ ಷರೀಫರು. ಅವರು ಸದಾ ಆನಂದದಲ್ಲಿರುವವರು. ಅವರಿಗೆ ಲೌಕಿಕದಂತೆ ಇದುಬೇಕು ಅದುಬೇಕು

ಎನ್ನುವ ಆಸೆಗಳಾವುವೂ ಇರುವುದಿಲ್ಲ. ಇಂದ್ರಿಯಗಳನ್ನು ಗೆದ್ದಿರುವ ಅವರು ಏಕಾಂಗಿಯಾಗಿ ಮೌನದಲ್ಲಿ ಸಂಚರಿಸುವರು. ಅವರ ದೃಷ್ಟಿ ಸದಾ ದೇವರೆಡೆಗೆ. ಸುತ್ತಲಿನ ಪರಿಸರದ ಬಗ್ಗೆ ಅವರ ಗಮನವಿರುವುದಿಲ್ಲ. ಎಲ್ಲವೂ ದೇವರೇ ಅವರಿಗೆ. ಉಪನಿಷತ್ತಿನ ಮಾತಿನಂತೆ,

'ಸರ್ವಂ ಖಲ್ವಿದಂ ಬ್ರಹ್ಮ:'

ಷರೀಫರು ಜೀವನವನ್ನು ಅರ್ಥೈಸುವ ಪರಿ ತಳಸ್ಪರ್ಶಿಯಾದುದು.

"ತರವಲ್ಲ ತಗಿ ನಿನ್ನ ತಂಬೂರಿ

. . . .

. . . ."

ಇಲ್ಲಿ ತಂಬೂರಿಯನ್ನು ಸಾಂಕೇತಿಕವಾಗಿ ಬಳಸಿಕೊಂಡು ಜೀವನವನ್ನು ಅರ್ಥೈಸಿದ್ದಾರೆ ಷರೀಫರು. ತಂಬೂರಿ ಜನಸಾಮಾನ್ಯರ ವಾದ್ಯ. ತಳಸ್ಥರದ ಜನರ ಸಾಂಸ್ಕೃತಿಕ ಬದುಕಿನಲ್ಲಿ ಬೆರೆತುಕೊಂಡಿರುವಂತಹುದು. ಸಂಗೀತಗಾರರಿಗಂತೂ ತಂಬೂರಿ ಮುಖ್ಯವಾದುದ್ದು. ಇಂತಹ ವಾದ್ಯವನ್ನು ಸಂಗೀತ ಜ್ಞಾನವಿಲ್ಲದೆ ಅದನ್ನು ಮೀಟಿದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ಸಿದ್ಧಿ ಸಾಧಕರಿಗೂ ತಂಬೂರಿಯ ಅವಶ್ಯಕತೆ ಇದ್ದೇ ಇದೆ. ಜ್ಞಾನಿಯಾದವನಿಗೆ ಮಾತ್ರ ಇದರ ಮಹತ್ವ ಅರಿವಾಗಬಲ್ಲದು. ಬಾಳೆಂಬ ಶಿವ ರಚಿಸಿದ ಈ ತಂಬೂರಿಯನ್ನು ಸತ್ಯದಿಂದ ದಿನವೂ ನುಡಿಸಬೇಕು, ಶಿಶುನಾಳಧೀಶನ ನಾಮಸ್ಮರಣೆಯನ್ನು ಮಾಡಬೇಕು. ಅದಾಗಲೇ ಜೀವನದ ಸಾರ್ಥಕತೆ ಎನ್ನುತ್ತಾರೆ ಷರೀಫರು.

"ಬಿದ್ದೀಯಬೆ ಮುದುಕಿ

. . . .

. . . . "

ಎನ್ನುವ ಪದದಲ್ಲಿ ಹುಲುಗೂರ ಸಂತೆಯಲ್ಲಿ ಮುದುಕಿಯೊಬ್ಬಳು ಅಲ್ಲಿ ಬಿದ್ದ ಘಟನೆಯನ್ನೇ ನೆಪವಾಗಿಟ್ಟುಕೊಂಡು ಪ್ರಪಂಚದಲ್ಲಿ ಹೇಗೆ ಬದುಕಬೇಕು ಎನ್ನುವ ರೀತಿಯನ್ನು ತಿಳಿಸಿದ್ದಾರೆ ಷರೀಫರು. ಈ ಲೋಕವೇ ಒಂದು ಸಂತೆ. ಇಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಇಲ್ಲದಿದ್ದರೆ ಕಳ್ಳರು ಎಲ್ಲವನ್ನೂ ದೋಚುವರು. ಮನಸ್ಸಿನಲ್ಲಿ ದೇವನನ್ನು ನೆಲೆಗೊಳಿಸಿ ಬದುಕಿದರೆ ಬದುಕು ಹಸನಾಗುತ್ತದೆ. ಇಲ್ಲದಿದ್ದರೆ ಆಸೆಯ ಬೆನ್ನು ಬಿದ್ದರೆ ಬದುಕೇ ನಾಶವಾಗುತ್ತದೆ ಎಂದು ಮುದುಕಿಯನ್ನು ಕಾರಣವಾಗಿಟ್ಟು ಕೊಂಡು ಜನರನ್ನು ಎಚ್ಚರಿಸುತ್ತಾರೆ ಷರೀಫರು.

ಧರ್ಮದಲ್ಲಿ ಬೆರೆತುಕೊಂಡಿರುವ ಡಾಂಭಿಕತೆಯನ್ನು ಅಲ್ಲಗಳೆಯದೇ ಬಿಡಲಿಲ್ಲ ಷರೀಫರು.

"ಬಾಯಿಲೆ ಬ್ರಹ್ಮವ ಬೊಗಳಿದರೇನು
. . . .
. . . ."

ಎನ್ನುವ ಪದದಲ್ಲಿ ಮನಸ್ಸನ್ನು ನಿಯಂತ್ರಣದಲ್ಲಿ ಇಡದೆ ಅರಿಷಡ್‌ವರ್ಗಗಳ ಬೆನ್ನು ಹತ್ತಿದರೆ ಹೊಲಸಿನ ಸಿಂಬಳ ಸವಿಯುವ ನೊಣದಂತೆ ಆಗುವಿರಿ. ಆದ್ದರಿಂದ ಕೇವಲ ಬಾಯಿಯಲ್ಲಿ ಬ್ರಹ್ಮವೆಂದರೆ ಸಾಲದು. ಆತನನ್ನು ಮನದಲ್ಲಿ ನೆಲೆಸುವಂತೆ ಮಾಡಬೇಕು ಎನ್ನುತ್ತಾರೆ ಷರೀಫರು.

"ಭಂಡಭವಿಗಳ ಖಂಡಿಸದೇ
. . . .
. . . ."

ಎನ್ನುವ ಪದದಲ್ಲಿ ಸನ್ಯಾಸಿಗಳ ಆಷಾಢಭೂತಿತನವನ್ನು ಖಂಡಿಸುತ್ತಾರೆ.

ತಲೆ ಬೋಳಿಸಿಕೊಂಡು ಹೆಗಲಲ್ಲಿ ತುಂಡುಗಂಬಳಿ ಹೊತ್ತು ಅನುಯಾಯಿಗಳ ಗುಂಪು ಕಟ್ಟಿಕೊಂಡು ತಿರುಗಿದರೆ ಅದರಿಂದ ಯಾವ ಫಲ ದೊರೆಯುವುದಿಲ್ಲ. ಇಂತಹವರ ಬಗ್ಗೆ ಎಚ್ಚರಿಕೆ ಇರಬೇಕೆನ್ನುತ್ತಾರೆ ಷರೀಫರು.

"ದುಡ್ಡು ಕೆಟ್ಟದ್ದು ನೋಡಣ್ಣ
ದುಗ್ಗಾಣಿಗೆ ಹೆಡ್ಡನಾಗಬೇಡೋ
ತಿಂದೀ ನೀ ಮಣ್ಣ . . . "

ಎನ್ನುವ ಪದವಂತೂ ಸಾರ್ವಕಾಲಿಕವಾದದ್ದು. ಹಣದ ಮೋಹಕ್ಕೆ ಒಳಗಾದರೆ ಉಂಟಾಗುವ ಅನರ್ಥಗಳು ಬಹಳ. ಅದು ದೊಡ್ಡ ದೊಡ್ಡ ವ್ಯಕ್ತಿಗಳನ್ನು ಇದು ದಿಕ್ಕು ತಪ್ಪಿಸಿದೆ. ಹಣದ ಮದದಿಂದ ವ್ಯಕ್ತಿ ಹೆಣ್ಣಿನ ದಾಸನಾಗುತ್ತಾನೆ. ಹಣ ಸಮಾಜದಲ್ಲಿ ಆತನಿಗೆ ಮೇಲುನೋಟಕ್ಕೆ ಗೌರವ ಸಿಕ್ಕುತ್ತದಾದರೂ ಆಧ್ಯಾತ್ಮದ ಕಿಡಿ ಅವನಲ್ಲಿ ಆರಿ ಹೋಗುತ್ತದೆ.

ಮೇಲಿನ ಮಾತುಗಳನ್ನು ಗಮನಿಸಿದಾಗ ಹಣದ ಬಗ್ಗೆ ಷರೀಫರಿಗೆ ಅಸಡ್ಡೆ ಇತ್ತೆಂದು ಭಾವಿಸಬೇಕಾಗಿಲ್ಲ. ಮುಂದೆ ಹೇಳುವ ಅವರ ಮಾತುಗಳು ಇದನ್ನು ಸ್ಪಷ್ಟಪಡಿಸುತ್ತವೆ.

"ರೊಕ್ಕ ಮುಕ್ಕಿಸೀತು ಮಣ್ಣು
ಅದತಕ್ಕಂತೆ ಬಳಸಲು ತೆರೆಸೀತು ಕಣ್ಣು.
. . . ."

ಹಣ ಮಾನವನಿಗೆ ಅವಶ್ಯಕ. ಆದರೆ ಅದಕ್ಕೆ ಮಿತಿ ಇರಬೇಕು. ಅದನ್ನು ಪಡೆಯುವ ಮಾರ್ಗ ಪರಿಶುದ್ಧವಾಗಿರಬೇಕು. ಹಣವನ್ನು ಧರ್ಮ ಕಾರ್ಯಗಳಲ್ಲಿ ಉಪಯೋಗಿಸಬೇಕು. ಹೀಗೆ ಮಾಡಿದಾಗ ಹಣವೇ ದಾರಿ ತೋರುವ ಕಣ್ಣಾಗುತ್ತದೆ. (ಜುಟ್ಟಾಗ ಬಾರದೋ ಹಣ ನಿನ್ನ ತಲೆಗೆ ಮೆಟ್ಟಾಗಬೇಕೋ ಕಾಲಿನ ಅಡಿಗೆ) ಇಲ್ಲದಿದ್ದರೆ ದೇವರನ್ನು ಕಾಣಲು ಅಡ್ಡಿ ಉಂಟು ಮಾಡುತ್ತದೆ ಎನ್ನುತ್ತಾರೆ ಷರೀಫರು.

ಈ ಕಾರಣದಿಂದಲೇ ಹಿಂದೂ ಧರ್ಮದಲ್ಲಿ ಪುರುಷಾರ್ಥಗಳಲ್ಲಿ ಅರ್ಥವು ಒಂದಾಗಿರುವುದು. ಇದನ್ನು ಮರೆತ ಇಂದಿನ ಆಧುನಿಕ ಸಮಾಜ ಭೌತಿಕತೆಯ ಬೆನ್ನು ಹತ್ತಿದೆ. ಸಮಾಜದಲ್ಲಿ ಮಾನವೀಯ ಮೌಲ್ಯಗಳು ಧಾರ್ಮಿಕ ಮೌಲ್ಯಗಳು ಹಣದಾಹದ ಹೆಸರಿನಲ್ಲಿ ಅಳಿಸಿ ಹೋಗುತ್ತಿವೆ. ಹಣಕ್ಕಾಗಿ ಏನೆಲ್ಲಾ ಮಾಡಲು ಮಾನವ ಇಂದು ಸಿದ್ಧನಿರುವುದು ವಿಷಾದನೀಯವೇ ಸರಿ.

ಹೆಣ್ಣನ್ನು ಕುರಿತು ಷರೀಫರ ಚಿಂತನೆ ಈ ರೀತಿ ಇದೆ.

> **"ನರಿ ಸತ್ತು ಹೋಯ್ತೋ . . .**
> . . . ."

ಎನ್ನುವ ಪದದಲ್ಲಿ ಹೆಣ್ಣು ಕೇವಲ ಕಾಮದ ವಸ್ತುವಲ್ಲ. ಅವಳು ದೇವರು ನೀಡಿದ ಕರುಣೆಯ ಕಣ್ಣೆಂದು ಬಣ್ಣಿಸುತ್ತಾರೆ. ಷರೀಫರು ಹೆಣ್ಣು, ಹೊನ್ನು ಮತ್ತು ಮಣ್ಣುಗಳು ಶತ್ರುವಲ್ಲ. ಅವುಗಳನ್ನು ಹಿತವರಿತು ಬಳಸಿದರೆ ಗುರು ಕೊಟ್ಟ ಕಣ್ಣುಗಳಾಗುತ್ತವೆ ಇಲ್ಲದಿದ್ದರೆ ಅವೇ ಶತ್ರುಗಳಾಗಿ ನಮ್ಮ ನಾಶಕ್ಕೆ ಕಾರಣವಾಗುತ್ತವೆ.

> **"ನಾನಾ ಎಂಬುದು ನಾನಲ್ಲ**
> . . . .
> . . . ."

ಎಂಬ ಪದದಲ್ಲಿ "ನಾನು" ಯಾರು? ಎನ್ನುವ ಜಿಜ್ಞಾಸೆಯಲ್ಲಿ ತೊಡಗುತ್ತಾರೆ ಷರೀಫರು. ನಾನು ಎನ್ನುವುದು ಈ ಮನುಷ್ಯ ಜನ್ಮವಲ್ಲ. ತಂದೆ-ತಾಯಿ, ಹೆಂಡತಿ, ಮಕ್ಕಳು ಅವರೊಂದಿಗೆ ಅಂಟಿಕೊಂಡಿರುವ ಜಾತಿ ಗೋತ್ರಗಳಾವುವು ನಾನಲ್ಲ. ವೇದದ ಓದಾಗಲಿ. ಅದನ್ನು ಕುರಿತ ಒಣ ಚರ್ಚೆಯಾಗಲಿ ನಾದಬಿಂದು ಇದ್ಯಾವುದು ನಾನಲ್ಲ. ಕೊನೆಗೆ ನಾನಾ ರೂಪಗಳು ನಾನಲ್ಲ. 'ನಾನು' ಎನ್ನುವುದು ಅಳಿದಾಗಲೇ ಶಿಶುನಾಳಧೀಶನಿಗೆ ಶರಣಾದಾಗ ನಿಜವಾದ ನಾನು (ಆತ್ಮ) ಅರಿವಾಗುತ್ತದೆ ಎನ್ನುವ ಸ್ವ ಅನುಭವದ ಮಾತುಗಳನ್ನು ಷರೀಫರು ಹೇಳುತ್ತಾರೆ.

ಒಟ್ಟಿನಲ್ಲಿ ಷರೀಫರ ಪದಗಳು ಮೂಲತಃ ತತ್ವಪದಗಳಾಗಿದ್ದು, ನೈತಿಕತೆ ಅವುಗಳ ಉಸಿರು, ಮಾನವೀಯ ಸಂಬಂಧಗಳು, ಜೀವಾಳ, ಆಧ್ಯಾತ್ಮಿಕತೆ ಅವುಗಳ ಗುರಿ ಸತ್ಯಾನ್ವೇಷಣೆಯೇ ಅವುಗಳ ಮಾರ್ಗ. ❑

೯. ಅಬ್ಬೂರಿನ ಶ್ರೀ ಬ್ರಹ್ಮಣ್ಯ ತೀರ್ಥರು ಮತ್ತು ಮೊದಲಕಲ್ಲು ಶ್ರೀ ಶೇಷದಾಸರು

– ಪ್ರೊ. ವಿ. ಎನ್. ಶೇಷಗಿರಿರಾವ್

೧

ಮಹಾಮಹಿಮರನ್ನು, ಮಹಾತ್ಮರನ್ನು ನೆನೆಯುವುದೇ ಒಂದು ದೊಡ್ಡ ಭಾಗ್ಯ; ಅಂಥವರ ಸಂಪರ್ಕವೇ ಒಂದು ದಿವ್ಯಾನುಭವ. ಅವರ ಮೂಲಕ ಭಗವಂತನ ನಾಮೋಚ್ಚಾರಣೆ, ಗುಣಕೀರ್ತಿ ಭವರೋಗಕ್ಕೆ ದಿವ್ಯ ಔಷಧ. ಭಕ್ತಜನರ ಮೇಲೆ ಮಹಾತ್ಮರದು ನಿರ್ಮಲ ಪ್ರೀತಿ, ಅಪಾರ ವಾತ್ಸಲ್ಯ. ಅಂಥವರಲ್ಲಿ ಶ್ರೀ ಬ್ರಹ್ಮಣ್ಯತೀರ್ಥರದು ಬಹುದೊಡ್ಡ ಹೆಸರು.

೨

ಶ್ರೀ ಬ್ರಹ್ಮಣ್ಯತೀರ್ಥರು ಪ್ರಸಿದ್ಧ ಯತಿವರ್ಯರು ಹಾಗೂ ಮಹಾನ್ ತಪಸ್ವಿಗಳು. ಅವರು ಹಂಸಪುಂಗವರು, ಮಂಗಲ ಚರಿತರು, ಮಂತ್ರಸಿದ್ಧರು ಹಾಗೂ ಕೃಪಾಪೂರ್ಣರು. ವಿಜಯನಗರ ಸಾಮ್ರಾಜ್ಯದ ವೈಭವೋಪೇತ ದೊರೆ ಶ್ರೀಕೃಷ್ಣದೇವರಾಯನ ಕುಲಗುರುಗಳಾದ ಶ್ರೀ ವ್ಯಾಸರಾಯರು ಶ್ರೀ ಬ್ರಹ್ಮಣ್ಯತೀರ್ಥರ ಶಿಷ್ಯರು; ಅವರಿಂದ ಸನ್ಯಾಸದೀಕ್ಷೆ ಪಡೆದವರು. ಶ್ರೀ ಬ್ರಹ್ಮಣ್ಯತೀರ್ಥರು ಬ್ರಹ್ಮಜ್ಞಾನಿಗಳು, ವೇದಾಂತ ಕೋವಿದರು, ವಿರಕ್ತ ಶಿರೋಮಣಿಗಳು, ಯೋಗಿವರೇಣ್ಯರು, ಅಮೃತಹಸ್ತರು; ಕಲ್ಪವೃಕ್ಷ, ಕಾಮಧೇನುಗಳು. ಶ್ರೀ ವ್ಯಾಸರಾಯರು ತಮ್ಮ ಗುರುಗಳನ್ನು "ಸದಾ ವಿಷ್ಣು ಪದಾಸಕ್ತಂ ಸೇವೇ ಬ್ರಹ್ಮಣ್ಯಭಾಸ್ಕರಂ" ಎಂದು ಸ್ತುತಿಸಿದ್ದಾರೆ.

'ಸದಾ ಸುಖಬೇಕು, ದುಃಖ ಕಿಂಚಿತ್ತೂ ಬೇಡ' ಎಂದು ಸಾಮಾನ್ಯವಾಗಿ ಎಲ್ಲ ಜನರೂ ಬಯಸುತ್ತಾರೆ. ಸುಖ ಭೌತಿಕ ವಸ್ತುಗಳನ್ನು ಪಡೆಯುವುದರಲ್ಲಿದೆ, ಅವುಗಳನ್ನು ಅನುಭವಿಸುವುದರಲ್ಲಿದೆ ಎಂದು ಸಾಮಾನ್ಯ ಮಾನವರು ಬಗೆಯುತ್ತಾರೆ. ಇದು

ತಪ್ಪು ಕಲ್ಪನೆ ಎಂದು ಶ್ರೀ ಬ್ರಹ್ಮಣ್ಯತೀರ್ಥರು ನಮ್ಮನ್ನು ಎಚ್ಚರಿಸುತ್ತಾರೆ. ಸುಖ, ಶಾಂತಿ, ಸಮಾಧಾನ ನೆಮ್ಮದಿಗಳ ಮುಖ್ಯ ಸಾಧನ ಭೌತಿಕ ವಸ್ತುಗಳಲ್ಲ; ಆ ಆಧ್ಯಾತ್ಮ. ಬ್ರಹ್ಮಣ್ಯತೀರ್ಥರು ಮಾನವನನ್ನು ಆಧ್ಯಾತ್ಮ ಚಿಂತನೆಗೆ ತೊಡಗಿಸುತ್ತಾರೆ. ತನ್ನ ಅಸ್ತಿತ್ವ, ಕ್ರಿಯೆ ಮತ್ತು ಆನಂದಕ್ಕೆ ಭಗವಂತನೊಬ್ಬನನ್ನೇ ಆಶ್ರಯಿಸುವುದು; ದೇಹದ ನಶ್ವರತೆ, ಜೀವದ ಅಭದ್ರತೆಯನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳುವುದು; ಎಲ್ಲ ಜೀವರ ಅಂತರ್ಯಾಮಿಯಾದ ಭಗವಂತನನ್ನು ತಿಳಿಯುವುದು, ಪ್ರೀತಿಸುವುದು ಆಧ್ಯಾತ್ಮವೆನಿಸುವುದು. ಮೃತ್ಯುತ್ವದಿಂದ ಅಮೃತತತ್ವದೆಡೆಗೆ ಸಾಗುವುದು. ಅದರಿಂದ ಉಂಟಾಗುವ ನಿರ್ಭಯತೆ, ಆಧ್ಯಾತ್ಮ ಚಿಂತನೆಯ ಫಲ. ಇದಕ್ಕೆ ಭೂಮಿಯಲ್ಲಿರುವ ಭಕ್ತರೇ ಸಾಕ್ಷಿ; ಗುರುಶಿಷ್ಯ ಪರಂಪರೆಯೇ ಸಾಕ್ಷಿ. ರಾಮಾಯಣದ ಹನುಮಂತ ಇದಕ್ಕೆ ಸ್ಪಷ್ಟ ನಿದರ್ಶನ. 'ಭಗವಂತ ನಮ್ಮ ಕುಲದೈವ, ವಾಯು ನಮ್ಮ ಕುಲಗುರು' ಎಂದು ಶ್ರೀ ಬ್ರಹ್ಮಣ್ಯತೀರ್ಥರು ಬಹು ಅರ್ಥಗರ್ಭಿತವಾಗಿ ಹೇಳುತ್ತಾರೆ. ಹೀಗೆ ಶ್ರೀ ಬ್ರಹ್ಮಣ್ಯತೀರ್ಥರು ಆಧ್ಯಾತ್ಮ ಶಿಲ್ಪಿಗಳು. ಮಾನವ ಪ್ರೀತಿಯನ್ನು ಸಾರುವ ವೈಷ್ಣವ ಧರ್ಮದ ಮೇಧಾವೀ ಪರಮ ಭಗವತ್ ಭಕ್ತರು; ಶಾಸ್ತ್ರ ಚಿಂತಾಮಣಿ, ಭಗವತ್ ಸಂಕಲ್ಪ ವಾಹಕರು. ವಿರಕ್ತಿಯಲ್ಲಿ ಅವರು ಸನಕ ಬುದ್ಧಿಯಲ್ಲಿ ಬೃಹಸ್ಪತಿ; ಭಕ್ತಿಯಲ್ಲಿ ಶುಕಮುನಿ; ತೇಜಸ್ಸಿನಲ್ಲಿ ಭಾಸ್ಕರ.

೩

ಪುಣ್ಯಚರಿತರಾದ ಶ್ರೀ ಬ್ರಹ್ಮಣ್ಯತೀರ್ಥರ ಕಾರ್ಯಕ್ಷೇತ್ರ, ತಪೋಭೂಮಿ ಚನ್ನಪಟ್ಟಣದ ಬಳಿಯ ಅಬ್ಬೂರು. ಅದನ್ನು 'ಧ್ಯಾನ ಮಂಟಪವೆಂದೂ ಹೇಳುವರು. ಅವರ ಪೂರ್ವಾಶ್ರಮದ ಹೆಸರು ನರಸಿಂಹ ಎಂದು. ಮುಂದೆ ಇವರು ತಪೋನಿಧಿ ಶ್ರೀ ಪುರುಷೋತ್ತಮ ತೀರ್ಥರಿಂದ ಸನ್ಯಾಸದೀಕ್ಷೆ ಪಡೆದು ಶ್ರೀ ಬ್ರಹ್ಮಣ್ಯತೀರ್ಥರಾದರು. ಅವರದು ತಲಸ್ಪರ್ಶಿ ಪಾಂಡಿತ್ಯ ವಿವೇಕಿಗಳೂ, ಧರ್ಮನಿಷ್ಠರೂ, ಸ್ವಾನ್ನಾರ್ಥ ವಿಶ್ಲೇಷಣ ಕೋವಿದರೂ, ಜಪತಪಗಳ ಅನುಷ್ಠಾನಪ್ರದರೂ ಆದ ಶ್ರೀ ಬ್ರಹ್ಮಣ್ಯತೀರ್ಥರು ಆಸೇತು ಹಿಮಾಚಲವನ್ನು ಕಾಲುನಡಿಗೆಯಲ್ಲಿ ಸುತ್ತಿ ಪ್ರತಿವಾದೀ ಭಯಂಕರರಾಗಿ ಭಗವಂತನ ಮಹಿಮಾ ಜ್ಞಾನವನ್ನು ಮೇಲಿಂದ ಮೇಲೆ ಶ್ರುತಪಡಿಸಿದವರು. 'ತತ್ವಪ್ರಕಾಶಿಕಾ ಟಿಪ್ಪಣಿ' ಯ ಕೃತಿಕಾರರು ಅವರು.

ಸರ್ವಜ್ಞ ಕಲ್ಪರೂ ಮಹಾ ಮೇಧಾವಿಗಳೂ, ವಿಭೂತಿಪುರುಷರೂ ಆದ ಶ್ರೀ ಬ್ರಹ್ಮಣ್ಯತೀರ್ಥರು ಸ್ವಪ್ರತಿಷ್ಠೆಯ, ಬೀಗುವ, ಸೋಗಿನ ಸಾಧಕರಲ್ಲ. ಜನ್ಮದಾರಭ್ಯ ದಾರಿದ್ರ್ಯ ದುಃಖಗಳಿಂದ ಪೀಡಿತರಾಗಿ ನೋವುಂಡವರು. ಆಶ್ರಿತವತ್ಸಲರು, ಕರುಣಾಮಯಿಗಳು ಅವರು. ಅವರ ಸಂಪರ್ಕ ಭಕ್ತವರ್ಗದವರಿಗೆ ಯಾವಾಗಲೂ ಒಂದು ಅದ್ಭುತ ಪವಾಡವೇ ಆಗಿತ್ತು. ಜನಗಳ ಕಷ್ಟ ಪರಿಹರಿಸುವ, ಜನಾರ್ಧನನಲ್ಲಿ

ಅಸಾಮಾನ್ಯ ಭಕ್ತಿ ಹುಟ್ಟಿಸುವ ಅವರು ಖಂಡಿತವಾಗಿ ಅಸಾಮಾನ್ಯ ಗುರುಭಕ್ತರಾಗಿದ್ದರು. ಅವರನ್ನು ನೇರವಾಗಿ ಸಂದರ್ಶಿಸಿ ತಮ್ಮ ಅಭೀಷ್ಟಗಳನ್ನು ಜನರು ಪೂರೈಸಿಕೊಳ್ಳುತ್ತಿದ್ದರು; ರೋಗಗಳನ್ನೂ, ಸಂಕಟಗಳನ್ನೂ ನೀಗಿಸಿ ಕೊಂಡಿರುವ ಭಕ್ತ ಜನರಿದ್ದಾರೆ. ಅವರ ಕೃಪಾದೃಷ್ಟಿ ಹಿರಿಮೆಗಳಂತೂ ವರ್ಣಿಸಲು ಅಸದಳ. ದೀನರ ಬವಣೆ, ಅನಾದರಗಳನ್ನು ಅವರು ಸರಿಮಿಗಿಲಿಲ್ಲದೆ ನಿವಾರಿಸಿದ್ದಾರೆ. ಭಕ್ತರ ಆರ್ತತೆಯ ಮೊರೆಯನ್ನು ಅವರು ಕೇಳಿಸಿಕೊಂಡು ಮನಸ್ಸಿನ ಕಾಯಕ್ಲೇಶಗಳನ್ನು ಬಡಿದೋಡಿಸಿದ್ದಾರೆ. ಭಗವಂತನ ಕರುಣಾರಸ, ಅನುಗ್ರಹ ಬ್ರಹ್ಮಣ್ಯತೀರ್ಥರ ಮೂಲಕ ಸೂಸುತ್ತಿತ್ತು ಎನ್ನಬಹುದು.

೪

ಶ್ರೀ ಬ್ರಹ್ಮಣ್ಯತೀರ್ಥರು ಅಪರೋಕ್ಷ ಜ್ಞಾನಿಗಳು, ಪ್ರಾತಃಸ್ಮರಣೀಯರು. ರಾಗದ್ವೇಷಗಳನ್ನು ವರ್ಜಿಸಿ; ಲೀಲೆ, ಶ್ರವಣ ಕಥೆಗಳಿಂದ ಭಗವಂತನನ್ನು ಕೊಂಡಾಡಿ. ಯಜ್ಞ, ದಾನ, ತಪಸ್ಸು ವೇದಾಧ್ಯಯನದ ಮಹಾ ಸಾರಭೂತವಾದ ಆಧ್ಯಾತ್ಮವನ್ನು ಅನುಸಂಧಾನಕ್ಕೆ ತನ್ನಿ. ದುರಾಸೆ, ಸಿಟ್ಟು, ಡಾಂಭಿಕತೆ, ಲೋಭ, ವಕ್ರತೆಗಳನ್ನು ವಶದಲ್ಲಿರಿಸಿಕೊಳ್ಳಿ; ಸ್ವೇಚ್ಛಾಚಾರ ಸಲ್ಲದು; ಸ್ವಾಧ್ಯಾಯ ನಿರಂತರವಾಗಿರಲಿ" ಎಂದು ಅವರು ಉಪದೇಶಿಸಿದರು. ಜನರನ್ನು ಅಜ್ಞಾನದ ನಿದ್ದೆಯಿಂದ ಬಡಿದೋಡಿಸುವ ಕಲ್ಯಾಣಕಾರರು ಅವರು; ಅವರು ಸರ್ವಾಭಿಷ್ಟ ಪ್ರದಾತರು.

ದ್ವೈತ ವೇದಾಂತದ ಮೂಲ ಆಚಾರ್ಯರಾದ ಶ್ರೀ ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದ ಶ್ರೀ ಬ್ರಹ್ಮಣ್ಯತೀರ್ಥರಿಗೆ ವಿಶಿಷ್ಟವಾದ ಸ್ಥಾನವಿದೆ. ಅವರ ವ್ಯಕ್ತಿತ್ವವೇ ಅಂಥದು.

೫

ಭಾಗವತ ಧರ್ಮ ಎಲ್ಲರಿಗೂ ಪ್ರಿಯವಾದ ಧರ್ಮ. ಭಕ್ತಿಯಿಂದ ಭಗವಂತನನ್ನು ಗುಣಗಾನ ಮಾಡುವುದೇ ಭಾಗವತ ಧರ್ಮ. ಭಕ್ತಿ ಎಂದರೆ ಭಕ್ತನಿಗೂ ಭಗವಂತನಿಗೂ ಇರುವ ಮಹಾತ್ಮ್ಯಜ್ಞಾನ ಪೂರ್ವಕವಾದ, ಸದೃಢವಾದ ಸ್ನೇಹ ಸಂಬಂಧ. ಭಗವದ್ ಭಕ್ತರನ್ನು ಹರಿದಾಸ ಎನ್ನುವುದು ರೂಢಿ. ಹರಿದಾಸನಾಗುವುದಕ್ಕೆ ಜಾತಿ ಮತ ಕುಲಗಳ ಭೇದವಿಲ್ಲ; ಲಿಂಗಭೇದವಿಲ್ಲ; ವಯಸ್ಸಿನ ಪರಿಗಣನೆಯಿಲ್ಲ; ಶ್ರೀಮಂತ-ಬಡವ ಎಂಬ ಭೇದವಿಲ್ಲ. ಭಾಗವತ ಧರ್ಮದಲ್ಲಿ ಎಲ್ಲರಿಗೂ ಸ್ಥಾನವಿದೆ. ಪ್ರಹ್ಲಾದ, ಅಂಬರೀಶ ಮುಂತಾದ ರಾಜ ಮಹಾರಾಜ ಚಕ್ರವರ್ತಿಗಳು ಹರಿದಾಸರಾಗಿದ್ದಾರೆ; ದಣಾಯಕರೂ, ದಂಡಾಧಿಕಾರಿಗಳಾಗಿದ್ದ ತಿಮ್ಮಪ್ಪ, ಮುಸ್ಲಿಂ ಪಂಥಕ್ಕೆ ಸೇರಿದ ಜೋಳದ ಹೆಡಗಿ ಬಡೇಸಾಹೇಬರು (ಕ್ರಿ. ಶ. ೧೮೮೨) ನವಕೋಟಿ ನಾರಾಯಣರೆನಿಸಿದ ಶೀನಪ್ಪ ನಾಯಕರು ಹರಿದಾಸರಾಗಿದ್ದಾರೆ. ಜನ್ಮದಾರಭ್ಯ

ದಾರಿದ್ರ್ಯ ದುಃಖಗಳಿಂದ ಪೀಡಿತರಾದವರೂ ಹರಿದಾಸರಾಗಿದ್ದಾರೆ. ಶ್ರೀಮಧ್ವರು, ಶ್ರೀ ಪದ್ಮನಾಭತೀರ್ಥರು, ಶ್ರೀ ನರಹರಿತೀರ್ಥರು, ಶ್ರೀ ಮಾಧವತೀರ್ಥರು, ಶ್ರೀ ಅಕ್ಷೋಭ್ಯತೀರ್ಥರು, ಶ್ರೀ ಬ್ರಹ್ಮಣ್ಯತೀರ್ಥರು, ಶ್ರೀ ಶ್ರೀಪಾದರಾಜರು, ಶ್ರೀ ವ್ಯಾಸರಾಜರು, ಶ್ರೀ ವಾದಿರಾಜರು, ಶ್ರೀ ರಾಘವೇಂದ್ರತೀರ್ಥರು ಇವರೆಲ್ಲರೂ ಪೀಠಾಧಿಪತಿಗಳಾಗಿದ್ದೂ ಹರಿದಾಸರಾಗಿದ್ದಾರೆ. ತ್ರಿವಿಕ್ರಮ ಪಂಡಿತರು, ಶ್ರೀ ವಿಜಯದಾಸರು, ಶ್ರೀ ಜಗನ್ನಾಥದಾಸರು ಮುಂತಾದ ಪಂಡಿತೋತ್ತಮರು ಹರಿದಾಸರಾಗಿದ್ದಾರೆ. ಯೋಗಿಗಳು ಅವಧೂತರು ಹರಿದಾಸರಾಗಿದ್ದಾರೆ. ಹೆಳವನ ಕಟ್ಟೆ ಗಿರಿಯಮ್ಮ ಹರಪನಹಳ್ಳಿ ಭೀಮವ್ವ, ಗಲಗಲಿ ಅವ್ವನವರು, ತುಳಸೀಬಾಯಿ, ತುರುಡಗಿ ತಿಮ್ಮಮ್ಮ, ಓರೆವಾಯಿ ಲಕ್ಷ್ಮೀದೇವಮ್ಮ, ಹರಿದಾಸಿ ಅಂಬಾಬಾಯಿ ಮುಂತಾದ ಸ್ತ್ರೀಯರೂ ಹರಿದಾಸಿನಿಯರಾಗಿದ್ದಾರೆ. ಹರಿದಾಸರದು ನಡೆಯಲ್ಲಿ ದೇವರ ಸೇವೆ, ನುಡಿಯಲ್ಲಿ ಹರಿಸ್ತುತಿ. ಅವರು ನಡೆನುಡಿ ಆಚಾರ ವಿಚಾರಗಳಿಂದ ಗೌರವಿಸಲ್ಪಡುತ್ತಾರೆ. ಹೆಜ್ಜೆ ಹೆಜ್ಜೆಗೂ ಭಗವಂತನನ್ನು ಸ್ಮರಿಸಿ ಸಜ್ಜನರಾಗುವ ಮಾರ್ಗವನ್ನು ತೋರಿಸುತ್ತಾರೆ; ಸಂಸಾರದ ದುಗುಡದಿಂದ ಜನರನ್ನು ಅವರು ಪಾರು ಮಾಡುತ್ತಾರೆ. ಜೀವನದ ದುಃಖದ ಸರಮಾಲೆಗೆ ಅವರು ನಿಷ್ಕಲ್ಮಶ ನಡತೆಯಿಂದ ನಿಶ್ಚಿತ ಪೂರ್ಣವಿರಾಮ ಹಾಕುತ್ತಾರೆ. ಅವರ ಸಂಗ, ಸತ್ಸಂಗ. ಹಾಲು-ಜೇನು ಸಹಯೋಗ ಅವರ ಮಾತು, ಅವರ ಕೀರ್ತನೆ. ಅವರ ನುಡಿ ಜ್ಞಾನದ ಕಿಡಿ; ಅವರದು ಉದಾರ ಮನಸ್ಸು, ಆಕಾಶದಷ್ಟು ವಿಶಾಲವಾದುದು. ಜಗತ್ತಿನ ಎಲ್ಲ ಯೋಗ್ಯ ಜೀವಿಗಳಿಗೆ ಮೋಕ್ಷ ದೊರೆಯುವ ತನಕ, ತಮಗೆ ಮುಕ್ತಿ ಬೇಡ ಎನ್ನುವ ನಿಲುವು ಹರಿದಾಸರದು. ಭಕ್ತಿ ಭಂಡಾರವನ್ನು ಹರಿದಾಸರು ಸರಳ ಕನ್ನಡ ಪದಗಳ ಮೂಲಕ ಜನತೆಗೆ ಉಣಬಡಿಸಿದ್ದಾರೆ. ಅಂತಹ ಹರಿದಾಸರಲ್ಲಿ ಮೊದಲಕಲ್ಲು ಶ್ರೀ ಶೇಷದಾಸರ (೧೮೦೭-೧೮೮೫) ಒಬ್ಬರು. ಅವರು ಅಪರೋಕ್ಷ ಜ್ಞಾನಿಗಳು, ಮಹಾ ಮಹಿಮರು. ೦೨-೦೫-೦೯ ಅವರ ಪುಣ್ಯದಿನ.

೬

ರಾಜರ ನಂಬಿಕೆಗೆ ಪಾತ್ರರಾಗಿ ಕುಲಕರಣಿ ಮನೆತನದಿಂದ ಬಂದ ಠಾಕುಠೀಕಾದ ಶೇಷಪ್ಪನವರು ಹರಿದಾಸರಾದುದು ಒಂದು ಸ್ಮರಣೀಯ ಪ್ರಸಂಗ.

ಶ್ರೀ ಶೇಷದಾಸರು ಹುಟ್ಟಿದ್ದು ರಾಯಚೂರಿನ ಗದ್ವಾಲ ಸಂಸ್ಥಾನದ, ದರೂರು ಎಂಬ ಒಂದು ಚಿಕ್ಕ ಹಳ್ಳಿಯಲ್ಲಿ. ತುಂಗಭದ್ರಾ ನದಿಗಳು ಈ ಗ್ರಾಮದ ಎರಡೂ ಬದಿಯಲ್ಲಿ ಹರಿಯುತ್ತವೆ. ಅದರ ಸಮೀಪದಲ್ಲಿರುವುದೇ ಮೊದಲ ಕಲ್ಲು. ಅಲ್ಲಿಯ ಸಣ್ಣ ಗುಡ್ಡದ ಮೇಲೆ, ಸ್ವಯಂ ವ್ಯಕ್ತಗೊಂಡ ಶ್ರೀನಿವಾಸನಿದ್ದಾನೆ. ಅದು ಪಾವನ ಕ್ಷೇತ್ರ

ದುರ್ಜನರ ದುರ್ಬೋಧೆಯಿಂದ ಗದ್ವಾಲರ ರಾಜ ಶೇಷಪ್ಪನವರನ್ನು ವಿನಾಕಾರಣ ಅವಮಾನಿಸುತ್ತಾನೆ. ಅದಷ್ಟೇ ಸಾಕಾಯಿತು ಶೇಷಪ್ಪನವರಲ್ಲಿ ವೈರಾಗ್ಯ ಉದಯಿಸಲು; ಅವರು ಮತ್ತೆ ರಾಜನ ಬಳಿ ಹೋಗಲಿಲ್ಲ; ತಮ್ಮ ಊರಿಗೂ ಹೋಗಲಿಲ್ಲ; ನೇರವಾಗಿ ಹೊರಟಿದ್ದು ಗ್ರಾಮ ಚಿಂತಲರೇವಿನ ಮಾರುತಿಯ ದೇವಸ್ಥಾನಕ್ಕೆ. ಅಲ್ಲಿ ಅವರು ಎರಡು ವರ್ಷ ಅಖಂಡ ಮಂತ್ರೋಪಾಸನೆಯನ್ನು ಮಾಡಿದರು. ಶ್ರೀ ವಿಜಯದಾಸರು ಕನಸಿನ ಮೂಲಕ ಶೇಷಪ್ಪನವರಿಗೆ ಧೈರ್ಯ ತುಂಬಿದರು. ಶ್ರೀ ಶೇಷಪ್ಪನವರು ಕಠಿಣ ವ್ರತೋಪಾಸನೆಯನ್ನು ಮಾಡಿದರು. ತಪಶ್ಚರ್ಯದಿಂದ, ಮಹಾರುದ್ರೋಪಾಸನೆಯಿಂದ ಅವರು ಬಿಂಬಾಪರೋಕ್ಷ ಪಡೆದು ಜ್ಞಾನಿಗಳಾದರು. ಬೇವಿನಸೊಪ್ಪಿನ ಉಂಡೆ, ಬಿಲ್ವಪತ್ರೆಯ ಉಂಡೆಗಳೇ ಅವರ ಆಹಾರವಾಯಿತು; ನೆಲವೇ ಹಾಸಿಗೆಯಾಯಿತು. ಅವರಿಗೆ ವಾಕ್‌ಸಿದ್ಧಿಯಾಯಿತು; ಬಾಯಿಂದ ಬಂದ ಮಾತು ದಿಟವಾಗತೊಡಗಿತು. ಶ್ರೀ ವಿಜಯದಾಸರು ಗುರುವಿಜಯವಿಠಲ ಎಂಬ ಅಂಕಿತವನ್ನು ಸ್ವಪ್ನ ರೂಪವಾಗಿ ನೀಡಿದರು. ಶ್ರೀ ಶೇಷಪ್ಪನವರು ಶ್ರೀ ಶೇಷದಾಸರಾದರು.

ಶಾಂತಿ, ನೆಮ್ಮದಿ, ಪರಿಹಾರೋಪಾಯಗಳನ್ನು ಹುಡುಕಿಕೊಂಡು ಜನರು ತಂಡೋಪತಂಡವಾಗಿ ಶ್ರೀ ಶೇಷದಾಸರ ಬಳಿಗೆ ಬರತೊಡಗಿದರು. ಶ್ರೀ ಶೇಷದಾಸರು ಸಿದ್ಧಿಗಳನ್ನು ಸಾಧಿಸಿದರು; ಬ್ರಹ್ಮರಾಕ್ಷಸ ಬಾಧೆಯನ್ನು ಬಿಡಿಸಿದರು. ಕಾಶಿಯ ಗಂಗೆಯನ್ನು ಪ್ರಾರ್ಥಿಸಿ ತಮ್ಮ ಊರಿಗೆ ಕರೆ ತಂದರು. ಅವರ ಕೀರ್ತಿ, ಸಿದ್ಧಿ ಪ್ರಸಿದ್ಧಿಗಳು ಎಲ್ಲೆಡೆ ಹರಡಿದವು.

ಶ್ರೀ ಶೇಷದಾಸರ ಬಾಯಿಂದ ಹೊರಹೊಮ್ಮಿದ ಮೊಟ್ಟ ಮೊದಲ ದೇವರ ನಾಮವೆಂದರೆ:

ನಂಬಿದೆ ನಿನ್ನ ಪಾದ ಮುಖ್ಯ ಪ್ರಾಣ
ನಂಬಿದೆ ನಿನ್ನ ಪಾದ ಡಂಭವ ತೊಲಗಿಸು
ಡಿಂಬದೊಳಗೆ ಹರಿಯ। ಬಿಂಬ ತೋಳಿವಂತೆ ಮಾಡಿ
. . . .
. . . .
ಶ್ರೀ ಗುರು ವಿಜಯ ವಿಠಲನ ಪಾದಕೆ
ಬಾಗಿದ ಭವದೂರ ಜಾಗರ ಮೂರುತಿ

ಅವರ ಪ್ರಸಿದ್ಧ ಸುಳಾದಿಯೆಂದರೆ ಇನ್ನೊಂದು:
ಘನ ದಯಾನಿಧಿಯಾದ ಪವನರಾಯನೆ ನಮೋ।
ಪುನರಪಿ ನಮೋ ನಿನ್ನ ಪಾದಸರಸೀರುಹಕ್ಕೆ॥
. . . .

ನಿನ್ನ ಚರಣ ಮೂಲದಲ್ಲಿ ಜೀವ ಆಶ್ರಯಿಸಿ ಇಪ್ಪನಾಗಿ।
ಸ್ಥಳವ ಸೇರಿಪ ಭಾರ ನಿನ್ನವಯ್ಯಾ ಒಲ್ಲೆನೆಂದರೆ ಬಿಡದು
ಭಕುತರ ಅಭಿಮಾನ। ಒಲಿದು ಪಾಲಿಸಬೇಕು ಘನಮಹಿಮ
ಖಳದರ್ಪ ಭಂಜನ ಗುರು ವಿಜಯ ವಿಠಲ
ಒಲಿವ ನಿನ್ನಯ ಕೃಪೆಗೆ ವಿಮಲಚರಿತ॥

ಅರ್ಜುನಾಂಶರಾದ, ಸಾತ್ವಿಕ ಸ್ವಭಾವದವರಾದ ಶ್ರೀ ಶೇಷದಾಸರು 'ಪಂಚ ಪ್ರಮೇಯ' ಗಳು ಎಂಬ ಕೃತಿಯನ್ನು ಬರೆದಿದ್ದಾರೆ. ೪೩ ಸುಳಾದಿಗಳನ್ನು, ೧೩ ಉಗಾಭೋಗಗಳನ್ನು, ಕೆಲವು ಕೀರ್ತನೆಗಳನ್ನು ಬರೆದಿದ್ದಾರೆ.

ಅವರ ಸುಳಾದಿಗಳು ಉಪಾಸನೆಗೆ ಹೇಳಿ ಮಾಡಿಸಿದಂತಿವೆ.

ರವಿವಾರದ ಸುಳಾದಿ, ಸೋಮವಾರದ ಸುಳಾದಿ, ಶನಿವಾರದ ಸುಳಾದಿಗಳೆಂದು ಅವು ಪ್ರಸಿದ್ಧವಾಗಿವೆ.

ಶ್ರೀ ಶೇಷದಾಸರ ಕೃತಿಗಳ ಮುಖ್ಯ ವಸ್ತು ಪ್ರೇಮ, ಭಗವಂತನ ಪ್ರೀತಿ ಹಾಗೂ ಪ್ರಮೇಯ. ಸುಳಾದಿಗಳಲ್ಲಿ ಅವರು ವೇದಾಂತದ ಒಗಟನ್ನು ಬಿಡಿಸಿದ್ದಾರೆ; ವೇದಾಂತದ ತಾತ್ವಿಕತೆಯ ಮೆರುಗನ್ನು ಸೂಸಿದ್ದಾರೆ. ಅವುಗಳಲ್ಲಿ ರಸದ ಹೊನಲು ಹರಿದಿದೆ.

೮

ಶ್ರೀ ಶೇಷದಾಸರ ಚಿಂತನೆ ಸಮಾಜಮುಖಿಯಾಗಿದೆ. ದೀನರ ಬವಣೆಯನ್ನು ಅವರು ನೀಗಿಸಿದರು; ಅನ್ಯಾಯಕ್ಕೆ ಒಳಗಾದವರನ್ನು ಗೌರವದಿಂದ ನಡೆಸಿಕೊಂಡರು. ಲೋಕ ಸಂರಕ್ಷಣೆಗೆ ನಿಂತ ಭಗವಂತನ ಅನುಗ್ರಹೋನ್ಮುಖರು ಅವರು. ಜ್ಞಾನ ಸತ್ರಕ್ಕೆ ಹೆಚ್ಚು ಗಮನವನ್ನು ಕೊಟ್ಟು ಸದಾಚಾರ–ಸದ್ವಿಚಾರಗಳನ್ನು ಒತ್ತಿ ಹೇಳಿದ ಧರ್ಮಾತ್ಮರು ಅವರು. ಆತ್ಮೋನ್ನತಿ ದಾರಿಯನ್ನು ತೋರಿದ, ಲೋಕ ಹಿತ ಚಿಂತಕರು ಅವರು. ಸೇವಾಮನೋಭಾವ, ಆದರ್ಶ, ನೀತಿ, ಧರ್ಮ, ತ್ಯಾಗ, ಸೋದರತ್ವಗಳು ಅವರ ಕೃತಿಗಳಲ್ಲಿ ಪರಿಪಕ್ವವಾಗಿ ತುಂಬಿ ತುಳುಕಿ ಲಯಬದ್ಧವಾಗಿ ಪ್ರವಹಿಸಿವೆ. ಸಜ್ಜನಾಕರ್ಷದ, ಪರಮ ಮಂಗಳಕರ ಭಕ್ತಿಪುಷ್ಪಗಳು ಅವಾಗಿವೆ. ಭಾರತೀಯ ಧರ್ಮ ಮತ್ತು ಸಂಸ್ಕೃತಿಯ ಪ್ರಸಾರದ ಕನ್ನಡದ ರಾಯಭಾರಿಗಳಾಗಿದ್ದಾರೆ ಶ್ರೀ ಶೇಷದಾಸರು.

❑

೧೦. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಧರ್ಮ ಮತ್ತು ಅದರ ಸ್ವರೂಪ

– ಮಲ್ಲಿಕಾರ್ಜುನ ಸ್ವಾಮಿ ಎಚ್. ಎಂ.

ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬ ಮಾನವನು ಇಂದು ಒಂದಲ್ಲ ಒಂದು ರೀತಿಯಲ್ಲಿ ಧರ್ಮವನ್ನು ಅವಲಂಬಿಸಿ ಜೀವಿಸುತ್ತಿದ್ದಾನೆ. ಈ 'ಧರ್ಮ' ಎಂಬ ಶಬ್ದವು 'ಧೃ' ಎಂಬ ಸಂಸ್ಕೃತ ಶಬ್ದದಿಂದ ಬಂದಿದೆ[೧]. 'ಧೃ' ಎಂದರೆ 'ಆಧಾರವಾಗಿರು' ಎಂಬ ಅರ್ಥ ಬರುತ್ತದೆ. ಯಾವುದು ಪ್ರತಿಯೊಂದಕ್ಕೂ ಸಂರಕ್ಷಣೆಯನ್ನು ನೀಡುವುದೋ, ಯಾವುದು ಇನ್ನೊಂದಕ್ಕೆ ಪೋಷಣೆ ಮಾಡುವುದೋ ಅದನ್ನೇ ಧರ್ಮ ಎಂಬುದಾಗಿ ಕರೆಯಬಹುದಾಗಿದೆ.

ಧರ್ಮವು ವಿಶಾಲವಾದುದು.ಇದು ಹಿಂದಿನಿಂದಲೂ ಮಾನವನನ್ನೊಳಗೊಂಡಂತೆ ಇಡೀ ಸಮಾಜವನ್ನು ತನ್ನ ತೆಕ್ಕೆಯಲ್ಲಿ ಸೇರಿಸಿಕೊಂಡಿದೆ. ಒಂದು ವಸ್ತುವಿನಲ್ಲಿರುವ, ಬದಲಾವಣೆ ಮಾಡಲು ಆಗದೇ ಇರುವ ಆ ವಸ್ತುವಿನ ಸ್ವಭಾವವನ್ನೇ ಧರ್ಮ ಎಂಬುದಾಗಿ ಕರೆಯಲಾಗಿದೆ. ಬೀಸುವುದು ಗಾಳಿಯ ಗುಣ, ಈ ಬೀಸುವಿಕೆಯೇ ಗಾಳಿಯ ಧರ್ಮ, ಸುಡುವುದು ಬೆಂಕಿಯ ಗುಣ, ಈ ಸುಡುವಿಕೆಯೇ ಬೆಂಕಿಯ ಧರ್ಮ. ಈ ಗುಣ, ಸ್ವಭಾವಗಳನ್ನು ನಾಶಮಾಡಲು ಸಾಧ್ಯವೇ ಇಲ್ಲ. ಈ ಸಾಧ್ಯವಿಲ್ಲದ ಲಕ್ಷಣಗಳೇ ಧರ್ಮವಾಗಿದೆ.[೨]

ಧರ್ಮ ಎಂಬುದನ್ನು ಕರ್ತವ್ಯ ಎಂಬ ದೃಷ್ಟಿಯಿಂದಲೂ ತಿಳಿಯಬಹುದಾಗಿದೆ. ಸಮಾಜದಲ್ಲಿ ಜೀವಿಸುವ ಪ್ರತಿಯೊಬ್ಬರು ಪಾಲಿಸಲೇಬೇಕಾದ ಕೆಲವು ಕರ್ತವ್ಯಗಳಿವೆ. ಅದುವೇ ಧರ್ಮ. ಉದಾಹರಣೆಗೆ: ವೃದ್ಧ ತಂದೆ-ತಾಯಿಗಳ ಆರೈಕೆ ಮಾಡುವುದು ಮಕ್ಕಳ ಕರ್ತವ್ಯ. ಹಾಗೆಯೇ ಪ್ರಜೆಗಳನ್ನು ರಕ್ಷಿಸುವುದು ಸಮಾಜದಲ್ಲಿರುವ ಪ್ರತಿಯೊಬ್ಬ

ನಾಯಕರ ಕರ್ತವ್ಯ ಈ ರೀತಿಯ ಧರ್ಮದ ಮೂಲಾಂಶಗಳೆಂದರೆ ನಿಗೂಢನಂಬಿಕೆ, ಪವಿತ್ರತೆ ಆಚರಣೆಗಳು. ಇವುಗಳನ್ನು ಅನುಸರಿಸುವ ವಿಧಾನದಲ್ಲಿ ಇದರಿಂದ ಅನುಕೂಲಗಳು ಹಾಗೂ ಅನಾನುಕೂಲಗಳು ಉಂಟಾಗುತ್ತವೆ.

ಹಲವಾರು ತಾತ್ವಿಕರು ಧರ್ಮವನ್ನು ಕುರಿತಂತೆ ವ್ಯಾಖ್ಯಾನವನ್ನು ನೀಡಿದ್ದಾರೆ. ಅವುಗಳೆಂದರೆ,

ಹರ್ಬರ್ಟ್‌ಸ್ಪೆನ್ಸರ್ ಪ್ರಕಾರ "ಎಲ್ಲಾ ವಸ್ತುಗಳು ನಮ್ಮ ಬುದ್ಧಿಗೆ ನಿಲುಕದ ಶಕ್ತಿಯೊಂದರಿಂದಾಗಿ ವ್ಯಕ್ತವಾಗಿವೆ ಎಂಬ ಅರಿವೆ ಧರ್ಮ.[೩]

ಮ್ಯಾಕ್ಸ್ ಮುಲ್ಲರ್ "ಅನಂತವನ್ನು ಗ್ರಹಿಸಲು ಮನುಷ್ಯನಿಗೆ ಸಹಾಯಕವಾಗುವ ಒಂದು ಮಾನಸಿಕ ಶಕ್ತಿ ಅಥವಾ ಮಾನಸಿಕ ಸ್ಥಿತಿಯೇ ಧರ್ಮ.[೪]

ಇ.ಕ್ಯಾಂಟ್ "ನಮ್ಮ ಪ್ರತಿಯೊಂದು ಕರ್ತವ್ಯವನ್ನು ಈಶ್ವರನ ಆಜ್ಞೆಯೆಂದು ಮನಗಾಣುವುದೇ ಧರ್ಮ[೫] ಎನ್ನುತ್ತಾರೆ.

ಮಹಾಭಾರತದ ಶಾಂತಿಪರ್ವದಲ್ಲಿ ಧರ್ಮವೆಂದರೆ ಸರ್ವರನ್ನು ಕಾಪಾಡುವುದು ಎಂಬುದಾಗಿ ತಿಳಿಸಿದೆ.[೬]

ಡಾ. ಬಿ. ಆರ್. ಅಂಬೇಡ್ಕರ್‌ರವರು ಧರ್ಮವನ್ನು 'ಮತಧರ್ಮ' ಎನ್ನುವ ಅರ್ಥದಲ್ಲಿ ಬಳಸಿದ್ದಾರೆ.[೭]

ಗ್ರೀಕರು ಹಿಂದಿನಿಂದಲೂ ಇದ್ದ ಎರಡು ಧರ್ಮಶಾಸ್ತ್ರಗಳನ್ನು ಕುರಿತು ತಿಳಿಸಿದ್ದಾರೆ. ಅವುಗಳೆಂದರೆ ಪುರಾಣ ಧರ್ಮಶಾಸ್ತ್ರ ಮತ್ತು ನಾಗರಿಕ ಧರ್ಮಶಾಸ್ತ್ರ. ಪುರಾಣ ಧರ್ಮಶಾಸ್ತ್ರವು ದೇವಾನುದೇವತೆಗಳ ಕಥೆಗಳು ಮತ್ತು ಕಾವ್ಯಗಳನ್ನು ಕುರಿತು ವಿವರಿಸುತ್ತವೆ. ನಾಗರಿಕ ಧರ್ಮಶಾಸ್ತ್ರವು ಸಮೃದ್ಧಿಯನ್ನು ಎಂದರೆ ಬದಲಾವಣೆಯನ್ನು ಕುರಿತು ತಿಳಿಸುತ್ತದೆ. ಈ ಮೇಲಿನ ಎರಡು ರೀತಿಯಲ್ಲೂ ಅಂಬೇಡ್ಕರ್ ಅವರು ಧರ್ಮವನ್ನು ಪ್ರತಿಪಾದಿಸದೇ 'ನಿಸರ್ಗ ಧರ್ಮಶಾಸ್ತ್ರ' ಎಂಬ ಅರ್ಥದಲ್ಲಿ ಧರ್ಮವನ್ನು ವರ್ಣಿಸುತ್ತಾರೆ.

ಅಂಬೇಡ್ಕರ್‌ರವರು ಪ್ರತಿಪಾದಿಸಿದ ಈ ಸಿದ್ಧಾಂತವು ಮೂರು ಪರಿಕಲ್ಪನೆಗಳಿಂದ ಕೂಡಿದೆ. ಅವುಗಳೆಂದರೆ ದೇವರು, ಜಗತ್ತಿನ ಮೇಲೆ ದೇವರ ಪ್ರಭುತ್ವ, ಮಾನವರ ಮೇಲೆ ದೇವರ ನೈತಿಕ ಪ್ರಭುತ್ವ, ಅಂಬೇಡ್ಕರ್‌ರವರು ಧರ್ಮವನ್ನು ಒಂದು ಆದರ್ಶ ದೈವಿಕ ಆಡಳಿತವನ್ನು ತಿಳಿಸುವ ರೀತಿಯಲ್ಲಿ ಅರ್ಥಮಾಡಿಕೊಂಡಿರುವುದಾಗಿ ತಿಳಿಸಿದ್ದಾರೆ. ಮನುಷ್ಯರು ಬದುಕಿರುವ ಸಾಮಾಜಿಕ ವ್ಯವಸ್ಥೆಯು ಒಂದು ಬಗೆಯ ನೈತಿಕ ಕಟ್ಟುಪಾಡಿನಲ್ಲಿರುವಂತೆ ನೋಡಿಕೊಳ್ಳುವ ಗುರಿ ಹಾಗೂ ಉದ್ದೇಶವನ್ನು ಇಲ್ಲಿ ಹೊಂದಿರಬೇಕಾಗುತ್ತದೆ.

ಧರ್ಮದಲ್ಲಿ ದೇವರ ಕಲ್ಪನೆಯು ಯಾವಾಗ ಉದ್ಭವಿಸಿತು? ಎಂಬುದಾಗಿ ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಮಹಾಪುರುಷರ ಆರಾಧನೆಯ ಫಲವಾಗಿ ಇದು ಮೂಡಿರಬಹುದು ಹಾಗೂ ಭೂಮಿಯ ಮೇಲೆ ಜೀವಿಯ ಸೃಷ್ಟಿ ಯಾವಾಗ ಮತ್ತು ಯಾರಿಂದ ಸೃಷ್ಟಿಯಾಯಿತು? ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ಮೂಡಿದ ಊಹೆ ಅಥವಾ ಕಲ್ಪನೆಯ ಫಲವಾಗಿ ದೇವರು ಧರ್ಮದಲ್ಲಿ ಸೇರಿರಬಹುದು. ಆದರೆ ಧರ್ಮ ಮತ್ತು ದೇವರ ಕಲ್ಪನೆಗಳು ಏಕೆ ಮತ್ತು ಹೇಗೆ ಒಂದುಗೂಡಿವೆ ಎಂಬುದನ್ನು ನಿಖರವಾಗಿ ಹೇಳಲು ಆಗುವುದಿಲ್ಲ.

ದೇವರು ಮತ್ತು ಮನುಷ್ಯ, ಮನುಷ್ಯ ಮತ್ತು ಸಮಾಜ ಹಾಗೂ ಮನುಷ್ಯ ಮತ್ತು ಮನುಷ್ಯರ ಸಂಬಂಧಗಳನ್ನು ನಿರ್ಣಯಿಸುವ ಅಂತರ್ಗತ ಧರ್ಮದ ಮಹತ್ವವನ್ನು ಈ ರೀತಿಯಾಗಿ ತಿಳಿಯಬಹುದಾಗಿದೆ. ಅನಾಗರಿಕ ಸಮಾಜದ ಧರ್ಮದಲ್ಲಿ ಕಾಣುವ ಪ್ರಮುಖ ಅಂಶಗಳೆಂದರೆ ಆಚರಣೆ ಮತ್ತು ಆರಾಧನೆಗಳ ವಿದ್ಯುಕ್ತ ಕ್ರಿಯೆಗಳು, ಮಾಟ ಅಥವಾ ನಿಷೇಧಗಳ ಬಳಕೆ, ಮೂಲದೈವ ಹಾಗೂ ಗದ್ದುಗೆಗಳ ಪೂಜೆ.

ಎರಡನೆಯ ವಿಚಾರವೆಂದರೆ ಆಚರಣೆ, ಮಾಟ ನಿಷೇಧ ಮೂಲದೈವ ಇವುಗಳ ಆರಾಧನೆಯೆಲ್ಲಾ ವಿಶಿಷ್ಟ ಸಂದರ್ಭಗಳೊಂದಿಗೆ ಸಂಬಂಧಿಸಿರುವುದು. ಈ ಸನ್ನಿವೇಶಗಳೆಲ್ಲಾ ಮಾನವ ಜೀವನದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಜನನ ಅದರಲ್ಲೂ ಪ್ರಥಮ ಶಿಶುವಿನ ಜನನ, ಯೌವ್ವನಕ್ಕೆ ಕಾಲಿಡುವುದು, ಮದುವೆ ರೋಗ ಪೀಡಿತರಾಗುವುದು, ಸಾವು ಯುದ್ಧಗಳಂತಹ ಘಟನೆಗಳೇ ವಿಶೇಷ ಸನ್ನಿವೇಶಗಳಾಗಿದ್ದು ಆರಾಧನೆ, ಆಚರಣೆ, ಮಾಟ ಮತ್ತು ಮೂಲದೈವಾರಾಧನೆಗೆ ಪ್ರೇರಣೆ ಕೊಡುತ್ತವೆ.

ಧರ್ಮದ ಹುಟ್ಟು ದೇವರ ಆರಾಧನೆಯಿಂದಲೇ ಹುಟ್ಟಿತು ಎಂಬುದು ಸರಿಯಲ್ಲ ಹಾಗೂ ಧರ್ಮದ ಹುಟ್ಟನ್ನು ಮಾಟಮಂತ್ರಗಳಲ್ಲಿ ಹುಡುಕುವ ಸಿದ್ಧಾಂತಗಳು ಪ್ರಚಾರದಲ್ಲಿವೆ. ಇದಕ್ಕಿಂತ ದೊಡ್ಡತಪ್ಪು ಇಲ್ಲ. ಅನಾಗರಿಕ ಸಮಾಜಗಳಲ್ಲಿ ಮಾಟ, ಮಂತ್ರ, ನಿಷೇಧಗಳ ಬಗ್ಗೆ ನಂಬಿಕೆ ಇದೆ. ಮೂಲದೈವ ಆರಾಧನೆಯನ್ನು ನಡೆಸುತ್ತಾರೆಂಬುದು ನಿಜವಾದರೂ ಅದು ಧರ್ಮದ ಉಗಮಕ್ಕೆ ಕಾರಣ ವಾಗುತ್ತದೆಂದು, ಧರ್ಮದ ಲಕ್ಷಣಗಳನ್ನು ಅವುಗಳಿಂದ ಹೇಳಬಹುದು ಎಂದು ಭಾವಿಸುವುದು ಸರಿಯಲ್ಲ ಎಂದಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್‌ರವರ ಪ್ರಕಾರ ಅನಾಗರಿಕ ಸಮಾಜದ ಮುಖ್ಯ ಸಂಗತಿಗಳೆಂದರೆ ಮನುಷ್ಯನ ಅಸ್ತಿತ್ವಕ್ಕೆ ಸಂಬಂಧಿಸಿದ ಪ್ರಾಥಮಿಕ ವಿಚಾರಗಳಾದ ಹುಟ್ಟು, ಮದುವೆ, ಬದುಕು, ಸಾವು ಇತ್ಯಾದಿ. ಮಾಟ, ಮಂತ್ರ, ನಿಷೇಧ ಮತ್ತು

ಮೂಲದೈವಾರಾಧನೆಗಳು ಪ್ರಾಸಂಗಿಕವಾದವುಗಳು. ಇವು ಕೇವಲ ಸಾಧನಗಳೇ ಹೊರತು ಗುರಿಯಲ್ಲ. ಬದುಕು ಮತ್ತು ಬದುಕನ್ನು ಕಾಪಾಡಿಕೊಂಡು ಬರುವುದೇ ಇದರ ಗುರಿ.

ಮಾಟ, ಮಂತ್ರ, ನಿಷೇಧ ಇತ್ಯಾದಿಗಳನ್ನು ಅನಾಗರಿಕ ಸಮಾಜಗಳು ಅನುಸರಿಸುವುದು ಬದುಕನ್ನು ಕಾಪಾಡಲು ಮತ್ತು ದುಷ್ಟ ಶಕ್ತಿಗಳಿಂದ ಜೀವನವನ್ನು ರಕ್ಷಿಸುವ ಸಲುವಾಗಿ ಎನ್ನುವ ರೀತಿಯಲ್ಲಿ ಅರ್ಥೈಸಿಕೊಂಡಾಗ ಮಾತ್ರ ಅನಾಗರಿಕ ಸಮಾಜಗಳ ಧರ್ಮದ ಕಾಳಜಿ ಬದುಕಿನ ಬಗೆಗೆ ಮತ್ತು ಬದುಕನ್ನು ಕಾಪಾಡುವುದರ ಬಗೆಗೆ ಎಂಬುದು ಸ್ಪಷ್ಟವಾಗುತ್ತದೆ. ಇದೇ ಧರ್ಮದ 'ಬುನಾದಿ.'[೮]

ಜೀವನದ ಮುಂದುವರಿಕೆ ಮತ್ತು ಕಾಪಾಡುವಿಕೆಯೇ ಈ ಧರ್ಮದ ಉದ್ದೇಶ ಎಂಬುದಾಗಿ ತಿಳಿಸುತ್ತಾ "ಧರ್ಮದ ಆರಂಭ ಮತ್ತು ಕೊನೆ ಬದುಕನ್ನು ಉಳಿಸಿಕೊಳ್ಳುವುದು ಮತ್ತು ಸ್ಥಿರಗೊಳಿಸುವುದೇ ಆಗಿದೆ" ಎಂಬ ಪ್ರೊ. ಕ್ರಾಲೆಯವರ ಮಾತನ್ನು ಅಂಬೇಡ್ಕರ್‌ರವರು ಉಲ್ಲೇಖಿಸಿದ್ದಾರೆ.[೯]

ಧರ್ಮವು ಬದುಕಿನ ಪ್ರಕ್ರಿಯೆಗಳನ್ನು ಪರಿಶುದ್ಧಗೊಳಿಸಿದರೆ ನೀತಿ ನಿಯಮಗಳು ಅದರ ರಕ್ಷಣೆಗೆ ಕಾನೂನನ್ನು ಒದಗಿಸುತ್ತವೆ. ಜೀವನದ ಮೂಲ ಸಂಗತಿಗಳನ್ನು ಧರ್ಮವೇ ಪರಿಶುದ್ಧಗೊಳಿಸುವುದರಿಂದ ಅವುಗಳ ರಕ್ಷಣೆಗಾಗಿ ಸಮಾಜವು ವಿಧಿಸಿರುವ ಕಟ್ಟುಕಟ್ಟಳೆಗಳಿಗೂ ಪಾವಿತ್ರ್ಯ ಬರುತ್ತದೆ. ಈ ನೆಲೆಯಿಂದ ನೋಡಿದಾಗ ಧರ್ಮ ಮತ್ತು ನೀತಿಯ ನಡುವೆ ಪವಿತ್ರ ಬಂಧವು ಏಕೆ ಹುಟ್ಟಿತೆಂಬುದು ಗೊತ್ತಾಗುತ್ತದೆ. ದೇವರು ಮತ್ತು ಧರ್ಮದ ನಡುವಿನ ಬಂಧನಕ್ಕಿಂತ ಇದು ಹೆಚ್ಚು ಸಹಜವು ಅನ್ಯೋನ್ಯವು ಆಗಿದೆ. ಆದರೆ ಧರ್ಮ ಮತ್ತು ನೀತಿಗಳೆರಡೂ ಯಾವಾಗ ಒಂದುಗೂಡಿದವು ಎಂಬುದನ್ನು ಹೇಳುವುದು ಸುಲಭವಲ್ಲ. ನಾಗರಿಕ ಸಮಾಜದಲ್ಲಿ ಧರ್ಮದ ರಚನೆಯಲ್ಲಿಯೇ ದೇವರು ಬರುತ್ತಾನೆ. ಅಲ್ಲಿ ನೀತಿಯು ಧರ್ಮದ ಮೂಲಕ ಸಂಸ್ಕರಿಸಲ್ಪಡುತ್ತದೆ.

"ಧರ್ಮವೆಂಬುದು ಮಾನವ ಕೋಟಿಗೆ ಒಂದು ಮಹಾನ್ ಚಾಲಕ ಶಕ್ತಿ."[೧೦] ಇದರಿಂದ ರಾಷ್ಟ್ರಗಳು ಹುಟ್ಟುವುದಕ್ಕೆ ಇಬ್ಭಾಗವಾಗಿ ಹೋಳಾಗುವುದಕ್ಕೆ ಹಾಗೂ ಸಾಮ್ರಾಜ್ಯಗಳು ಒಂದುಗೂಡುವುದಕ್ಕೆ ಧರ್ಮವೇ ಕಾರಣವಾಗಿದೆ ಎಂಬುದಾಗಿ ಪ್ರೊ. ತೈಲೆಯವರು ಹೇಳಿದ್ದಾರೆ. ಇದನ್ನು ಅಂಬೇಡ್ಕರ್‌ರವರು ಅನುಮೋದಿಸುತ್ತಾರೆ.

"ಧರ್ಮವೆಂಬುದು ಒಂದು ಸಂಸ್ಥೆ ಅಥವಾ ಪ್ರಭಾವ." ಅದರ ಹಿಡಿತದಲ್ಲಿರುವವರಿಗೆ ಅದು ನೆರವನ್ನು ನೀಡುತ್ತದೆ ಅಥವಾ ಅನ್ಯಾಯವನ್ನುಂಟು ಮಾಡುತ್ತದೆ ಎಂಬುದಾಗಿ ಅಂಬೇಡ್ಕರ್‌ರವರು ತಿಳಿಸಿದ್ದಾರೆ.[೧೧] ಧರ್ಮವು ಪ್ರತಿಪಾದಿಸುವ ವಿವರಣೆಗಳನ್ನು ಒಪ್ಪಿದರೆ ಅದರಿಂದ ಮಾನವನಿಗೆ ಯಾವುದೇ

ತೊಂದರೆಗಳು ಉಂಟಾಗುವುದಿಲ್ಲ. ಒಂದು ವೇಳೆ ವಿರೋಧಿಸಿದರೆ ಅದು ನೀಡುವ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂಬುದಾಗಿ ಅವರು ತಿಳಿಸಿದ್ದಾರೆ.

ಮುಂದುವರಿದು ಸತ್ಯವನ್ನು ಅರಿಯುವುದು ತತ್ತ್ವಜ್ಞಾನದ ಉದ್ದೇಶವಾದರೆ, ಪ್ರೀತಿಸುವುದು ಧರ್ಮದ ಕೆಲಸ. ತತ್ತ್ವಶಾಸ್ತ್ರವು ಸ್ಥಿರವಾದುದು, ಧರ್ಮವು ಚಲನಶೀಲವಾದುದು. ತತ್ತ್ವಜ್ಞಾನವು ಸ್ಥಿರವಾದುದು ಏಕೆಂದರೆ ಸತ್ಯದ ಅರಿವನ್ನು ಕುರಿತು ಮಾತ್ರ ಅದಕ್ಕೆ ಆಸಕ್ತಿ. ಧರ್ಮವು ಚಲನಾತ್ಮಕವಾದುದೇಕೆಂದರೆ ಸತ್ಯವನ್ನು ಪ್ರೀತಿಸುವುದರಲ್ಲಿ ಅದಕ್ಕೆ ಆಸಕ್ತಿ" ಎಂಬುದಾಗಿ ತತ್ತ್ವಜ್ಞಾನ ಮತ್ತು ಧರ್ಮದ ವ್ಯತ್ಯಾಸವನ್ನು ಡಾ. ಬಿ. ಆರ್. ಅಂಬೇಡ್ಕರ್ ಅವರು ತಿಳಿಸಿದ್ದಾರೆ.[೧೨]

"ಧರ್ಮವು ಚರಿತ್ರೆಯ ಬದುಕಿನಲ್ಲಿ ಹಾಸು ಹೊಕ್ಕಿರುವ ನೇಯ್ಗೆಯಂತೆ" ಎಂಬ ಹರ್ಬರ್ಟ್ ಸ್ಪೆನ್ಸರ್‌ರವರ ಮಾತನ್ನು ಡಾ. ಬಿ. ಆರ್. ಅಂಬೇಡ್ಕರ್‌ರವರು ಒಪ್ಪುತ್ತಾರೆ.[೧೩] ಮಾನವನಲ್ಲಿ ಧರ್ಮವು ಎಲ್ಲಾ ರೀತಿಯಲ್ಲೂ ಪರಿಣಾಮವನ್ನು ಬೀರುತ್ತಿದೆ. ಮಾನವನ ಪ್ರತಿಯೊಂದು ಹಂತವೂ ಕೂಡಾ ಧರ್ಮವನ್ನು ಅವಲಂಬಿಸಿದೆ ಎಂಬುದಾಗಿ ಡಾ. ಬಿ. ಆರ್. ಅಂಬೇಡ್ಕರ್‌ರವರು ತಿಳಿಸಿದ್ದಾರೆ.

ಧರ್ಮವು ತನ್ನ ವ್ಯಾಪ್ತಿಗೆ ಮಾನವನ ಸರ್ವಜ್ಞಾನವನ್ನು ಸೇರಿಸಿಕೊಂಡು ಅದು ಮಾಡಿದ್ದೇ ಸರಿ ಹಾಗೂ ಅದು ನೀಡುವ ವಿವರಣೆಯೇ ಅಂತಿಮ ಎಂಬುದಾಗಿ ಮಾನವನು ನಂಬಿದ್ದನು. ಸಮಾಜದಲ್ಲಿ ಸಂಭವಿಸುವ ಪ್ರತಿಯೊಂದು ಘಟನೆಗಳು, ಬದಲಾವಣೆಗಳು ಎಲ್ಲವೂ ಧರ್ಮದಿಂದಲೇ ಎಂಬ ಮೂಢನಂಬಿಕೆಯನ್ನು ಹೊಂದಿದ್ದರು. ವಿಜ್ಞಾನವು ಮುಂದುವರಿದಂತೆಲ್ಲಾ ಈ ನಂಬಿಕೆಗಳು ಸ್ವಲ್ಪ ಸ್ವಲ್ಪವಾಗಿ ನಾಶವಾಗತೊಡಗಿತು. ಧರ್ಮವು ತನ್ನ ವ್ಯಾಪ್ತಿಗೆ ಖಗೋಳ ವಿಜ್ಞಾನವನ್ನು ಸೇರಿಸಿಕೊಂಡು ಭೂಮಿಯು ತನ್ನ ಕಕ್ಷೆಯಲ್ಲಿ ಸ್ಥಿರವಾಗಿದ್ದು, ಭೂಮಿಯ ಸುತ್ತಾ ಇತರ ಗ್ರಹಗಳು ಸುತ್ತುತ್ತವೆ ಎಂಬುದಾಗಿ ತಿಳಿಸಿತ್ತು.

ಧರ್ಮವು ಮಾನವನಲ್ಲಿ ಉಂಟಾಗುವ ಅನಾರೋಗ್ಯಕ್ಕೆ ಬದಲಾವಣೆಗಳಿಗೆ ಆತನ ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕೃತ್ಯಗಳೇ ಕಾರಣ ಎಂಬುದಾಗಿ ಬಿಂಬಿಸಲಾಗಿತ್ತು ಹಾಗೂ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧುಸಂತರ ಹತ್ತಿರ ಹೋಗಬೇಕಾಗಿತ್ತು. ಈ ಸಮಸ್ಯೆಗಳಿಗೆ ಕಾರಣ ಭೂತ, ಪ್ರೇತಗಳೇ ಎಂಬುದಾಗಿ ತಿಳಿದು ಅವುಗಳ ಧಮನಕ್ಕಾಗಿ ಮಾಟಮಂತ್ರಗಳನ್ನು ಆಚರಿಸುತ್ತಿದ್ದರು. ಇದರಿಂದ ಸಮಾಜದಲ್ಲಿ ಮೌಢ್ಯತೆ ಹಾಗೂ ಮೂಢನಂಬಿಕೆಗಳು ಪ್ರಚಲಿತದಲ್ಲಿದ್ದವು.

ವೈದ್ಯಶಾಸ್ತ್ರವು ಬೆಳೆದಂತೆಲ್ಲಾ ಮಾನವನು ತನ್ನ ಸಮಸ್ಯೆಗೆ ಕಾರಣ ತನ್ನಲ್ಲಾಗುವ ಬದಲಾವಣೆ, ವಾತಾವರಣದಲ್ಲಾಗುವ ಏರುಪೇರುಗಳು ಹಾಗೂ ತಾನು ಸೇವಿಸುವ ಆಹಾರದಲ್ಲಿ ಉಂಟಾಗುವ ವ್ಯತ್ಯಾಸ ಎನ್ನುವ ಸತ್ಯಾಂಶವನ್ನು ಅರಿತನು. ಆದರೂ

ಸಹ ಧರ್ಮವು ಇಂದು ಮಾನವನ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುತ್ತಿದೆ. ವೈದ್ಯಕೀಯ ವಿಚಾರಗಳಲ್ಲಿ ಎಷ್ಟೇ ಮುಂದುವರಿದರೂ ಧರ್ಮವು ತನ್ನ ಪ್ರಭಾವವನ್ನು ಮುಂದುವರಿಸುತ್ತಿದೆ.

ಮಾನವನ ಬದುಕಿನ ಪ್ರತಿಯೊಂದು ಘಟನೆಗಳು ಧರ್ಮದಿಂದಲೇ ನಿಯಂತ್ರಿತವಾಗಿವೆ. ಮಾನವನು ಬದುಕಿರುವಾಗ ಹೇಗೆ ಜೀವಿಸಬೇಕು? ಆತನ ನಿಧನದ ನಂತರ ದೇಹ ವಿಸರ್ಜನೆಯ ವಿಧಾನ ಯಾವ ರೀತಿಯಲ್ಲಿ ನಡೆಯಬೇಕು? ಎಂಬುದನ್ನೆಲ್ಲಾ ಧರ್ಮವೇ ತಿಳಿಸುತ್ತದೆ. "ಧರ್ಮವು ತಿಳಿಸದ ಯಾವುದೇ ವಿಚಾರವನ್ನು ಹಿಂದುವು ಮಾಡಲಾರ"[೧೪] ಎಂಬುದಾಗಿ ಅಂಬೇಡ್ಕರ್‌ರವರು ತಿಳಿಸಿದ್ದಾರೆ ಹಾಗೂ ಒಂದು ಮಗು ಜನಿಸಿದಾಗ ಯಾವ ರೀತಿಯ ಆಚರಣೆಗಳನ್ನು ನಡೆಸಬೇಕು? ನಾಮಕರಣದ ವಿಧಾನ ಹೇಗೆ? ನಂತರ ಆತನು ಜೀವನ ಸಾಗಿಸಲು ಯಾವ ಕಸುಬನ್ನು ಅವಲಂಬಿಸಬೇಕು? ಆತನ ಗೃಹಸ್ಥ ಆಶ್ರಮದ ಆಚರಣೆ ಯಾವ ರೀತಿಯಲ್ಲಿರಬೇಕು? ಎಂಬುದನ್ನೆಲ್ಲಾ ಧರ್ಮವೇ ತಿಳಿಸುತ್ತದೆ.

ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮನುಷ್ಯರಿಗೆ ಬದುಕುವ ಸ್ವಾತಂತ್ರ್ಯವನ್ನು ಧರ್ಮವು ಕಲ್ಪಿಸಬೇಕು. ಆತನಿಗೆ ಸಮಾನತೆಯನ್ನು ನೀಡಬೇಕು. ಈ ರೀತಿಯಲ್ಲಿ ಸವಲತ್ತುಗಳನ್ನು ನೀಡುವುದರಿಂದ ಸಮಾಜದ ಏಳ್ಗೆ ಸಾಧ್ಯ. ಮಾನವನು ಆಚರಿಸುವ ಧರ್ಮದಿಂದ ಮತ್ತೊಬ್ಬ ಮಾನವನಿಗೆ ಯಾವುದೇ ರೀತಿಯ ತೊಂದರೆಯೂ ಆಗಬಾರದು. ಧರ್ಮವು ಮನುಷ್ಯರಲ್ಲಿ ಪ್ರೀತಿ, ಸಹಬಾಳ್ವೆಯನ್ನು ಮೂಡಿಸಬೇಕೇ ವಿನಹ ಅವರಲ್ಲಿ ಬಿರುಕನ್ನುಂಟುಮಾಡಬಾರದು ಹಾಗೂ ಮಾನವ ಮಾನವರ ನಡುವೆ ಸಾಮಾಜಿಕ, ರಾಜಕೀಯ, ಆರ್ಥಿಕ ಅಂತರವನ್ನು ಧರ್ಮವು ಮೂಡಿಸಬಾರದು ಎಂಬುದಾಗಿ ತಿಳಿಸಿದ್ದಾರೆ. ಧರ್ಮವು ಸಮಾಜದಲ್ಲಿ ಜೀವಿಸುವ ಎಲ್ಲರಿಗೂ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ಸವಲತ್ತುಗಳನ್ನು ಸಮಾನವಾಗಿ ನೀಡಬೇಕು. ಧರ್ಮವು ಸಮಾನತೆ, ಸೋದರತೆಯನ್ನು ಸೃಷ್ಟಿಸುವಂತಿರಬೇಕೇ ಹೊರತು ಮೇಲುಕೀಳು ಅಂತರವನ್ನಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಧರ್ಮ ಎನ್ನುವುದು ಮಾನವನ ಜೀವನದಲ್ಲಿ ಬೆರೆತುಕೊಂಡಿರುವ ಅವಿಭಾಜ್ಯ ಅಂಶವಾಗಿದೆ. ಧರ್ಮಕ್ಕೆ ಅಗಾಧವಾದ ಶಕ್ತಿಯಿರುವುದರಿಂದ ಮಾನವನನ್ನು ನೈತಿಕ ನೆಲೆಗಟ್ಟಿನಲ್ಲಿ ಭದ್ರಗೊಳಿಸಿ ಆತನ ಸರ್ವತೋಮುಖ ಅಭಿವೃದ್ಧಿಯನ್ನು ಬೆಳೆಸಬೇಕು. ಮಾನವ ಸಮಾಜದಲ್ಲಿ ಶಾಂತಿ, ಪ್ರೇಮ, ಸಮಾನತೆ, ಸಹೋದರತ್ವಗಳು ಬೆಳೆಯುವಂತೆ ಧರ್ಮ ಮಾಡುವಂತಾಗಬೇಕು. ಆ ಮೂಲಕ ಇಡೀ ಮಾನವ ಜನಾಂಗ ಶಾಂತಿಯ ಸಮೃದ್ಧ ಬದುಕನ್ನು ಬಾಳುವಂತಾಗಬೇಕು. ಇದಕ್ಕೆ ಪ್ರೇರಣೆ ನೀಡುವ ವಿಶ್ವಧರ್ಮದ ಅಗತ್ಯ ಇಂದಿಗೆ ಇದೆ.

ಅಡಿಟಿಪ್ಪಣಿ

೧. ಟಿ. ಬಿ. ಬಸವರಾಜು, "ವಿಶ್ವಧರ್ಮಕ್ಕೆ ಶ್ರೀ ರಾಮಕೃಷ್ಣರ ಕೊಡುಗೆ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು. ೬, ೧೯೯೨, ಪುಟ-೯೩

೨. ಟಿ. ಬಿ. ಬಸವರಾಜು, "ವಿಶ್ವಧರ್ಮಕ್ಕೆ ಶ್ರೀ ರಾಮಕೃಷ್ಣರ ಕೊಡುಗೆ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು. ೬, ೧೯೯೨, ಪುಟ-೯೨

೩. ಡಾ. ಎನ್. ಜಿ. ಮಹಾದೇವಪ್ಪ "ಧಾರ್ಮಿಕ ನಂಬಿಕೆಗಳು ಮತ್ತು ದಾರ್ಶನಿಕ ವಿಶ್ಲೇಷಣೆ" ವೀರಶೈವ ಅಧ್ಯಯನ ಅಕಾಡಮಿ, ಬೆಳಗಾವಿ, ೧೯೯೫, ಪುಟ-೨೩

೪. ಡಾ. ಎನ್ ಜಿ. ಮಹಾದೇವಪ್ಪ "ಧಾರ್ಮಿಕ ನಂಬಿಕೆಗಳು ಮತ್ತು ದಾರ್ಶನಿಕ ವಿಶ್ಲೇಷಣೆ" ವೀರಶೈವ ಅಧ್ಯಯನ ಅಕಾಡಮಿ, ಬೆಳಗಾವಿ, ೧೯೯೫, ಪುಟ-೨೪

೫. ಡಾ. ಎನ್. ಜಿ. ಮಹಾದೇವಪ್ಪ "ಧಾರ್ಮಿಕ ನಂಬಿಕೆಗಳು ಮತ್ತು ದಾರ್ಶನಿಕ ವಿಶ್ಲೇಷಣೆ" ವೀರಶೈವ ಅಧ್ಯಯನ ಅಕಾಡಮಿ, ಬೆಳಗಾವಿ, ೧೯೯೫ ಪುಟ-೨೪

೬. ಟಿ. ಬಿ. ಬಸವರಾಜು, "ವಿಶ್ವಧರ್ಮಕ್ಕೆ ಶ್ರೀ ರಾಮಕೃಷ್ಣರ ಕೊಡುಗೆ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು. ೬, ೧೯೯೨, ಪುಟ-೯೩

೭. ಸಂಪುಟ-೩, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ೧೯೯೪, ಪುಟ-೭

೮. ಸಂಪುಟ-೩, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ೧೯೯೪, ಪುಟ-೧೪

೯. ಸಂಪುಟ-೩, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ೧೯೯೪, ಪುಟ-೧೫

೧೦. ಸಂಪುಟ-೩, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ೧೯೯೪, ಪುಟ-೩೫

೧೧. ಸಂಪುಟ-೩, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ೧೯೯೪, ಪುಟ-೩೫

೧೨. ಸಂಪುಟ-೩, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ೧೯೯೪, ಪುಟ-೧೨೬

೧೩. ಸಂಪುಟ-೩, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ೧೯೯೪, ಪುಟ-೩೨

೧೪. ಸಂಪುಟ-೩, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ೧೯೯೪, ಪುಟ-೩೩

ಪರಮಾರ್ಶನ ಗ್ರಂಥಗಳು

೧. ಡಾ. ಎನ್. ಜಿ. ಮಹದೇವಪ್ಪ, "ಧರ್ಮಮೀಮಾಂಸೆ" (ಅನು) ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ೧೯೯೨

೨. ಟಿ. ನಾಗರಾಜು, "ಭಾರತದಲ್ಲಿ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತರ ಅಧ್ಯಯನ", ಚೇತನ ಬುಕ್ ಹೌಸ್, ಮೈಸೂರು-೨೦೦೪

೩. ಜಿ. ಹನುಮಂತರಾವ್ "ಆಧುನಿಕ ತತ್ತ್ವಶಾಸ್ತ್ರದ ಸಮಸ್ಯೆಗಳು", ಮೈಸೂರು ವಿಶ್ವವಿದ್ಯಾನಿಲಯ ರಿಜಿಸ್ಟಾರ್-೧೯೫೬.

೪. ಎಚ್. ವೆಂಕಟೇಶ್, "ಬೌದ್ಧಮತ ಮತ್ತು ಡಾ. ಬಿ. ಆರ್. ಅಂಬೇಡ್ಕರ್" ಕರ್ನಾಟಕದ ಬುಕದ ಏಜೆನ್ಸಿ, ತುಂಗಾ ಕಾಂಪ್ಲೆಕ್ಸ್, ಗಾಂಧೀನಗರ, ಬೆಂಗಳೂರು-೧೯೯೩

೧೧. ಪ್ರಸ್ತುತ ಭಾರತದ ಸಂದರ್ಭದಲ್ಲಿ ಗಾಂಧೀಜಿಯವರ ರಾಜಕೀಯ ಚಿಂತನೆಗಳ ಮಹತ್ವ

–ಹನುಮಂತರಾಜು ಎಂ. ಜಿ.

೨೧ನೇ ಶತಮಾನದತ್ತ ಬಿರುಸಿನ ಹೆಜ್ಜೆಯಿಟ್ಟು ಸಾಗುತ್ತಿರುವ ಮಾನವಕೋಟಿಗೆ ವಿಶೇಷವಾಗಿ ಭಾರತೀಯರಿಗೆ ಗಾಂಧೀಜಿಯುವರ ತತ್ವಸಿದ್ಧಾಂತಗಳು ಆದರ್ಶಪ್ರಾಯವೂ ಅನಿವಾರ್ಯವೂ ಆಗಿವೆ. ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳಂತಹ ಸಂದರ್ಭದಲ್ಲಂತೂ ಗಾಂಧೀಜಿಯವರ ಚಿಂತನೆಗಳ ಅನುಷ್ಠಾನ ಅವಶ್ಯಕವಾಗಿದೆ. ಗಾಂಧೀಜಿ ಕನಸಿನ ಸ್ವರಾಜ್ಯ ಕಲ್ಪನೆಗೂ ಇಂದಿನ ಭಾರತಕ್ಕೂ ಉತ್ತರ–ದಕ್ಷಿಣ ಧ್ರುವಗಳ ಅಂತರ ಉಂಟಾಗಿದೆ. ಗಾಂಧೀಜಿಯವರ ದೃಷ್ಟಿಯಲ್ಲಿದ್ದ ಸ್ವರಾಜ್ಯದ ಪರಿಕಲ್ಪನೆ ಎಂದರೆ ಅದು ಸ್ವಯಂ ಆಡಳಿತ, ಸ್ವಯಂ ನಿಯಂತ್ರಿತ ಸಮಾಜದ ಹಾಗೂ ಎಲ್ಲಾ ಹಂತಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಬಳಸಲಾಗುವ ಅಧಿಕಾರದ ವಿಕೇಂದ್ರೀಕರಣ. ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಹೆಗ್ಗಳಿಕೆ ಕೊಚ್ಚಿಕೊಳ್ಳುತ್ತಿದ್ದ ಬ್ರಿಟಿಷ್ ಚಕ್ರಾಧಿಪತ್ಯ ಗಾಂಧೀಜಿಯನ್ನು ನಗ್ನಫಕೀರ ಎಂದು ಗೇಲಿ ಮಾಡುತ್ತಿತ್ತು. ಆದರೆ ಆ ನಗ್ನ ಫಕೀರನೇ ಕೊನೆಗೆ ಶಾಂತಿ, ಅಹಿಂಸೆ, ಸತ್ಯಾಗ್ರಹ ಎಂಬ ಮೂರು ದಿವ್ಯ ಅಸ್ತ್ರಗಳ ಮೂಲಕ ೧೯೪೭ ಆಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಪಡೆದುಕೊಟ್ಟರು. ಗಾಂಧೀಜಿಯವರ ನಾಯಕತ್ವದಲ್ಲಿ ನಡೆದ ಭಾರತ ಸ್ವಾತಂತ್ರ್ಯ ಹೋರಾಟ ಈ ಶತಮಾನದ ಅತ್ಯಂತ ಜನತಾಂತ್ರಿಕ ಸ್ವರೂಪದ ಜನತಾ ಆಂದೋಲನವೆಂದು ನಿಸ್ಸಂದೇಹವಾಗಿ ಹೇಳಬಹುದು.

ಗಾಂಧೀಜಿಯವರ ಆಶಯದಂತೆ ರಾಜಕೀಯ ವ್ಯವಸ್ಥೆಯಲ್ಲಿ ಸರ್ವೋದಯ ತತ್ವದ ಮೇಲೆ ಸ್ಥಾಪಿತವಾದ ಪ್ರಜಾಪ್ರಭುತ್ವ ನೆಲೆಸಬೇಕು. ಈ ನವಸಮಾಜದ

ಪ್ರತಿಯೊಬ್ಬ ಸ್ತ್ರೀ-ಪುರುಷರಿಗೆ ಸಮಾನವಾದ ರಾಜಕೀಯ ಹಕ್ಕುಗಳಿರಬೇಕು. ಸಮಾಜದ ಪ್ರತಿಯೊಬ್ಬ ಪ್ರಜೆಯೂ ರಾಜ್ಯ ನಿರ್ವಹಣೆಯಲ್ಲಿ (ಆಡಳಿತದಲ್ಲಿ) ಸಕ್ರಿಯ ಪಾತ್ರ ನಿರ್ವಹಿಸಬೇಕು. ಕೇಂದ್ರೀಕೃತ ಅಧಿಕಾರವಿರಕೂಡದು. ಆಡಳಿತ ವಿಕೇಂದ್ರೀಕೃತವಾಗಬೇಕು. ಪ್ರಜಾಪ್ರಭುತ್ವ ಆಡಳಿತದ ಬೇರಿನಂತಿರುವ ಗ್ರಾಮಪಂಚಾಯಿತಿಗಳಿಂದ ಬೆಳೆದು ಬರಬೇಕು. ಅಧಿಕಾರ ನಿಜವಾದ ಅರ್ಥದಲ್ಲಿ ವಿಕೇಂದ್ರೀಕೃತವಾಗಬೇಕು. ಸರ್ವೋದಯ ಸಮಾಜದಲ್ಲಿ ಪ್ರತಿಯೊಬ್ಬ ಪ್ರಜೆ ತನ್ನ ಹಕ್ಕುಗಳಿಗಿಂತ ಕರ್ತವ್ಯಕ್ಕೆ ಹೆಚ್ಚು ಮಹತ್ವ ನೀಡಬೇಕು. ರಾಜ್ಯ ವ್ಯವಸ್ಥೆಯು ಸತ್ಯ-ಅಹಿಂಸೆ, ಸಹಕಾರ ತತ್ವಗಳ ಮೇಲೆ ನಿಲ್ಲುವಂತಾಗಬೇಕು. ಗಾಂಧೀಜಿಯವರ ಇಂತಹ ರಾಜಕೀಯ ಚಿಂತನೆಗಳು, ಮೈಸೂರಿನಂತಹ ಬ್ರಿಟಿಷ್ ಸಾಮ್ರಾಜ್ಯಶಾಹಿ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ಅನುಷ್ಠಾನಗೊಂಡ ರೀತಿನೀತಿಗಳು ಕುತೂಹಲಕಾರಿಯಾಗಿವೆ ಎಂಬುದನ್ನು ಮುಂದೆ ಪರಿಶೀಲಿಸಲಾಗಿದೆ.

ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ಧರ್ಮಶಾಸ್ತ್ರಗಳ ಬಗ್ಗೆ ಗಾಂಧೀಜಿಯುವರಿಗಿದ್ದ ವಿಚಾರಧಾರೆಗಳು ವಿವೇಕಯುತವಾಗಿದ್ದವು. ಮಾನವತಾವಾದಿಯಾಗಿದ್ದ ಅವರು ಪ್ರಕೃತಿಗೆ ನಿಕಟವಾಗಿದ್ದರು. ಅವರ ವಿಚಾರಗಳು ಮಾನವೀಯತೆ, ಸಹಜೀವಿಗಳ ಬಗ್ಗೆ ಪ್ರೇಮ, ಶೋಷಣೆ ಮತ್ತು ಬಡತನದ ವಿರುದ್ಧ ಹೋರಾಟ ಇವುಗಳ ಆಧಾರದ ಮೇಲೆ ರೂಪುಗೊಂಡಿದ್ದವು. ರಸ್ಕಿನ್ನನ ಸಿದ್ಧಾಂತಗಳ ಅನುಯಾಯಿಯಾಗಿದ್ದ, ಗಾಂಧೀಜಿಯವರು 'ಎಲ್ಲರ ಒಳಿತಿನಲ್ಲಿ ವ್ಯಕ್ತಿಯ ಒಳಿತು ಅಡಗಿದೆ' ಎಂಬ ತತ್ವದಲ್ಲಿ ನಂಬಿಕೆ ಇಟ್ಟಿದ್ದರು. 'ಪ್ರತಿಯೊಬ್ಬರೂ ಎಲ್ಲರಿಗಾಗಿ, ಎಲ್ಲರೂ ಪ್ರತಿಯೊಬ್ಬರಿಗಾಗಿ' ಎಂಬ ಸಹಕಾರ ತತ್ವವು ಅವರಿಗೆ ಬಹುಪ್ರಿಯವಾಗಿದ್ದರೆ ಆಶ್ಚರ್ಯವೇನಿಲ್ಲ. ಪಿ. ಆರ್. ದುಭಾಷಿಯವರ ಪ್ರಕಾರ "ಗಾಂಧೀಜಿ ಸಹಕಾರ ತತ್ವದ ಕಟ್ಟುನಿಟ್ಟಿನ ವಿದ್ಯಾರ್ಥಿಯಾಗಿ ಅಥವಾ ಶಾಸ್ತ್ರಬದ್ಧ ತತ್ವಜ್ಞರಾಗಿಲ್ಲವಾದರೂ, ಸಹಕಾರ ಆಂದೋಲನಕ್ಕೆ ಅವರು ನೀಡಿದ ಕೊಡುಗೆಗಳು ವಿಶಿಷ್ಟವಾಗಿದ್ದು ಮತ್ತು ಅವರ ವಿಚಾರಗಳು ಹೆಚ್ಚು ವ್ಯಾವಹಾರಿಕವಾಗಿದ್ದವು. ಅರ್ಥಾತ್ ಗಾಂಧೀಜಿಯವರು "ಸ್ವಭಾವತಃ ಒಬ್ಬ ಸಹಕಾರಿ"ಯಾಗಿದ್ದರು.

ರಾಜಕೀಯ ಅಧಿಕಾರವು ಕೇಂದ್ರೀಕೃತವಾಗಿರುವ ಸಂಸದೀಯ ವ್ಯವಸ್ಥೆಯಲ್ಲಿ ಸರ್ಕಾರ ಜನತೆಯ ಬಹುಮತಾಭಿಪ್ರಾಯಕ್ಕನುಗುಣವಾಗಿ ರಚಿತವಾಗಿದ್ದರೂ ಜನತೆ ಬಹುಮಟ್ಟಿಗೆ ಸರ್ಕಾರಕ್ಕೆ ಅಧೀನವಾಗಿ ಬಿಡುತ್ತಾರೆ. ಕೇಂದ್ರೀಕೃತ ಆಡಳಿತ ವ್ಯವಸ್ಥೆಗೆ ಪೋಷಿತವಾಗಿ ಆರ್ಥಿಕ ಕೇಂದ್ರೀಕರಣ ಅನಿವಾರ್ಯವಾಗಿ ಆಗಿಯೇ ಬಿಡುತ್ತದೆ. ಇಂತಹ ಪ್ರಜಾತಂತ್ರದಲ್ಲಿ ಜನತೆಯ ಪಾತ್ರ ಸಕ್ರಿಯವಾಗಿರುವುದಿಲ್ಲ. ಐದು ವರ್ಷಗಳಿಗೊಮ್ಮೆ ಮತಕಟ್ಟೆಗೆ ಹೋಗಿ ಮತ ಚಲಾಯಿಸಿಬಿಟ್ಟರೆ ಆಯಿತು ಅವರ

ಕೆಲಸ. ಪ್ರಭುತ್ವದ ನೀತಿ-ನಿರ್ದೇಶನದ ಮೇಲೆ ಹತೋಟಿ ಇಟ್ಟುಕೊಳ್ಳುವುದು ಇರಲಿ, ಸರ್ಕಾರದ ದಬ್ಬಾಳಿಕೆಯಿಂದ ಮುಕ್ತಿಹೊಂದುವುದೂ ಅಸಾಧ್ಯವಾಗಿರುತ್ತದೆ. ಇಂತಹ ಪ್ರಜಾತಂತ್ರವನ್ನು ಜಯಪ್ರಕಾಶ್ ನಾರಾಯಣ್ ಅವರು ತಲೆಕೆಳಗಾಗಿರುವ ಪಿರಮಿಡ್‌ಗೆ ಹೋಲಿಸುತ್ತಾರೆ.

ಬಲಿಷ್ಠ ಕೇಂದ್ರೀಕೃತ ವ್ಯವಸ್ಥೆಯಲ್ಲಿ ವ್ಯಕ್ತಿಸ್ವಾತಂತ್ರ್ಯ ಕ್ಷೀಣವಾಗುತ್ತದೆ ಎಂಬುದು ಗಾಂಧೀಜಿಯವರ ಸ್ಪಷ್ಟ ಅಭಿಪ್ರಾಯವಾಗಿತ್ತು. "ಪ್ರಭುತ್ವದ ಅಧಿಕಾರವು ಹೆಚ್ಚುತ್ತಾ ಹೋಗುವುದನ್ನು ಕಂಡರೆ ನನಗೆ ತುಂಬಾ ಹೆದರಿಕೆಯಾಗುತ್ತದೆ; ಏಕೆಂದರೆ, ಶೋಷಣೆಯನ್ನು ಕಡಿಮೆ ಮಾಡುವುದರ ಮೂಲಕ ಅದು ಒಳ್ಳೆಯದನ್ನು ಸಾಧಿಸುವಂತೆ ತೋರಿದರೂ ಎಲ್ಲ ಪ್ರಗತಿಗೂ ಮೂಲಕಾರಣವಾದ ವ್ಯಕ್ತಿಸಂಪನ್ನತೆಯನ್ನು ಅದು ನಾಶಗೊಳಿಸಿ ಮಾನವತೆಗೆ ತುಂಬಾ ಕೇಡನ್ನುಂಟುಮಾಡುತ್ತದೆ. ಈ ಪರಿಸ್ಥಿತಿಯಿಂದ ಬಿಡುಗಡೆಹೊಂದಿ ಸತ್ತ್ವಪೂರ್ಣ ಪ್ರಜಾತಂತ್ರವನ್ನು ರೂಢಿಗೆ ತರಬೇಕಾದರೆ ರಾಜಕೀಯ ಮತ್ತು ಆರ್ಥಿಕ ವಿಕೇಂದ್ರೀಕರಣ ಅತ್ಯಗತ್ಯವಾಗುತ್ತದೆ. ರಾಜಕೀಯ ಮತ್ತು ಆಡಳಿತ ವಿಕೇಂದ್ರೀಕರಣವೆಂದರೆ ಜನಸಮುದಾಯಗಳ ವಿವಿಧ ಘಟ್ಟಗಳಲ್ಲಿ ಆಡಳಿತಾಧಿಕಾರದ ಹಂಚಿಕೆ. ಗಾಂಧೀ ಪ್ರಣೀತ ಗ್ರಾಮ ಸ್ವರಾಜ್ಯವೆಂದರೆ ಅದು ಒಂದು ಪರಿಪೂರ್ಣ ಸ್ವತಂತ್ರ ಪುಟ್ಟ ಗಣರಾಜ್ಯ. ಅದು ನೆರೆಹೊರೆಯ ಗ್ರಾಮಗಳ ಹಾಗೂ ನಗರಗಳ ಮೇಲೆ ಅವಲಂಬಿಸಕೂಡದು. ತನ್ನ ಮುಖ್ಯ ಬೇಡಿಕೆಗಳನ್ನು ತಾನೇ ಪೂರೈಸಿಕೊಳ್ಳಬೇಕು. ಆದರೆ, ಒಂದು ಸೀಮಿತ ಮಟ್ಟದ ಅವಲಂಬನೆಯನ್ನು ಅವರು ವಿರೋಧಿಸಲಿಲ್ಲ. ತನ್ನ ಜನಸಂಖ್ಯೆಗೆ ಸಾಕಾಗುವಷ್ಟು ಆಹಾರಧಾನ್ಯ ಉತ್ಪಾದಿಸಬೇಕು. ಪ್ರತಿಯೊಂದು ಹಳ್ಳಿಯು ಬಟ್ಟೆಗಾಗಿ ಹತ್ತಿಯನ್ನು ಬೆಳೆಯಲೇಬೇಕು. ದನಕರುಗಳಿಗೆ ಗೋಮಾಳ, ಗಾಂಜಾ, ತಂಬಾಕು, ಅಫೀಮುಗಳ ಹೊರತಾಗಿ ಉಪಯುಕ್ತ ವಾಣಿಜ್ಯ ಬೆಳೆಗಳನ್ನು ಬೆಳೆಯಬೇಕು. ಪ್ರತಿ ಹಳ್ಳಿಯಲ್ಲಿ ಶಾಲೆ, ನಾಟಕ ಮಂದಿರ, ಸಭಾ ಭವನಗಳಿರಬೇಕು. ಶುದ್ಧ ನೀರಿನ ಪೂರೈಕೆಯ ವ್ಯವಸ್ಥೆ ಇರಬೇಕು. ಪ್ರತಿ ಕ್ಷೇತ್ರದಲ್ಲಿ ಸಹಕಾರ ತತ್ವ ಅನುಸರಿಸಬೇಕು. ಸತ್ಯಾಗ್ರಹ ಹಾಗೂ ಅಸಹಕಾರ ತಂತ್ರದ ಅಹಿಂಸೆಯೇ ಗ್ರಾಮ ಸಮಾಜದ ಆಧಾರಸಕ್ತಿ, ಗ್ರಾಮರಕ್ಷಕ ಪಡೆ ಸ್ಥಾಪಿಸಬೇಕು.

ಭಾರತದ ಸನ್ನಿವೇಶವನ್ನು ಗಣನೆಗೆ ತೆಗೆದುಕೊಂಡರೆ, ಗ್ರಾಮ ಘಟಕಗಳನ್ನು ರಾಜಕೀಯ ಅಧಿಕಾರದ ಮೂಲ ಘಟಕಗಳನ್ನಾಗಿ ಮಾಡತಕ್ಕದ್ದು ಮತ್ತು ಗ್ರಾಮಮಟ್ಟದಲ್ಲಿ ಆಡಳಿತದ ನಿರ್ವಹಣೆಯನ್ನು ಪೂರ್ಣವಾಗಿ ಗ್ರಾಮಸಭೆಗೆ ಬಿಡತಕ್ಕದ್ದು. ಗ್ರಾಮದ ವಯಸ್ಕರೆಲ್ಲರನ್ನೊಳಗೊಂಡ ಗ್ರಾಮಸಭೆ ಗ್ರಾಮದ ಆಡಳಿತ ನಡೆಸತಕ್ಕದ್ದು. ಪ್ರತಿ ವರ್ಷ ಎಲ್ಲ ಪ್ರೌಢ ಸ್ತ್ರೀ-ಪುರುಷರು ಐವರು ಸದಸ್ಯರುಳ್ಳ ಪಂಚಾಯಿತಿಯನ್ನು ಚುನಾವಣೆಯ ಮೂಲಕ ರಚಿಸಬೇಕು. ಗ್ರಾಮ ಪಂಚಾಯತಿಯೇ

ಶಾಸಕಾಂಗ, ನ್ಯಾಯಾಂಗ ಹಾಗೂ ಕಾರ್ಯಾಂಗಗಳ ಕಾರ್ಯ ನಿರ್ವಹಿಸುತ್ತದೆ. ವ್ಯಕ್ತಿ ಸ್ವಾತಂತ್ರ್ಯದ ಆಧಾರದ ಮೇಲೆ ಪರಿಪೂರ್ಣ ಜನತಂತ್ರ ಪಂಚಾಯತಿಯು ಮೂಲಾಧಾರವಾಗಿದೆ. ವ್ಯಕ್ತಿಯೇ ತನ್ನ ಪ್ರಭುತ್ವದ ಶಿಲ್ಪಿ. ಅವನಿಗೂ ಹಾಗೂ ಅವನಿಂದ ನಿರ್ಮಿತ ಸರಕಾರಕ್ಕೆ ಅಹಿಂಸೆಯೇ ತಾರಕ ಮಂತ್ರವಾಗಬೇಕು. ಇಂತಹ ಗ್ರಾಮ ಇಡೀ ವಿಶ್ವದ ಶಕ್ತಿಯನ್ನು ಎದುರಿಸುವ ಸಾಮರ್ಥ್ಯ ಹೊಂದುವುದು. ಹಳ್ಳಿಗನು ತನ್ನ ಹಾಗೂ ತನ್ನ ಹಳ್ಳಿಯ ಗೌರವ ರಕ್ಷಿಸುವುದಕ್ಕಾಗಿ ಪ್ರತಿಯೊಬ್ಬನೂ ಪ್ರಾಣಾರ್ಪಣೆ ಮಾಡಲು ಸಿದ್ಧನಾಗಬೇಕು. ಇದೇ ಗ್ರಾಮ ಸ್ವರಾಜ್ಯದ ತಿರುಳಾಗಿದೆ. ಇದು ಜನತೆಯ ನೇರ ಪಾತ್ರವಿರುವ ಪ್ರಜಾತಂತ್ರ ಎನಿಸಿಕೊಳ್ಳುತ್ತದೆ. ಈ ವಿಶಾಲ ತಳಹದಿಯನ್ನು ಹೊಂದಿದ ಪ್ರಜಾತಂತ್ರ ತಾಲ್ಲೂಕ್, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟಗಳಲ್ಲಿ ಪ್ರಜಾಪ್ರತಿನಿಧಿ ಮಂಡಲಗಳ ಮೂಲಕ ಆಯಾ ಮಟ್ಟಕ್ಕೆ ಸಂಬಂಧಿಸಿದ ಆಡಳಿತ ವ್ಯವಹಾರಗಳನ್ನು ನಡೆಸುತ್ತವೆ. ಈ ಐದು ಅಂತಸ್ತಿನ ರಾಜಕೀಯ ಆಡಳಿತ ವ್ಯವಸ್ಥೆಯಲ್ಲಿ ಮೇಲಿನ ಮಟ್ಟಕ್ಕೆ ಹೋಗುತ್ತಾ ಹೋಗುತ್ತಾ ಅಧಿಕಾರ ಕಡಿಮೆಯಾಗುತ್ತಾ ಹೋಗುತ್ತದೆ. ಅಂದರೆ ಈಗ ತಲೆಕೆಳಗಾಗಿರುವ ಪ್ರಜಾತಂತ್ರದ ಪಿರಮಿಡ್ ತನ್ನ ನೈಜಸ್ಥಿತಿಗೆ ಬಂದು ನಿಲ್ಲುತ್ತದೆ. ಇದು ಗಾಂಧೀಜಿಯವರ ಗ್ರಾಮರಾಜ್ಯ ತತ್ವದ ರಾಜಕೀಯ ವಿಕೇಂದ್ರೀಕರಣದ ಸ್ಥೂಲ ಚಿತ್ರಣವಾಗಿದೆ.

ರಾಜಕೀಯ ವಿಕೇಂದ್ರೀಕರಣ, ಆರ್ಥಿಕ ಸಮಾನತೆ ಹಾಗೂ ಸಾಮಾಜಿಕ ನ್ಯಾಯವಿಲ್ಲದ ಪ್ರಜಾಪ್ರಭುತ್ವವು ಟೊಳ್ಳಾಗಿರುತ್ತದೆ. ಆರ್ಥಿಕ ವ್ಯವಸ್ಥೆಯ ಬದಲಾವಣೆಯಾಗದೆ ಕೇವಲ ರಾಜಕೀಯ ವಿಕೇಂದ್ರೀಕರಣವಾದರೆ ಅದು ವಿಕೃತ ವ್ಯವಸ್ಥೆಯಾಗುತ್ತದೆ. ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಗಳಿರುವ ವ್ಯವಸ್ಥೆಯಲ್ಲಿ ರಾಜಕೀಯ ವಿಕೇಂದ್ರೀಕರಣದಿಂದ ಶೋಷಣೆಯ ಪ್ರವೃತ್ತಿ ಅಸಹನೀಯ ವಾಗುವುದುಂಟು. ಆದುದರಿಂದ ರಾಜಕೀಯ ವಿಕೇಂದ್ರೀಕರಣದ ಜೊತೆ ಜೊತೆಯಲ್ಲಿ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಗಳಲ್ಲೂ ಆಮೂಲಾಗ್ರ ಬದಲಾವಣೆ ಅಗತ್ಯ.

ಗಾಂಧೀಜಿ ರಾಜಕೀಯ ನೀತಿಗೆ ಒಂದು ಹೊಸ ದೃಷ್ಟಿಕೋನ ತಂದುಕೊಟ್ಟರು. ಗಾಂಧೀಜಿಯ ದೃಷ್ಟಿಯಲ್ಲಿ ರಾಜಕೀಯ, ಧರ್ಮ ಮತ್ತು ನೀತಿಗಳ ನಡುವೆ ಅಂತರವಿಲ್ಲ. ಸಾಮಾನ್ಯವಾದ ರಾಜಕೀಯ ಚಿಂತನೆಯಲ್ಲಿ ಕಂಡುಬರುವ ರಾಜಧರ್ಮ ಮತ್ತು ಸಾಮಾನ್ಯ ಧರ್ಮಗಳ ನಡುವಿನ ಕಂದರವನ್ನು ಗಾಂಧೀಜಿ ತಿರಸ್ಕರಿಸುತ್ತಾರೆ. ರಾಜಕೀಯವನ್ನು ಒಂದು ರಾಜ್ಯ ವ್ಯವಸ್ಥೆ ಅಥವಾ ರಾಜ್ಯಾಧಿಕಾರವನ್ನು ಕಟ್ಟಿ ಕಾಪಾಡುವ ಕೆಲಸವೆಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಆದರೆ ಗಾಂಧೀಜಿ ರಾಜಕೀಯವನ್ನು ಒಂದು ನಿರಂತರ, ನಿಸ್ವಾರ್ಥ, ಅಹಿಂಸಾತ್ಮಕ ಸಾಮಾಜಿಕ ಸೇವೆಯೆಂದು ಪರಿಗಣಿಸಿದರು. ಇದರ ಗುರಿ "ಸರ್ವೋದಯ". ಅಂದರೆ ಇಡೀ

ಸಮಷ್ಟಿಯ ನ್ಯಾಯಯುಕ್ತ, ನೀತಿಯುಕ್ತ, ಸರ್ವತೋಮುಖ ಅಭಿವೃದ್ಧಿ. ಆದ್ದರಿಂದ ರಾಜಕೀಯ ಒಂದು ನಿರಂತರ ನಿಸ್ವಾರ್ಥ ಸಾಮಾಜಿಕ ಸೇವೆ. ಗಾಂಧೀಜಿಗೆ ರಾಜಕೀಯವು ಒಂದು ಶಕ್ತಿ ಆಟವಲ್ಲ. ಇದು ವೀರ ನಾಯಕರಿಗಾಗಿ ಅಂದರೆ ಹೀರೋಗಳಿಗಾಗಿ ಮೀಸಲಿಲ್ಲ. ಗಾಂಧೀಜಿಗೆ ರಾಜಕೀಯವು ಸತ್ಯ, ಬ್ರಹ್ಮಚರ್ಯ, ಅಹಿಂಸೆ, ವೈರಾಗ್ಯ ಮತ್ತು ಅಪರಿಗ್ರಹಗಳಿಂದ ಕೂಡಿದ ಒಂದು ವ್ರತ. ಇದು ಒಬ್ಬ ಸತ್ಯವಂತ ಶ್ರೀಸಾಮಾನ್ಯನೂ ಮಾಡಬಹುದಾದ ಮತ್ತು ಮಾಡಬೇಕಾದ ಕೆಲಸ. ರಾಜಕೀಯ ಮತ್ತು ನೀತಿಯನ್ನು ಬೇರ್ಪಡಿಸಲಾಗುವುದಿಲ್ಲ. ಗಾಂಧೀಜಿಯ ರಾಜಕೀಯವು ಸತ್ಯ ಸಮಗ್ರತೆಗಳನ್ನು ಹೊರತುಪಡಿಸಿರಲಿಲ್ಲ. ಹಾಗೆಯೇ ರಾಜಕೀಯವು ಆದರ್ಶದಿಂದ ದೂರಸರಿದ ಆಚಾರ–ವಿಚಾರವಲ್ಲ.

ಗಾಂಧೀವಾದದಲ್ಲಿ 'ಸ್ವರಾಜ್ಯ'ಪರಿಕಲ್ಪನೆಗೆ ಒಂದು ಪರಿಪೂರ್ಣತೆ ಇದೆ. ಇಲ್ಲಿ ಸ್ವರಾಜ್ಯವೆಂದರೆ ಸ್ವರಾಜ್ಯ ಅಥವಾ ಸ್ವೇಚ್ಛಾಚಾರವೆಂಬ ನಕಾರಾತ್ಮಕ ಅರ್ಥವಲ್ಲ. ಗಾಂಧೀಜಿಯವರು 'ಸ್ವರಾಜ್ಯ'ವನ್ನು ಆತ್ಮನಿಬಂಧನೆ, 'ಆತ್ಮನಿಯಂತ್ರಣ', 'ಆತ್ಮಪರಿವರ್ತನೆ', 'ಆತ್ಮೋದ್ಧಾರ' ಎಂಬ ವಿಶಾಲವೂ ಮತ್ತು ಸಕಾರಾತ್ಮಕವೂ ಆದ ಅರ್ಥದಲ್ಲಿ ಬಳಸುತ್ತಾರೆ. ಈ ಅರ್ಥದಲ್ಲಿ ಸ್ವರಾಜ್ಯವು ಒಬ್ಬ ಸ್ವೇಚ್ಛಾಚಾರಿಯ ಅನಿರ್ಬಂಧಿತ ಸ್ವಾತಂತ್ರ್ಯವಾಗುವ ಬದಲು ಒಬ್ಬ ಸತ್ಯಾನ್ವೇಷಕನ ನೈತಿಕ ಹೊಣೆಯಾಗಿರುತ್ತದೆ. ರಾಷ್ಟ್ರಸ್ವರಾಜ್ಯ ಅಥವಾ ಗ್ರಾಮ ಸ್ವರಾಜ್ಯ ಪರಿಕಲ್ಪನೆಗಳನ್ನು ಗಾಂಧೀ ಬಳಸಿದ್ದು ಈ ಪ್ರಬುದ್ಧ ಅರ್ಥದಲ್ಲೇ. ಗಾಂಧೀಜಿಯ ರಾಜಕೀಯದಲ್ಲಿ ವಿಕೇಂದ್ರೀಕರಣ ಸಹಜವೂ, ನೈತಿಕವೂ, 'ಪ್ರಜಾಪ್ರಭುತ್ವ'ವೂ ಮತ್ತು 'ದಕ್ಷ'ವೂ ಆಗಿರುತ್ತದೆ.

ಗಾಂಧೀವಾದದಲ್ಲಿ ವ್ಯಕ್ತಿಗಾಗಲೀ, ರಾಷ್ಟ್ರಕ್ಕಾಗಲೀ ಅಥವಾ ಅದರ ವಿವಿಧ ಹಂತಗಳ ಸಮುದಾಯಗಳಿಗಾಗಲೀ ಆತ್ಮನಿಬಂಧನೆ ಅಥವಾ ಆತ್ಮನಿಯಂತ್ರಣ 'ಸ್ವರಾಜ್ಯಕ್ಕೆ' ಅನಿವಾರ್ಯ. ಅಧಿಕಾರ ಕೇಂದ್ರೀಕೃತವಾಗಿದ್ದರೆ ಕೆಳಮಟ್ಟದಲ್ಲಿ ಈ ಸ್ವರಾಜ್ಯ ಸಾಧ್ಯವಿಲ್ಲ. ಇದು ವಿಕಾಸಕ್ಕೆ ಅಡ್ಡಿಯಾಗುತ್ತದೆ. ಆದ್ದರಿಂದ ಮೊದಲನೆಯದಾಗಿ, ವಿಕೇಂದ್ರೀಕರಣ ಸ್ವಾತಂತ್ರ್ಯದ ಇನ್ನೊಂದು ಮುಖ. ವಿಕೇಂದ್ರೀಕರಣವಿಲ್ಲದೆ ಸ್ವಾತಂತ್ರ್ಯ ಅಸಹಜ ಮತ್ತು ಅಪೂರ್ಣ.

ವಿಕೇಂದ್ರೀಕರಣವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುತ್ತದೆ ಹಾಗೂ ನೈಜೀಕರಿಸುತ್ತದೆ. ತಮ್ಮ ಸಮಸ್ಯೆಗಳಿಗೆ ತಾವೇ ಚಿಂತನೆ ಮಾಡಿ ತಾವೇ ಬಗೆಹರಿಸುವ ಜವಾಬ್ದಾರಿ ಮತ್ತು ಅವಕಾಶಗಳುಳ್ಳ ಪ್ರಜಾರಾಜ್ಯ ಸ್ಥಾಪಕವಾಗುತ್ತದೆ. ಸ್ಥಳೀಯವಾಗಿ ಹಾಗೂ ಹಂತಹಂತದ ವಿಕೇಂದ್ರೀಕೃತ ವ್ಯವಸ್ಥೆಯ ಮೂಲಕ ರಾಜಕೀಯದಲ್ಲಿ ಪ್ರಜೆಗಳ ನೇರ ಭಾಗವಹಿಸುವಿಕೆಗೆ ಇದು ಅವಕಾಶ ಮಾಡಿಕೊಟ್ಟು ಪ್ರಜಾಪ್ರಭುತ್ವವನ್ನು ನೈಜವಾಗಿಸುತ್ತದೆ.

ಗಾಂಧೀಜಿಯವರದು ಒಂದು ಗ್ರಾಮಾಧಾರಿತ ಸ್ವರಾಜ್ಯ ಪರಿಕಲ್ಪನೆ. ಪಾಶ್ಚಿಮಾತ್ಯೀಕರಣ ಅಥವಾ ಆಧುನೀಕರಣದ ಹೆಸರಿನಲ್ಲಿ ನರಕ ಪ್ರಾಯವಾಗಿರುವ ಆಧುನಿಕ ನಗರ ನಾಗರಿಕತೆಗೆ ಗಾಂಧೀಜಿಯವರ ವಿರೋಧವಿತ್ತು. ಒಂದು ಸ್ವರ್ಗಪ್ರಾಯವಾದ ಹಳ್ಳಿ ಸಮುದಾಯದ ಪರಿಕಲ್ಪನೆ ಅವರದಾಗಿತ್ತು. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆ ಅವರ ಸತ್ಯ ಮತ್ತು ಸಮಗ್ರತೆಗಳ ಅನ್ವೇಷಣೆಯ ಪ್ರತಿರೂಪ. ಇಲ್ಲಿ ಅವರ ಆದರ್ಶಾತ್ಮಕ ರಾಜಕೀಯ ಪರಿಕಲ್ಪನೆ ಮತ್ತು ಸಾಧನಾ ಪ್ರಯತ್ನಗಳನ್ನು ಕಾಣಬಹುದು. ವಿಕೇಂದ್ರೀಕರಣ ಮತ್ತು ಗ್ರಾಮ ಸ್ವರಾಜ್ಯ ಪರಿಕಲ್ಪನೆಗಳು ಅಸಂಬದ್ಧಗೊಂಡ ಹಗಲು ಕನಸಲ್ಲ. ಇವು ಸತ್ಯನಿಷ್ಠ, ಶ್ರೀಸಾಮಾನ್ಯ ನಿಷ್ಠ ತರ್ಕಬದ್ಧ ಪರಿಕಲ್ಪನೆಗಳು. ಇವುಗಳ ನೈತಿಕ ತತ್ತ್ವ ಪ್ರಜಾಸತ್ತಾತ್ಮಕ ತತ್ತ್ವ ಹಾಗೂ ಒಕ್ಕೂಟಾತ್ಮಕ ತತ್ತ್ವಗಳಾಧಾರಿತ ಪ್ರಬುದ್ಧ ರಾಜಕೀಯ ಸೂತ್ರಗಳು.

ಮೇಲ್ಕಂಡ ಹಿನ್ನೆಲೆಯಲ್ಲಿ ಗಾಂಧೀಜಿಯವರ ಪ್ರಧಾನ ರಾಜಕೀಯ ಚಿಂತನೆಗಳಾದ 'ಸರ್ವೋದಯ' ಮತ್ತು 'ಅಂತ್ಯೋದಯ' ಗ್ರಾಮರಾಜ್ಯ-ರಾಮರಾಜ್ಯ, ಹರಿಜನೋದ್ಧಾರ, ಸ್ತ್ರೀಸಮಾನತೆ ಮುಂತಾದ ತತ್ತ್ವಗಳು ಹೇಗೆ ಅಂದಿನ ಮೈಸೂರು ಸಂಸ್ಥಾನದಲ್ಲಿ ಅದೂ ಬ್ರಿಟಿಷ್ ಆಶ್ರಿತ ವಸಾಹತು ರಾಜ್ಯವೊಂದರಲ್ಲಿ ಅನುಷ್ಠಾನಗೊಂಡವೆಂಬುದು ಕುತೂಹಲಕಾರಿಯಾಗಿದೆ. 'ಸರ್ವೋದಯ'ವೆಂದರೆ ರಾಜ್ಯ ಅಥವಾ ಸಮಾಜದ ಸಂಪತ್ತು ಮತ್ತು ಸಂಪನ್ಮೂಲಗಳಲ್ಲಿ ಸರ್ವರಿಗೂ ಸಮಪಾಲು ದೊರಕಿ 'ಸರ್ವೇಜನಾಃ ಸುಖಿನೋ ಭವಂತು' ಎಂಬ ಆದರ್ಶದ ಕಲ್ಪನೆಯಿದ್ದರೆ, 'ಅಂತ್ಯೋದಯ' ತತ್ತ್ವದ ಪ್ರಕಾರ ಸಮಾಜದ ಕಟ್ಟಕಡೆಯವರ ಉದ್ಧಾರಕ್ಕೆ ರಾಜ್ಯದ ಸಂಪತ್ತು ವಿನಿಯೋಗವಾಗಬೇಕು. ಮಹಾತ್ಮಗಾಂಧೀಜಿಯವರು ಸೂಚಿಸಿದ ಸರ್ವೋದಯ ತತ್ತ್ವವು ಮನುಷ್ಯ ಜೀವನದ ಆರ್ಥಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ – ಈ ಎಲ್ಲಾ ಮುಖಗಳನ್ನು ಒಳಗೊಂಡಿರುವ ಒಂದು ಸ್ಥೂಲ ಸಾಮಾಜಿಕ ಕಲ್ಪನೆಯಾಗಿದೆ. ಅದು ಆರ್ಥಿಕ ಭಾವನೆಗಿಂತಲೂ ನೈತಿಕ ಮತ್ತು ಸಾಮಾಜಿಕ ಭಾವನೆಗಳನ್ನು ಹೆಚ್ಚಾಗಿ ಹೊಂದಿದೆ. ಹಾಗಿದ್ದರೂ ಅದು ಸಹಕಾರದ ಸಿದ್ಧಾಂತ ಮತ್ತು ತತ್ತ್ವದೊಂದಿಗೆ ಗಮನಾರ್ಹ ಹೋಲಿಕೆಯುಳ್ಳದ್ದಾಗಿದೆ. ಡಾ. ಓ. ಆರ್. ಕೃಷ್ಣಸ್ವಾಮಿಯವರು ಅಭಿಪ್ರಾಯಪಡುವಂತೆ ಈ ಎರಡೂ ಸಿದ್ಧಾಂತಗಳು ವ್ಯಕ್ತಿ ಸ್ವಾತಂತ್ರ್ಯ, ಸಾಮಾಜಿಕ ಜವಾಬ್ದಾರಿ, ವಿತರಣೆಯ ನ್ಯಾಯ, ಸಮಾನತೆ, ನೈತಿಕ ಮೌಲ್ಯಗಳು, ವಿಕೇಂದ್ರೀಕೃತ ಅಭಿವೃದ್ಧಿಗಳಂತಹ ವಿಚಾರಗಳಲ್ಲಿ ಸಾಮಾನ್ಯ ಗುಣಗಳನ್ನು ಹೊಂದಿವೆ.

ಸರ್ವೋದಯ ಸಮಾಜದಲ್ಲಿ ಜಾತಿ, ಮತ, ಕುಲಗಳಿಗೆ ಎಳ್ಳಷ್ಟೂ ಅವಕಾಶವಿಲ್ಲ. ಶೋಷಣಾರಹಿತ ಸಾಮಾಜಿಕ ಜೀವನ ರೂಪಿಸುವುದು ಇದರ ಧ್ಯೇಯವಾಗಿದೆ. ವ್ಯಕ್ತಿತ್ವ ವಿಕಾಸಕ್ಕೆ ಇಲ್ಲಿ ಸಂಪೂರ್ಣ ಅವಕಾಶವಿದೆ. ಉಚ್ಚ–ನೀಚ, ಕರಿಯ–ಬಿಳಿಯ, ಬಡವ–ಬಲ್ಲಿದ, ಸುಶಿಕ್ಷಿತ–ಅಶಿಕ್ಷಿತ, ಬ್ರಾಹ್ಮಣ–ಶೂದ್ರ, ಸ್ತ್ರೀ–ಪುರುಷ – ಇವೇ ಮೊದಲಾದ ಭೇದಭಾವಗಳಿಗೆ ಸರ್ವೋದಯದಲ್ಲಿ ಅವಕಾಶವಿಲ್ಲ. ಎಲ್ಲರೂ ದೇವರ ಮಕ್ಕಳು. ಇಂತಹ ಸಮಾಜ ವ್ಯವಸ್ಥೆಯಲ್ಲಿ ಎಲ್ಲರೂ ತಮ್ಮ ತಮ್ಮ ಶರೀರ ಶ್ರಮದಿಂದ ದುಡಿದು ಉಣ್ಣಬೇಕು. ಪ್ರತಿಯೊಬ್ಬರೂ ಶರೀರ ಶ್ರಮವನ್ನು ಗೌರವಿಸಬೇಕು. ಪ್ರತಿಯೊಬ್ಬನೂ ತನ್ನ ಕಲ್ಯಾಣಕ್ಕಾಗಿ ದುಡಿಯುವುದರ ಜೊತೆಗೆ ಇಡೀ ಸಮಾಜದ ಹಿತಕ್ಕಾಗಿ ಶ್ರಮಿಸಬೇಕು. ಎಲ್ಲ ವ್ಯಕ್ತಿಗಳಿಗೂ ಸಮಾನ ಗೌರವ ಸಲ್ಲಬೇಕು. ಸ್ತ್ರೀ ಪುರುಷರಿಗೆ ಸಮಾನಾಧಿಕಾರವಿರಬೇಕು. ತನ್ಮೂಲಕ ಶೋಷಿತರು, ಬಡವರು, ಹಿಂದುಳಿದವರು ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗೊಳಪಟ್ಟು ಸಮಾನತೆ, ಐಕ್ಯತೆ, ಸಮನ್ವಯತೆಗಳು ಸಾಕಾರಗೊಳ್ಳಬೇಕೆಂಬುದೇ ಗಾಂಧಿಯವರ ಆಶಯವಾಗಿತ್ತು ಎಂಬುದನ್ನು ಮುಂದಿನ ಕೆಲವು ವಿಚಾರಧಾರೆಗಳಿಂದ ತಿಳಿದುಕೊಳ್ಳಬಹುದು.

ಗಾಂಧೀಜಿ ಮತ್ತು ಗ್ರಾಮರಾಜ್ಯ

ಗಾಂಧೀಜಿಗೆ ಖಾದಿ ಮತ್ತು ಗ್ರಾಮೋದ್ಯೋಗ ಬಹಳ ಪ್ರಿಯವಾದ ವಿಷಯ. ಖಾದಿಯಿಂದ ಗುಲಾಮಗಿರಿಯ ನಾಶ ಮತ್ತು ಗ್ರಾಮೋದ್ಯೋಗದಿಂದ ಸ್ವಾವಲಂಬನೆ ಹೆಚ್ಚಳ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದರು. ಖಾದಿಯ ಪ್ರಧಾನ ಉದ್ದೇಶವೆಂದರೆ ಗ್ರಾಮೀಣ ಪ್ರದೇಶದಲ್ಲಿರುವ ಜನರಿಗೆ ಉದ್ಯೋಗವನ್ನು ಕಲ್ಪಿಸುವುದು. ಗ್ರಾಮದ ಮಹಿಳೆಯರಿಗಂತೂ ಖಾದಿ ಒಂದು ವರ. ಗಾಂಧೀಜಿಯ ಗ್ರಾಮರಾಜ್ಯ ಕಾಲ್ಪನಿಕವಾದುದಲ್ಲ, ಸಹಜವಾದದ್ದು.

ಗಾಂಧೀಜಿಯವರ ಸ್ವರಾಜ್ಯ ಕಲ್ಪನೆ

ಗಾಂಧೀಜಿಯವರ ದೃಷ್ಟಿಯಲ್ಲಿ ಸ್ವರಾಜ್ಯದ ಪರಿಕಲ್ಪನೆ ಎಂದರೆ ಅದು ಸ್ವಯಂ ಆಡಳಿತ, ಸ್ವಯಂ ನಿಯಂತ್ರಿತ ಸಮಾಜದ ಹಾಗೂ ಎಲ್ಲ ಹಂತಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಬಳಸಲಾಗುವ ಅಧಿಕಾರದ ಉನ್ನತ ಮಟ್ಟದಿಂದ ವಿಕೇಂದ್ರೀಕರಣವಾಗಿತ್ತು. ಕಾಂಗ್ರೆಸ್ ಎಂಬುದು ರಾಜಕೀಯ ಪಕ್ಷವಾಗಿ ಉಳಿಯುವ ಬದಲು ಜನಸೇವಾ ಸಂಸ್ಥೆಯಾಗಿ ಪರಿವರ್ತಿತವಾಗಬೇಕು. ರಾಷ್ಟ್ರ ನಿರ್ಮಾಣದ ಕಾರ್ಯಭಾರದಲ್ಲಿ ಜನರನ್ನು ಸಂಘಟಿಸುವ ಸಂಸ್ಥೆಯಾಗಬೇಕು, ಸರ್ಕಾರದ ಮೇಲೆ

4

ನೈತಿಕವಾಗಿ ಗಾಢ ಪ್ರಭಾವ ಬೀರುವ ಸಂಸ್ಥೆಯಾಗಬೇಕು ಎಂದು ಗಾಂಧೀಜಿ ಆಶಿಸಿದ್ದರು. ಆದರೆ ಇಂದು ಸ್ವಾತಂತ್ರ್ಯ ದೊರೆತು ೫೯ ವರ್ಷಗಳಾಗಿದ್ದರೂ ಕಾಂಗ್ರೆಸ್ ಪಕ್ಷ ಸ್ವಾರ್ಥ ಸಾಧಕರ ಅಧಿಕಾರ ಲಾಲಸೆಯಿಂದ ಪರಿತಪಿಸುತ್ತಿರುವುದು ದುರದೃಷ್ಟಕರ. ಗಾಂಧೀಜಿ ಕನಸು ಕಂಡ ಸ್ವರಾಜ್ಯ ಕಲ್ಪನೆಗೂ ಇಂದಿನ ಭಾರತಕ್ಕೂ ಉತ್ತರ ದಕ್ಷಿಣ ಧ್ರುವಗಳ ಅಂತರ.

ಗಾಂಧೀಜಿ ಮತ್ತು ಮಹಿಳಾ ಸಮಾನತೆ

ಭಾರತದಲ್ಲಿ ಗಾಂಧೀಜಿಯವರು ಮಹಿಳೆಯರ ಸರ್ವತೋಮುಖ ಅಭಿವೃದ್ಧಿಯ ಕನಸು ಕಂಡಿದ್ದರು. ೧೯೨೯ರಲ್ಲಿ ಗಾಂಧಿ ತಮ್ಮ ಯಂಗ್ ಇಂಡಿಯಾದಲ್ಲಿ ಮಹಿಳಾ ಸಮಾನತೆಗೆ ಪ್ರಾಧಾನ್ಯ ನೀಡಿ ಬರೆದಿದ್ದರು. ಅವರು ಮತ್ತೆ ಮತ್ತೆ ಮಹಿಳೆಯರ ಸ್ಥಾನಮಾನ ಹೆಚ್ಚಿಸುವ ಬಗ್ಗೆ ಗಮನ ನೀಡಿದ್ದರು.

೧೯೪೭ರ ಸ್ವಾತಂತ್ರ್ಯದ ನಂತರ ಮತ್ತು ೧೯೫೦ ರಲ್ಲಿ ಭಾರತ ಗಣರಾಜ್ಯ ಅಸ್ತಿತ್ವಕ್ಕೆ ಬಂದ ಮೇಲೆ ಮಹಿಳೆಯರಿಗೆ ಮತದಾನದ ಹಕ್ಕು ಮತ್ತು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಾನತೆಯ ಭರವಸೆ ಮೂಡಿಸಿತು. ನಾಡಿನ ಅತ್ಯುನ್ನತ ಕಾನೂನಾಗಿರುವ ಸಂವಿಧಾನವು ಗಂಡು ಮತ್ತು ಹೆಣ್ಣು ಇಬ್ಬರಿಗೂ ಸಮಾನ ಸ್ಥಾನಮಾನ, ಸಾಮಾಜಿಕ ನ್ಯಾಯ, ಆರ್ಥಿಕ ಮತ್ತು ರಾಜಕೀಯ ಸಮಾನತೆಗಳನ್ನು ಕಲ್ಪಿಸಿದೆ. ಪ್ರಜಾಪ್ರಭುತ್ವದಲ್ಲಿ ಮಹಿಳೆಯರ ಸಮಸ್ಯೆಗಳ ಬಗ್ಗೆ ಜಾಗೃತಿ ಉಂಟಾಯಿತು. ಗಾಂಧೀಜಿಯವರ ದೃಷ್ಟಿಕೋನದ ಆಧಾರದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಪ್ರಥಮಬಾರಿಗೆ ಪಂಚಾಯತ್ ವ್ಯವಸ್ಥೆಯಲ್ಲಿ ಶೇ. ೨೫ರಷ್ಟು ಸದಸ್ಯರ ಸ್ಥಾನಗಳ ಮೀಸಲಾತಿ ನೀಡಲಾಯಿತು. ಈ ಅಂಶ ಕೇಂದ್ರ ಸರ್ಕಾರದ ಗಮನ ಸೆಳೆದು ೧೯೯೩ರ ಪಂಚಾಯತ್ ರಾಜ್ ಕಾಯಿದೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರ ಒಟ್ಟು ಸ್ಥಾನಗಳಲ್ಲಿ ಶೇ. ೩೩ ಸ್ಥಾನಗಳನ್ನು ಸದಸ್ಯ ಸ್ಥಾನಗಳಿಂದ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೂ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಈ ಅಂಶ ಲಿಂಗ ತಾರತಮ್ಯ ನಿವಾರಣೆಯಲ್ಲಿ ಮಹತ್ತರ ಪಾತ್ರವಾಗಿರುತ್ತದೆ. ಆದರೆ ಈ ಅಂಶವನ್ನು ಮಹಿಳೆಯರು ಮತ್ತು ಪುರುಷರು ಅರ್ಥ ಮಾಡಿಕೊಂಡು ಕಾರ್ಯನಿರ್ವಹಿಸಬೇಕಾಗಿದೆ.

ಗಾಂಧೀಜಿ ಮತ್ತು ಧರ್ಮದರ್ಶಿತ್ವ

ಮಹಾತ್ಮಾ ಗಾಂಧೀಜಿಯವರು ತಮ್ಮ ಚಿಂತನೆಧಾರೆಯಾದ ಧರ್ಮದರ್ಶಿತ್ವವನ್ನು ಇಡೀ ವಿಶ್ವಕ್ಕೆ ಕಾಣಿಕೆಯಾಗಿ ಕೊಟ್ಟಿದ್ದಾರೆ. ಇರುವ ಆಸ್ತಿ ಮತ್ತು ಹಣ ತನಗೆ ಮಾತ್ರ

ಎಂಬ ಭಾವನೆಗೆ ಬದಲಾಗಿ ಅದು ಲೋಕಕಲ್ಯಾಣಕ್ಕಾಗಿ ಹಾಗೂ ಎಲ್ಲರ ಸೌಖ್ಯಜೀವನಕ್ಕಾಗಿ ಉಪಯೋಗವಾಗುವಂತೆ ನೋಡಿಕೊಳ್ಳಬೇಕು ಎಂಬ ಆಂತರಿಕ ಶ್ರದ್ಧೆಯೇ ಗಾಂಧೀಜಿಯ ಧರ್ಮದರ್ಶಿತ್ವದ ತಿರುಳು.

ಬ್ರಿಟಿಷರು ನಗ್ನ ಫಕೀರ ಎಂದು ಟೀಕಿಸಿದ ಗಾಂಧೀಜಿ ಮೈಮೇಲೆ ಬಟ್ಟೆ ಇಲ್ಲದೆ ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರೂ ಯಾವುದೇ ಹುದ್ದೆಯನ್ನಾಗಲಿ, ಅಧಿಕಾರವನ್ನಾಗಲಿ ಬಯಸದೆ ಕೊನೆಗೆ ನಮ್ಮ ದೇಶದವರಿಂದಲೇ ಕೊಲೆಯಾಗಿದ್ದು ವಿಪರ್ಯಾಸ. ಒಂದು ಚುನಾವಣೆಯಲ್ಲಿ ಗೆದ್ದರೆ ಸಾಕು, ಸ್ಥಾನಗಳಿಗಾಗಿ ಕಚ್ಚಾಡಿ, ಸ್ಥಾನ ಸಿಕ್ಕಿದ ಮೇಲೆ ತನ್ನ ದೇಶದ ಪರಿಸ್ಥಿತಿ, ಜನರ ಪರಿಸ್ಥಿತಿಯನ್ನು ಮರೆತು ಹಗರಣಗಳ ಸುರಿಮಳೆ ಸುರಿಸಿ, ಕೋಟಿಗಟ್ಟಲೆ ಹಣ ಲೂಟಿ ಮಾಡುವ ಇಂದಿನ ನಾಯಕರು ಗಾಂಧೀಜಿಯವರ ಆದರ್ಶಗಳನ್ನು ಮನನ ಮಾಡಿಕೊಂಡು ಅವುಗಳನ್ನು ಪ್ರಾಮಾಣಿಕವಾಗಿ ಪಾಲನೆ ಮಾಡಬೇಕಾಗಿದೆ. ಇವರೇ ಅಲ್ಲದೆ ಈ ದೇಶದ ಎಲ್ಲ ಜನರು ಗಾಂಧೀಜಿಯವರ ಚಿಂತನೆಗಳನ್ನು ಪಾಲಿಸಿದರೆ ಅವರ ಮೌಲ್ಯಗಳಿಗೆ ಗೌರವ ಸಿಕ್ಕುವುದರ ಜೊತೆಗೆ ರಾಷ್ಟ್ರ ಅಭಿವೃದ್ಧಿ ಪಥದತ್ತ ಸಾಗುತ್ತದೆ.

ಆದಾಗ್ಯೂ ಗಾಂಧೀಜಿಯವರ ರಾಜಕೀಯ ಚಿಂತನೆಗಳು ಪ್ರಸ್ತುತ ಭಾರತದ ಕಠಿಣ ಸನ್ನಿವೇಶದಲ್ಲಿ ಎಷ್ಟು ವಾಸ್ತವಿಕವಾದದ್ದು ಎನ್ನುವ ಪ್ರಶ್ನೆ ಏಳುವುದು ಸಹಜವೇ. ಈ ಪ್ರಶ್ನೆಗೆ ಉತ್ತರಿಸುವುದು ಬಹಳ ಕಷ್ಟ ಅನೇಕ ವರ್ಷಗಳ ಅನುಭವದ ನಂತರವೂ ಗಾಂಧೀಜಿಯವರ ರಾಜಕೀಯ ಚಿಂತನೆಗಳು ತುಂಬಾ ವಾಸ್ತವಿಕವಾದುದ್ದು ಮತ್ತು ಶ್ರೇಷ್ಠವಾದುದ್ದು ಎನ್ನುವವರ ಗುಂಪೂ ಇದೆ. ಅವರ ಚಿಂತನೆಗಳು ತುಂಬಾ ಆದರ್ಶವಾದದ್ದು, ವಾಸ್ತವಿಕತೆಗೆ ಸ್ವಲ್ಪವೂ ಸಂಬಂಧವಿಲ್ಲದ್ದು ಎನ್ನುವವರ ಗುಂಪೂ ಇದೆ. ಆದರೆ ಗಾಂಧೀಜಿಯುವರ ಅನೇಕ ರಾಜಕೀಯು ಭಾವನೆಗಳು ಆದರ್ಶಯುತವಾದವು. ಎಲ್ಲಾ ರಾಜಕೀಯ ಚಟುವಟಿಕೆಗಳೂ ನೈತಿಕತೆ, ಆಧ್ಯಾತ್ಮಿಕತೆ, ಮಾನವೀಯತೆ ಮೊದಲಾದ ತತ್ವಗಳ ಆಧಾರದ ಮೇಲೆ ನಡೆಯಬೇಕು ಎನ್ನುವುದು ವಾಸ್ತವಿಕತೆಗೆ ದೂರವಾಗಿದ್ದರೂ ನಾವು ಇಂದಿನ ಸಂದರ್ಭದಲ್ಲಿ ಗಾಂಧೀಜಿಯವರನ್ನು ನಾವು ಮತ್ತೆ ಸ್ಮರಿಸುವಂತಾಗಿದೆ. ಅದು ರಾಜಕೀಯ ಸ್ವಾತಂತ್ರ್ಯ, ಸಮಾನತೆ ಹಾಗೂ ಸರ್ವೋದಯಕ್ಕಾಗಿ.

ಆದುದರಿಂದ ಪ್ರಸ್ತುತ ಭಾರತದ ಸಂದರ್ಭದಲ್ಲಿ ಗಾಂಧೀಜಿಯವರ ರಾಜಕೀಯ ಚಿಂತನೆಗಳು, ಆರ್ಥಿಕ ಸಿದ್ಧಾಂತಗಳು, ಸಾಮಾಜಿಕ ಸುಧಾರಣೆಗಳು ಹಿಂದೆಂದಿಗಿಂತಲೂ ಇಂದು ಅತ್ಯಂತ ಪ್ರಸ್ತುತವೆನಿಸಿವೆ. ಏಕೆಂದರೆ ಮುಕ್ತ ಆರ್ಥಿಕ ನೀತಿಗಳು ಈಗಾಗಲೇ ಸಾಮಾನ್ಯರ ಮೇಲೆ ಕೆಟ್ಟ ಪರಿಣಾಮ ಬೀರಲಾರಂಭಿಸಿವೆ.

ಆರ್ಥಿಕ ಅಸಮಾನತೆ ಸಾಮಾಜಿಕ ಅಸಮತೋಲನಗಳಿಗೆ ಆಸ್ಪದ ನೀಡಿದೆ. ಇಂತಹ ಪರಿಸ್ಥಿತಿಯಲ್ಲಿ ಗಾಂಧೀಜಿಯವರ ಚಿಂತನೆ ಮತ್ತು ಆದರ್ಶಗಳನ್ನು ನೆನೆಯ ಬೇಕಾಗಿರುವುದು ಭಾರತದ ಎಲ್ಲ ಜನರ ಕರ್ತವ್ಯವಾಗಿದೆ.

ಗ್ರಂಥಋಣ

೧. ಡಾ. ಎಸ್. ತಿಪ್ಪೇರುದ್ರಸ್ವಾಮಿ, ಮಹಾತ್ಮ, ಸಂಪುಟ ೧ ಮತ್ತು ೨, ಮೈಸೂರು, ೧೯೭೪

೨. ಕೆ. ಎಸ್. ನಾರಾಯಣಸ್ವಾಮಿ, ಗಾಂಧಿ, ಬೆಂಗಳೂರು, ೧೯೮೦

೩. ಎಸ್. ಆರ್. ರಾಮಸ್ವಾಮಿ (ಸಂ), ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು, ಬೆಂಗಳೂರು, ೧೯೯೮

೪. ಬಿ. ಆರ್. ಪ್ರಾಣೇಶರಾವ್, ಗಾಂಧಿ ಚಿಂತನೆ, ಮೈಸೂರು, ೧೯೯೬.

೫. ಬಿ. ಆರ್. ಪ್ರಾಣೇಶರಾವ್, ಭಾರತದ ಸ್ವಾತಂತ್ರ್ಯ ಮೇರು ವ್ಯಕ್ತಿಗಳು, ಮೈಸೂರು, ೧೯೯೯

೬. ಸಿದ್ದವ್ವನಹಳ್ಳಿ ಕೃಷ್ಣಶರ್ಮ, ಗಾಂಧೀ ಮತ್ತು ಕರ್ನಾಟಕ, ಬೆಂಗಳೂರು, ೧೯೬೯

೭. ಎಸ್. ವಿ. ಶ್ರೀನಿವಾಸರಾವ್, ಗಾಂಧೀಜಿ ಮತ್ತು ಸ್ವಾತಂತ್ರ್ಯ ಸಂಗ್ರಾಮ, ಮೈಸೂರು, ೨೦೦೫

೮. ಎ. ಎನ್. ವೇಣುಗೋಪಾಲರಾವ್, ಗಾಂಧೀಜಿ ಮತ್ತು ರಚನಾತ್ಮಕ ಕಾರ್ಯಗಳು, ಮೈಸೂರು, ೨೦೦೫.

೯. ಡಿ. ಜಿ. ತೆಂಡೂಲ್ಕರ್, ಮಹಾತ್ಮ, ಸಂಪುಟ ೪ (ಗಾಂಧಿಯವರ ಜೀವನ ೧೯೩೪ ರಿಂದ ೧೯೩೮ ರವರೆಗೆ).

೧೦. ಪ್ರೊ. ಎಲ್. ಎಸ್. ಶೇಷಗಿರಿರಾವ್, ಭಾರತದ ಸ್ವಾತಂತ್ರ್ಯ ಸಂಗ್ರಾಮ, ಬೆಂಗಳೂರು, ೧೯೯೭.

❑

೧೨. ಗಾಂಧೀಜಿಯವರ ಆರ್ಥಿಕ ಚಿಂತನೆಗಳ ಪ್ರಭಾವ–ಮೈಸೂರು ಸಂಸ್ಥಾನದಲ್ಲಿ

ಬದನವಾಳು ಖಾದಿ ಕೇಂದ್ರದ ಸ್ಥಾಪನೆ ಮತ್ತು ಬೆಳೆವಣಿಗೆ

–ಆರ್. ಸಿದ್ದರಾಜು

ಮೈಸೂರು ಸಂಸ್ಥಾನದ ನಂಜನಗೂಡು ತಾಲ್ಲೂಕು ಹಾಗೂ ಮಹಾತ್ಮ ಗಾಂಧಿಯವರ ನಡುವಣ ಸಂಬಂಧಗಳು ಆಧುನಿಕ ಭಾರತದ ಚರಿತ್ರೆಯಲ್ಲಿ ಪ್ರಮುಖ ಮತ್ತು ಕರ್ನಾಟಕದ ಚರಿತ್ರೆಯಲ್ಲಿ ಒಂದು ಆಕರ್ಷಕ ಅಧ್ಯಯನವಾಗಿದೆ. ಇದಕ್ಕೆ ಸಂಬಂಧಿಸಿದಂತೆ ನಮಗೆ ಹಲವಾರು ಚಾರಿತ್ರಿಕ ಆಧಾರಗಳು ಸಿಗುತ್ತವೆ. ಕರ್ನಾಟಕ ರಾಜ್ಯ ಮತ್ತು ಗಾಂಧಿಯವರ ಸಂಬಂಧಗಳು ಎಷ್ಟೊಂದು ಮಹೋನ್ನತವಾಗಿದ್ದವೆಂದರೆ, ಭಾರತ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ಕರ್ನಾಟಕವನ್ನು 'ಗಾಂಧಿ ಪ್ರಾಂತ್ಯವೆಂದೇ' ಕರೆಯಲಾಗುತ್ತಿತ್ತೆಂಬುದು ಇದನ್ನು ಪುಷ್ಟೀಕರಿಸುತ್ತದೆ. 'ಮೈಸೂರಿನ ಗಾಂಧಿ' ಎಂದೇ ಪ್ರಖ್ಯಾತರಾದ ತಗಡೂರು ರಾಮಚಂದ್ರರಾಯರಂತಹ ನೂರಾರು ಅಪ್ಪಟ ಗಾಂಧೀವಾದಿಗಳು ಸೃಷ್ಟಿಯಾಗಿ ಅವರ ಮೂಲಕ ಗಾಂಧಿಯವರ ಆದರ್ಶಕಲ್ಪನೆಗಳಾದ ಗ್ರಾಮರಾಜ್ಯ–ರಾಮರಾಜ್ಯ, ಸರ್ವೋದಯ, ಅಂತ್ಯೋದಯ, ಸ್ವರಾಜ್ಯ, ಸಹಕಾರ, ಗ್ರಾಮಕೈಗಾರಿಕೆಗಳು, ಹರಿಜನ ಸೇವಾಸಂಘಗಳು ಮೊದಲಾದ ಅನೇಕ ರಚನಾತ್ಮಕ ಕಾರ್ಯಕ್ರಮಗಳು ವಿಶಿಷ್ಟವಾಗಿ ರೂಪುಗೊಂಡವು.

ಗಾಂಧೀಜಿಯವರು ಒಬ್ಬ ಆರ್ಥಿಕ ಮತ್ತು ಸಾಮಾಜಿಕ ಸುಧಾರಕರಾಗಿದ್ದರೆಂಬುದನ್ನು ಹಲವು ಚಾರಿತ್ರಿಕ ಆಧಾರಗಳಿಂದ ಕಂಡುಕೊಳ್ಳಬಹುದು. ಗಾಂಧೀಜಿಯವರು ಶಾಂತಿಪೂರ್ಣವಾದ ಮತ್ತು ಶೋಷಣಾರಹಿತವಾದ ಆರ್ಥಿಕ

ವ್ಯವಸ್ಥೆಯನ್ನು ಕಲ್ಪಿಸಿಕೊಂಡಿದ್ದರು. ಶ್ರೀಮಾನ್ ನಾರಾಯಣ್‌ರವರು ಅಭಿಪ್ರಾಯ ಪಟ್ಟಿರುವಂತೆ "ಗಾಂಧೀಜಿಯವರು ವಿಕೇಂದ್ರೀಕರಣಗೊಂಡ ಗೃಹಕೈಗಾರಿಕೆಗಳು ಬಂಡವಾಳಶಾಹಿಯಲ್ಲದ ಮತ್ತು ಸಹಕಾರದ ಒಂದು ತಳಹದಿಯ ಮೇಲೆ ಸಂಘಟನೆಗೊಳ್ಳಬೇಕು" ಎಂದು ಸೂಚಿಸಿದ್ದರು. ಗಾಂಧೀಜಿಯವರು ಚರಕದಿಂದ ನೂಲು ತೆಗೆಯುವುದಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು. ಕೈ ರಾಟೆಗಳಿಂದ ನೂಲುವ ಮೂಲಕ ಇಡೀ ಪ್ರಪಂಚದಲ್ಲೇ ಅತ್ಯಂತ ದೊಡ್ಡದಾದ ಸಹಕಾರ ಸಂಘವನ್ನು ಸ್ಥಾಪಿಸಲು ತಾವು ಪ್ರಯತ್ನಿಸುತ್ತಿರುವುದಾಗಿ ಗಾಂಧೀಜಿಯವರು ಆಗಾಗ್ಗೆ ತಿಳಿಸುತ್ತಿದ್ದರು. ನೂಲುವವರಲ್ಲಿ ಸಹಕಾರವಿಲ್ಲದೆ ಯಶಸ್ಸು ಸಾಧಿಸಲಾಗದು ಎಂದು ಅವರು ಅಭಿಪ್ರಾಯಪಟ್ಟಿದ್ದರು.

ಮೈಸೂರು ಸಂಸ್ಥಾನಕ್ಕೆ ಗಾಂಧೀಜಿಯವರು ಹಲವು ಬಾರಿ ಬಂದು ಹೋಗಿದ್ದರು. ಕ್ರಿ.ಶ. ೧೯೨೭ ಮತ್ತು ೧೯೩೪ರಲ್ಲಿ ಭೇಟಿ ನೀಡಿದ್ದಾಗ ಮೈಸೂರಿನಲ್ಲಿ ಈಗಿರುವ ವಾಣಿಜ್ಯ ತೆರಿಗೆ ಕಟ್ಟಡದಲ್ಲಿ ವಾಸ್ತವ್ಯ ಹೂಡಿದ್ದರು. ಅಲ್ಲಿಯೇ ಭಜನೆ, ಪ್ರಾರ್ಥನೆ, ಚರಕದಲ್ಲಿ ನೂಲುತ್ತಿದ್ದರು. ಗಾಂಧೀಜಿಯವರು ಟೌನ್‌ಹಾಲ್‌ನಲ್ಲಿ ಬಹಿರಂಗ ಸಭೆ ನಡೆಸಿದರು. ಗಾಂಧೀಜಿ ಹೋರಾಟಕ್ಕೆ ಅಂದಿನ ಕೆ. ಆರ್. ಮಿಲ್ ಕಾರ್ಮಿಕರು, ಆನಂದಭವನ ಹೋಟೆಲ್ ಕಾರ್ಮಿಕರು ಹಾಗೂ ನೂರಾರು ಮಹಿಳೆಯರು ಬೆಂಬಲ ವ್ಯಕ್ತಪಡಿಸಿದ್ದರು. ಇದೇ ಸಂದರ್ಭದಲ್ಲಿ ಕೃಷ್ಣರಾಜೇಂದ್ರ ಬಟ್ಟೆ ಗಿರಣಿಯನ್ನು ಗಾಂಧೀಜಿಯವರು ಉದ್ಘಾಟಿಸಿದರು.

ಭಾರತ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರವಹಿಸಿದ ಗಾಂಧಿಯವರು ವಿವಿಧ ಸಂದರ್ಭ ಹಾಗೂ ಕಾಲಘಟ್ಟಗಳಲ್ಲಿ ಭಾರತದ ನಾನಾ ಪ್ರದೇಶಗಳಿಗೆ ಪ್ರವಾಸ ಕೈಗೊಂಡಿದ್ದನ್ನು ಇತಿಹಾಸದಲ್ಲಿ ನಾವು ಗುರುತಿಸಬಹುದು. ಹಾಗೆಯೇ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ಭಾಗಗಳಿಗೆ ಹಲವು ವಿಶೇಷ ಸಂದರ್ಭಗಳಲ್ಲಿ ಭೇಟಿ ನೀಡಿದ ಗಾಂಧಿಯವರು ಸ್ವಾತಂತ್ರ್ಯ ಹೋರಾಟದ ಜೊತೆಜೊತೆಗೆ ಎಂದಿನಂತೆ ತಮ್ಮ ಖಾದಿ ಪ್ರಚಾರ, ಗ್ರಾಮೋದ್ಧಾರ, ಹಿಂದೂ–ಮುಸ್ಲಿಂ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ, ದೀನ–ದಲಿತರ ಉದ್ಧಾರ ಮುಂತಾದ ಹಲವು ರಚನಾತ್ಮಕ ಕಾರ್ಯಕ್ರಮಗಳ ಪ್ರಚಾರ ಮತ್ತು ಅನುಷ್ಠಾನವನ್ನು ಕೈಗೊಂಡರು. ಅವುಗಳಲ್ಲಿ ಕ್ರಿ. ಶ. ೧೯೨೪ ರಲ್ಲಿ ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಮಹಾ ಅಧಿವೇಶನದಲ್ಲಿ ಪಾಲ್ಗೊಂಡು ಅಧ್ಯಕ್ಷತೆ ವಹಿಸಿದ್ದು ಹಾಗೂ ಕ್ರಿ. ಶ. ೧೯೨೭ ರಲ್ಲಿ ಮೈಸೂರು ಸಂಸ್ಥಾನದಾದ್ಯಂತ ಕೈಗೊಂಡ ಪ್ರವಾಸಗಳು ಕರ್ನಾಟಕದ ಇತಿಹಾಸದಲ್ಲಿ ಬಹಳ ಪ್ರಮುಖವಾದ ಘಟನೆಗಳಾಗಿವೆ.

ಗಾಂಧೀಜಿಯವರು ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭಗಳಲ್ಲಿ ಅಂದಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಸುಪ್ರಸಿದ್ಧ ದಿವಾನರುಗಳಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ಮೊದಲಾದವರು ಈಗಾಗಲೇ ಅನೇಕ ಜನಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಂಸ್ಥಾನವನ್ನು ಪ್ರಗತಿಪಥದತ್ತ ಕೊಂಡೊಯ್ಯುತ್ತಿದ್ದರು. ಇದನ್ನು ಖುದ್ದು ಕಂಡ ಗಾಂಧೀಜಿಯವರು ಅಪಾರ ಸಂತೋಷ ತೃಪ್ತಿಗಳನ್ನು ವ್ಯಕ್ತಪಡಿಸಿದರಲ್ಲದೆ, ತಮ್ಮ ತುಂಬು ಹೃದಯದ ಬೆಂಬಲವನ್ನು ಸಹ ನೀಡಿದರು. ಇದರಿಂದ ಮತ್ತಷ್ಟು ಪುಳಕಿತಗೊಂಡ ಮೈಸೂರು ಸಂಸ್ಥಾನದ ಆಳುವ ಮಹಾಸ್ವಾಮಿಗಳು, ಅಧಿಕಾರ ವರ್ಗದವರು ಹಾಗೂ ವಿವಿಧ ಜನನಾಯಕರು ಗಾಂಧೀಜಿಯವರ ತತ್ವಾದರ್ಶಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸಿ, ಮೈಸೂರು ಸಂಸ್ಥಾನದಾದ್ಯಂತ ಅಸ್ಪೃಶ್ಯತಾ ನಿವಾರಣೆ, ಖಾದಿ ಕೇಂದ್ರ ಸ್ಥಾಪನೆ ಮತ್ತು ಪ್ರಚಾರ, ಸ್ವದೇಶೀ ವಸ್ತುಗಳ ಬಳಕೆ, ದೀನದಲಿತೋದ್ಧಾರ ಮುಂತಾದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಅಂತಹ ಕಾರ್ಯಕ್ರಮಗಳಲ್ಲಿ ಗಾಂಧೀಜಿಯವರು ಭೇಟಿ ನೀಡಿದ್ದ ಈಗ ನಂಜನಗೂಡು ತಾಲ್ಲೂಕಿನಲ್ಲಿರುವ ಬದನವಾಳು ಎಂಬ ಗ್ರಾಮದಲ್ಲಿ ಸ್ಥಾಪನೆಯಾದ ಖಾದಿ ಕೇಂದ್ರವು ಕರ್ನಾಟಕದ ಇತಿಹಾಸದಲ್ಲಿ ಬಹಳ ಪ್ರಸಿದ್ಧವಾಗಿದೆ. ಗಾಂಧೀಜಿಯವರ ಕರೆಗೆ ಓಗೊಟ್ಟ ಮೈಸೂರು ಸಂಸ್ಥಾನವು ಬದನವಾಳು ಗ್ರಾಮದಲ್ಲಿ ಖಾದಿ ಕೇಂದ್ರವನ್ನು ತೆರೆಯುವುದರ ಮೂಲಕ ಗ್ರಾಮೀಣ ಜನರಲ್ಲಿ ಅದರಲ್ಲೂ ವಿಶೇಷವಾಗಿ ನಿಮ್ನ ವರ್ಗದ ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನಮಟ್ಟವನ್ನು ಹೇಗೆ ಸುಧಾರಿಸಿದರೆಂಬುದು ಚಾರಿತ್ರಿಕವಾಗಿ ಬಹಳ ಗಮನಾರ್ಹ ಸಂಗತಿಯಾಗಿದೆ. ಈ ವಿಷಯವನ್ನು ಪ್ರಧಾನ ಹಾಗೂ ಕೇಂದ್ರ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡು ಪ್ರಸ್ತುತ ಸಂಶೋಧನಾ ಲೇಖನವನ್ನು ಸಿದ್ಧಪಡಿಸಲಾಗಿದೆ.

ಭಾರತದ ಆರ್ಥಿಕತೆ

ಗಾಂಧೀಜಿಯವರ ಚಿಂತನೆ ಎಷ್ಟು ಸಹಜವಾಗಿದೆ ಎನ್ನುವುದನ್ನು ನೋಡಬೇಕಾದರೆ ನಮ್ಮ ಭಾರತದ ಆರ್ಥಿಕ ಸಮಸ್ಯೆಗಳನ್ನು ಕುರಿತು ದೀರ್ಘ ಆಲೋಚನೆ ಮಾಡಬೇಕಾಗಿದೆ. ಪಾಶ್ಚಾತ್ಯ ನಾಗರಿಕತೆಯ ಅನುಕರಣೆಯಿಂದ ಮನುಷ್ಯನು ಮತ್ತಷ್ಟು ಗುಲಾಮನಾಗುತ್ತಾನೆ, ಬಡವನಾಗುತ್ತಾನೆ ಎಂದು ಹಿಂದ್ ಸ್ವರಾಜ್ ಗ್ರಂಥದಲ್ಲಿ ಅವರು ಹೇಳಿದ್ದಾರೆ. ಮನುಷ್ಯನ ಮನಸ್ಸು ಅವಿಶ್ರಾಂತ ಪಕ್ಷಿಯಂತೆ. ಇನ್ನಷ್ಟು ಬೇಕು ಎಂಬುದೇ ಅವನ ಧ್ಯಾನ. ಯಾವಾಗಲೂ ಅತೃಪ್ತಿ. ನಮ್ಮ ಇಂದ್ರೀಯ ವೃತ್ತಿರಾಗ ಹೆಚ್ಚಿದಂತೆಲ್ಲಾ ಅದರ ಸಾಧನೆಗಾಗಿ ಹಿಂಸಾತ್ಮಕ, ಅನೈತಿಕ ವ್ಯವಹಾರಗಳನ್ನು

ಮಾಡಬೇಕಾಗುತ್ತದೆ. ನಮ್ಮ ಪೂರ್ವಜರು ಇಂದ್ರಿಯ ವ್ಯಕ್ತಿಗಳಿಗೆ ಕಡಿವಾಣ ಹಾಕಬೇಕೆಂದು ಹೇಳಿ ಆಸೆಗೆ ಒಂದು ಮಿತಿಯನ್ನು ಸೂಚಿಸಿದರು. ಯಾವುದೇ ಗಳಿಕೆ ಅಧರ್ಮವಾಗಿರಬಾರದು ಮುಖ್ಯವಾದ ಈ ಕಡಿವಾಣ.

ಕೈಗಾರಿಕೀಕರಣ

ಗಾಂಧೀಜಿಯವರು ಆಧುನಿಕ ರೀತಿಯ ಕೈಗಾರೀಕೋದ್ಯಮಗಳನ್ನು ಪ್ರಬಲವಾಗಿ ವಿರೋಧಿಸಿ ಮನುಷ್ಯನನ್ನು ಗುಲಾಮನನ್ನಾಗಿ ಮಾಡುವ ಯಾಂತ್ರೀಕರಣ ಮಹಾ ಪಾಪ, ಇಂತಹ ಬೆಳೆವಣಿಗೆ ಮನುಷ್ಯನ ನೈತಿಕ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ, ಭಾರತಕ್ಕೆ ಇಂಥ ಕೈಗಾರಿಕೀಕರಣದ ಅವಶ್ಯಕತೆ ಇಲ್ಲ ಎಂದು ಹೇಳಿ, ಅತ್ಯಾಧುನಿಕ ಭೌತಿಕ ಸುಖಕ್ಕೆ ಅಥವಾ ಭೋಗಕ್ಕೆ ಪ್ರೇರಕವಾಗುವ ವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳನ್ನು ವಿರೋಧಿಸಿದರೇ ವಿನಾ ಎಲ್ಲಾ ಕೈಗಾರಿಕೆಗಳನ್ನು ವಿರೋಧಿಸಲಿಲ್ಲ.

ಮೈಸೂರು ಸಂಸ್ಥಾನಕ್ಕೆ ಗಾಂಧಿಯವರ ಆಗಮನ ಕೇವಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮಾತ್ರವಲ್ಲದೆ ಸಂಸ್ಥಾನದ ಪ್ರಗತಿ ಮತ್ತು ಆಡಳಿತಗಳಿಗೆ ಒಂದು ಹೊಸ ಚೈತನ್ಯ ಹಾಗೂ ಶಕ್ತಿಯನ್ನು ನೀಡಿತು. ಮೈಸೂರು ಸಂಸ್ಥಾನದ, ನಂಜನಗೂಡು ಸೀಮೆಯ ಬದನವಾಳು ಹಾಗೂ ತಗಡೂರು ಗ್ರಾಮಗಳು ಗಾಂಧಿಯವರ ಭೇಟಿಯ ಫಲವಾಗಿ ಭಾರತದ ಚಾರಿತ್ರಿಕ ಭೂಪಟದಲ್ಲಿ ಪ್ರಮುಖವಾಗಿ ಗುರುತಿಸಲ್ಪಡುವಂತಾದವು. ಕ್ರಿ. ಶ. ೧೯೨೭ ಹಾಗೂ ೧೯೩೬ ರಲ್ಲಿ ತಗಡೂರು ಹಾಗೂ ಬದನವಾಳು ಗ್ರಾಮಗಳಿಗೆ ಭೇಟಿ ನೀಡಿದ ಗಾಂಧಿ, ಇಲ್ಲಿ ಖಾದಿಬಟ್ಟೆ ಉತ್ಪಾದಿಸುವುದನ್ನು ನೋಡಿ ತಮ್ಮ ಮೆಚ್ಚುಗೆ ಸೂಚಿಸಿದರಲ್ಲದೆ ನಾಲ್ವಡಿ ಹಾಗೂ ದಿವಾನರುಗಳಿಗೆ ಗೌರವ ಸಲ್ಲಿಸಿದರು. ಇದಕ್ಕೆ ನಿದರ್ಶನವಾಗಿ ಬದನವಾಳು ಖಾದಿ ಗ್ರಾಮೋದ್ಯೋಗ ಸಂಘವು ಇಂದಿಗೂ ಖಾದಿ ಬಟ್ಟೆ ತಯಾರಿಕೆಯನ್ನು ಮುಂದುವರಿಸಿಕೊಂಡು ಬಂದಿದೆ. ಖಾದಿ ಮತ್ತು ಗ್ರಾಮೋದ್ಯೋಗ ಅಭಿವೃದ್ಧಿಯ ಕನಸನ್ನು ಕಂಡಿದ್ದ ಗಾಂಧೀಜಿ ಅವರು ತಮ್ಮ ಕೊನೆ ಉಸಿರು ಇರುವ ತನಕ ಅದಕ್ಕಾಗಿ ಶ್ರಮಿಸಿದರು. ಖಾದಿಬಟ್ಟೆ ತಯಾರಿಕೆ, ಚರಕದಿಂದ ನೂಲುವುದು, ಗ್ರಾಮೀಣ ಅಭಿವೃದ್ಧಿ, ಹರಿಜನೋದ್ಧಾರ, ಅಸ್ಪೃಶ್ಯತಾ ನಿವಾರಣೆ ಮೊದಲಾದವುಗಳಿಗೆ ಗಾಂಧಿಯವರು ಸ್ವಾತಂತ್ರ್ಯ ಸಂಗ್ರಾಮದಷ್ಟೇ ಮಹತ್ವ ನೀಡಿದ್ದರು. ಗುಡಿ ಅಥವಾ ಗ್ರಾಮೀಣ ಕೈಗಾರಿಕೆಗಳಿಂದ ಮಾತ್ರ ಗ್ರಾಮಗಳು ಆರ್ಥಿಕವಾಗಿ ಮುಂದುವರೆಯಲು ಸಾಧ್ಯ ಎಂದು ಅವರು ನಂಬಿದ್ದರು.

ಗಾಂಧಿಯವರು ಬದನವಾಳು ಗ್ರಾಮಕ್ಕೆ ಭೇಟಿ ನೀಡಿದ್ದ ನೆನಪಿಗಾಗಿ ಅಲ್ಲಿ ಖಾದಿ ನೂಲುವ ಘಟಕ ಸ್ಥಾಪಿಸಲಾಯಿತು. ಇದಕ್ಕೂ ಮುಂಚೆ ಖಾದಿ, ರೇಷ್ಮೆ,

ಕೈಕಾಗದ ಘಟಕ, ಎಣ್ಣೆ, ಕೊಟ್ಟಣದ ಅಕ್ಕಿ (ಅವಲಕ್ಕಿ) ಮುಂತಾದ ಘಟಕಗಳು ಕಾರ್ಯಾಚರಿಸುತ್ತಾ ಸುಮಾರು ೪೦೦ ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಆದರೆ ಆಧುನಿಕ ಕೈಗಾರಿಕೀಕರಣ ಹಾಗೂ ಇತರೇ ಬೃಹತ್ ಉದ್ಯಮಗಳ ಪೈಪೋಟಿಯಿಂದಾಗಿ ಈ ಎಲ್ಲಾ ಘಟಕಗಳು ಕ್ರಮೇಣ ಉತ್ಪಾದನೆ ನಿಲ್ಲಿಸಿದವು.

ಸದ್ಯ ವರ್ತಮಾನದಲ್ಲಿ ೬.೧೮ ಎಕರೆ ಪ್ರದೇಶದಲ್ಲಿ ೮ ಕಟ್ಟಡಗಳಿವೆ. ೩ ಕಟ್ಟಡಗಳಲ್ಲಿ ಒಟ್ಟು ೬೫ ಕದಿರಿನಿ (ಸ್ಪಿಲಿಂಡರ್) ಚರಕಗಳಿವೆ. ಪ್ರತಿ ೧ ಕದಿರಿನಿಂದ ತಿಂಗಳೊಂದಕ್ಕೆ ೯೦೦ ಲೆಡಿ (ನೂಲಿನ ಮಾಪನ) ನೂಲನ್ನು ನೂಲಲಾಗುತ್ತಿದೆ. ಹೀಗೆ ಒಟ್ಟು ೬೫ ಚರಕಗಳಿಂದ ೫೮, ೫೦೦ ಲೆಡಿಗಳಷ್ಟು ನೂಲನ್ನು ಉತ್ಪಾದಿಸಲಾಗುತ್ತಿದ್ದು, ಒಟ್ಟು ೭ ಕೈಮಗ್ಗಗಳು ಕಾರ್ಯನಿರ್ವಹಿಸುತ್ತಿವೆ. ಎಲ್ಲಾ ಚರಕ ಹಾಗೂ ಕೈಮಗ್ಗಗಳಲ್ಲಿ ಮಹಿಳೆಯರೇ ಕಾರ್ಯನಿರ್ವಹಿಸುತ್ತಿರುವುದು ಇಲ್ಲಿಯ ವಿಶೇಷ.

ಹೀಗೆ ಗಾಂಧೀಜಿಯವರು ಮೈಸೂರು ಪ್ರಾಂತ್ಯಕ್ಕೆ ವಿಶೇಷವಾಗಿ ನಂಜನಗೂಡು ತಾಲ್ಲೂಕಿನ ತಗಡೂರು ಹಾಗೂ ಬದನವಾಳು ಗ್ರಾಮಗಳಿಗೆ ಭೇಟ ನೀಡಿದುದು ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ಒಂದು ವಿಶಿಷ್ಟ ಅಧ್ಯಯನವಾಗಿದೆ. ಇದರಿಂದ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಾವು ತೀವ್ರಗೊಂಡಿತ್ತಲ್ಲದೆ, ತಗಡೂರು ರಾಮಚಂದ್ರರಾಯ, ಎಚ್. ಸಿ. ದಾಸಪ್ಪ, ತುಳಸೀದಾಸ್ ದಾಸಪ್ಪ, ಯಶೋಧರಾದಾಸಪ್ಪ ಮೊದಲಾದ ಕಾಂಗ್ರೆಸ್ ನಾಯಕರು ಅಪ್ಪಟ ಗಾಂಧೀವಾದಿಗಳಾಗಿ ಅಸ್ಪೃಶ್ಯತಾ ಆಚರಣೆಯ ನಿಷೇಧ, ಹರಿಜನೋದ್ಧಾರ, ಸ್ತ್ರೀಯರ ಅಭಿವೃದ್ಧಿ, ಗ್ರಾಮೀಣ ಕೈಗಾರಿಕೆಗಳ ಪ್ರಗತಿ ಮೊದಲಾದ ಸಾಮಾಜಿಕ ಹಾಗೂ ಆರ್ಥಿಕ ಕಾರ್ಯಚಟುವಟಿಕೆಗಳನ್ನು ಜೊತೆಜೊತೆಯಾಗಿ ಕೈಗೊಂಡರು. ಇದಕ್ಕೆ ಪೂರಕವಾಗಿ ಅಂದಿನ ಮೈಸೂರು ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಶ್ರೇಷ್ಠ ದಿವಾನರುಗಳಾದ ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಮೊದಲಾದವರು ತಮ್ಮ ರಾಜ್ಯಾಡಳಿತ ನೀತಿಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಜಾರಿಗೊಳಿಸಿ, ತನ್ಮೂಲಕ ಗಾಂಧಿಯವರ ಸಂದೇಶಗಳನ್ನು ನಾಡಿನಾದ್ಯಂತ ಪ್ರಸಾರಗೊಳಿಸಿದರಲ್ಲದೆ, ಜನಸಾಮಾನ್ಯರ ಕಲ್ಯಾಣ ಕ್ರಮಗಳನ್ನು ಯಶಸ್ವಿಯಾಗಿ ಕೈಗೊಂಡರು. ಆದುದರಿಂದ ಆಧುನಿಕ ಕಾಲದಲ್ಲಿ ವಿಶೇಷವಾಗಿ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ಗಾಂಧಿಯವರ ನಂಜನಗೂಡು ತಾಲ್ಲೂಕಿನ ಭೇಟಿಯು ಒಂದು ವಿಶೇಷ ಕೊಡುಗೆ ಎನ್ನಬಹುದು ಮತ್ತು ಗಾಂಧಿಯವರ ಭೇಟಿಯು ಕರ್ನಾಟಕದ ಪ್ರಮುಖವಾಗಿ ಮೈಸೂರು ಸಂಸ್ಥಾನದ ಸಾಮಾಜಿಕ ಬದಲಾವಣೆ ಹಾಗೂ ಆರ್ಥಿಕಾಭಿವೃದ್ಧಿಯ ಹಿನ್ನೆಲೆಯಲ್ಲಿ ಅಪರೂಪದ ಸಾಧನೆ ಎನ್ನಬಹುದು.

ಒಟ್ಟಾರೆ ಪ್ರಸ್ತುತ ಭಾರತದ ಸಂದರ್ಭದಲ್ಲಿ ಗಾಂಧೀಜಿಯವರ ಆರ್ಥಿಕ ಸಿದ್ಧಾಂತಗಳು, ರಾಜಕೀಯ ಚಿಂತನೆಗಳು, ಸಾಮಾಜಿಕ ಸುಧಾರಣೆಗಳು ಹಿಂದೆಂದಿಗಿಂತಲೂ ಇಂದು ಅತ್ಯಂತ ಪ್ರಸ್ತುತವೆನಿಸಿವೆ. ಏಕೆಂದರೆ ಮುಕ್ತ ಆರ್ಥಿಕ ನೀತಿಗಳು ಈಗಾಗಲೇ ಸಾಮಾನ್ಯರ ಮೇಲೆ ಕೆಟ್ಟ ಪರಿಣಾಮ ಬೀರಲಾರಂಭಿಸಿವೆ. ಆರ್ಥಿಕ ಅಸಮಾನತೆ ಸಾಮಾಜಿಕ ಅಸಮತೋಲನಗಳಿಗೆ ಆಸ್ಪದ ನೀಡಿದೆ. ಇಂತಹ ಪರಿಸ್ಥಿತಿಯಲ್ಲಿ ಗಾಂಧೀಜಿಯವರ ಚಿಂತನೆ ಮತ್ತು ಆದರ್ಶಗಳನ್ನು ನೆನೆಯಬೇಕಾಗಿರುವುದು ಭಾರತೀಯರೆಲ್ಲರ ಜವಾಬ್ದಾರಿಯಾಗಿದೆ.

ಆಧಾರಗ್ರಂಥಗಳು

೧. ಎಂ. ಕೆ. ಗಾಂಧಿ, ಅರ್ಥ ವಿಚಾರ, ಬೆಂಗಳೂರು, ೧೯೫೯.

೨. ಬಿ. ಆ. ಕೃಷ್ಣ, ಭಾರತದಲ್ಲಿ ಗ್ರಾಮೀಣಾಭಿವೃದ್ಧಿ, ಬೆಂಗಳೂರು, ೧೯೮೫.

೩. ಬಿ. ಆರ್. ಪ್ರಾಣೇಶರಾವ್, ಮಹಾತ್ಮಾ ಗಾಂಧಿ, ಮೈಸೂರು, ೧೯೯೮

೪. ಡಾ. ಎಸ್. ತಿಪ್ಪೇರುದ್ರಸ್ವಾಮಿ, ಮಹಾತ್ಮ, ಸಂಪುಟ-೨, ಮೈಸೂರು, ೧೯೬೪.

೫. ಬಿ. ಆರ್. ಪ್ರಾಣೇಶರಾವ್, ಗಾಂಧಿ ಚಿಂತನೆ, ಮೈಸೂರು, ೧೯೯೬

೬ Karnataka, Khadi & Village Industries Board, Bangalore, Annual Reports, 1995-2005.

೭. Khadi & Village Industries Commission, Bombay, Annual Reports, 1995-2005.

೮. Radhakrishna B.G., Gandhian thought and Rural Economy, Mysore, 1989.

❑

ಸಂಚಿಕೆಯ ಬರಹಗಾರರು

ಡಾ. ಧನ್ಯಕುಮಾರ ಬ. ಜಾಧವ
ಅತಿಥಿ ಉಪನ್ಯಾಸಕರು
ಜೈನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಎನ್.ಎನ್. ಚಿಕ್ಕಮಾದಯ್ಯ
ನಂ. ೪೪೩
ನೆಹರು ಪಾರ್ಕ್ ಹತ್ತಿರ
ಉದಯಗಿರಿ ಮೈಸೂರು - ೫೭೦ ೦೧೯

ಡಾ. ನಿರಂಜನ ವಾನಳ್ಳಿ
ಪ್ರವಾಚಕರು
ಪತ್ರಿಕೋದ್ಯಮ ಹಾಗೂ ಸಂವಹನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಎಸ್.ಜಿ. ರಾಮದಾಸ ರೆಡ್ಡಿ
ಹಿರಿಯ ಶ್ರೇಣಿ ಇತಿಹಾಸ ಉಪನ್ಯಾಸಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಪಾಂಡವಪುರ, ಮಂಡ್ಯ ಜಿಲ್ಲೆ

ಜೆ. ಲೋಹಿತ್
ಅತಿಥಿ ಉಪನ್ಯಾಸಕರು
ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ
ಮಹಾರಾಜ ಕಾಲೇಜು, ಮೈಸೂರು - ೫೭೦ ೦೦೬

ಡಾ. ಎಂ.ಪಿ. ರಮೇಶ
ಅಧ್ಯಾಪಕರು
ತತ್ವಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಡಾ. ಎಸ್. ವೆಂಕಟೇಶ್
ರೀಡರ್
ತತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಡಾ. ವಿ.ಎನ್. ಶೇಷಗಿರಿರಾವ್
ಪ್ರಾಧ್ಯಾಪಕರು
ತತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ
ಮೈಸೂರು – ೫೭೦೦೦೬

ಮಲ್ಲಿಕಾರ್ಜುನ ಸ್ವಾಮಿ ಎಚ್.ಎಂ.
ಸಂಶೋಧಕರು
ತತ್ವಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಹನುಮಂತರಾಜು ಎಂ.ಜಿ.
ರಾಜ್ಯಶಾಸ್ತ್ರ ಅಧ್ಯಾಪಕರು
ಮಹಾರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫

ಆರ್. ಸಿದ್ಧರಾಜು
ಸಹಕಾರ ಅಧ್ಯಾಪಕರು
ಮಹಾರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫

ಕೆ.ಸಂ. ೭೫೦–ಎಂಯುಪಿಪಿ–೩೦೦ ಪ್ರತಿಗಳು–೦೪–೦೧–೨೦೧೧